
ಶನಿವಾರ, ಮೇ 22, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 142 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	₹/$
50,540 ▲	15,175 ▲	72.83 ▲

ಜೂನ್ 7ರವರೆಗೆ ಕಠಿಣ ನಿಯಮ ಮುಂದುವರಿಕೆ • ಬೆಳಿಗ್ಗೆ 9.45ರ ಬಳಿಕ ಹೊರಬಂದರೆ ಕ್ರಮ

ಮತ್ತೆ 14 ದಿನ ಲಾಕ್‌ಡೌನ್ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 24 ಕ್ಕೆ ಕೊನೆಗೊಳ್ಳಬೇಕಾಗಿದ್ದ ಲಾಕ್‌ಡೌನ್ ಅನ್ನು ಜೂನ್ 7 ರವರೆಗೆ ವಿಸ್ತರಿಸಲಾಗಿದ್ದು, ಈಗ ಜಾರಿಯಲ್ಲಿರುವ ಕಠಿಣ ನಿಯಮಗಳೇ ಮುಂದುವರಿಯಲಿವೆ.

ಕೋವಿಡ್ ನಿಯಂತ್ರಣಕ್ಕೆ ತರಲು ಲಾಕ್‌ಡೌನ್ ಮುಂದುವರಿಸುವುದು ಸೂಕ್ತ ಎಂದು ತಜ್ಞರ ಸಮಿತಿ ಸಲಹೆ ನೀಡಿತ್ತು. ಈ ಬೆನ್ನಲ್ಲೇ, ಶುಕ್ರವಾರ ಸಂಜೆ ಸಚಿವರ ಜತೆ ಸಭೆ ನಡೆಸಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಈ ತೀರ್ಮಾನ ತೆಗೆದುಕೊಂಡಿದ್ದಾರೆ.

ಈಗಿರುವುದಕ್ಕಿಂತ ಇನ್ನಷ್ಟು ಬಿಗಿ ನಿಯಮಗಳನ್ನು ಜಾರಿ ಮಾಡುವುದಾಗಿ ಗೃಹ ಸಚಿವ ಬಸವರಾಜ ಬೊಮ್ಮಾಯಿ ಮತ್ತು ಕಂದಾಯ ಸಚಿವ ಆರ್. ಅಶೋಕ ಗುರುವಾರ ಹೇಳಿದ್ದರು. ಆದರೆ ಹೊಸದಾಗಿ ಯಾವುದೇ ಕಠಿಣ ನಿಯಮಗಳನ್ನು ಜಾರಿ ಮಾಡುವ ಬಗ್ಗೆ ಸಭೆಯಲ್ಲಿ ನಿರ್ಧಾರ ತೆಗೆದುಕೊಂಡಿಲ್ಲ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಯಡಿಯೂರಪ್ಪ, 'ಹಳ್ಳಿ ಹಳ್ಳಿಗೂ ಕೋವಿಡ್ ವಿಸ್ತರಿಸುತ್ತಿದ್ದು, ಸಾವಿನ ಸಂಖ್ಯೆಯೂ ಹೆಚ್ಚಾಗುತ್ತಿದೆ. ಇದನ್ನು ತಡೆಯಲು ಕಠಿಣ ನಿಯಮಗಳನ್ನು (ಲಾಕ್‌ಡೌನ್) 14 ದಿನಗಳ ಕಾಲ ಮುಂದುವರಿಸಲಾಗುವುದು. ಸಾರ್ವಜನಿಕರು ಇದಕ್ಕೆ ಸಹಕರಿಸಬೇಕು' ಎಂದು ಮನವಿ ಮಾಡಿದರು.

10ನೇ ಪುಟ ನೋಡಿ

ಅಂತರಜಿಲ್ಲಾ ಓಡಾಟಕ್ಕೆ ಅವಕಾಶ

ಅಂತರರಾಜ್ಯ ಮತ್ತು ಅಂತರಜಿಲ್ಲಾ ಓಡಾಟಕ್ಕೆ ಷರತ್ತುಬದ್ಧ ಅವಕಾಶ ನೀಡಲಾಗಿದ್ದು, ಅನುಮತಿ ಪಡೆದವರು ಪ್ರಯಾಣಿಸಬಹುದು. ಖಾಲಿ ಸರಕು ವಾಹನಗಳು ಹಾಗೂ ಸರಕು ಸಾಗಣೆಕೆ ವಾಹನಗಳ ಸಂಚಾರಕ್ಕೂ ಯಾವುದೇ ನಿರ್ಬಂಧವಿಲ್ಲ ಎಂದು ಮಾರ್ಗಸೂಚಿ ಹೇಳಿದೆ.

ಡಿ.ಸಿ.ಗಳಿಗೆ ಪರಮಾಧಿಕಾರ

ಆಯಾ ಜಿಲ್ಲೆಗಳಲ್ಲಿ ಕಠಿಣ ನಿರ್ಬಂಧ ಜಾರಿಗೊಳಿಸುವ ಸಂಪೂರ್ಣ ಅಧಿಕಾರ ವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ.'ಜಿಲ್ಲೆಗಳಲ್ಲಿ ಪರಿಸ್ಥಿತಿ ನೋಡಿಕೊಂಡು ಜಿಲ್ಲಾಧಿಕಾರಿಗಳು ಜಿಲ್ಲಾ ಉಸ್ತುವಾರಿ ಸಚಿವರ ಜತೆ ಚರ್ಚಿಸಿ ಹೆಚ್ಚುವರಿ ಕಠಿಣ ನಿಯಮಗಳನ್ನು ಜಾರಿಗೊಳಿಸಬಹುದು' ಎಂದು ಶುಕ್ರವಾರ ಹೊರಡಿಸಿದ ಪರಿಷ್ಕೃತ ಮಾರ್ಗಸೂಚಿಯಲ್ಲಿ ಉಲ್ಲೇಖಿಸಲಾಗಿದೆ.

ಕಪ್ಪುಶಿಲೀಂಧ್ರ: ಬಡವರಿಗೆ ಉಚಿತ ಚಿಕಿತ್ಸೆ

ಕಪ್ಪು ಶಿಲೀಂಧ್ರ ಸೋಂಕಿನಿಂದ ಬಳಲುತ್ತಿರುವವರಿಗೆ ರಾಜ್ಯದ ಎಲ್ಲ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲು ತೀರ್ಮಾನಿಸಲಾಗಿದೆ ಎಂದು ಯಡಿಯೂರಪ್ಪ ತಿಳಿಸಿದರು. ಇದರ ಚಿಕಿತ್ಸೆಗೆ ಹೆಚ್ಚು ಹಣ ಬೇಕಾಗುತ್ತದೆ. ಬಡವರಿಗೆ ಅದನ್ನು ಭರಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅವರಿಗೆ ಉಚಿತ ಚಿಕಿತ್ಸೆ ನೀಡಲಾಗುವುದು ಎಂದರು.

ಕರ್ಫ್ಯೂ, ಲಾಕ್‌ಡೌನ್ ಅವಧಿಯಲ್ಲಿ ಕೋವಿಡ್ ಪ್ರಕರಣ ಏರಿಕೆ

ದಿನಾಂಕ	ಪರೀಕ್ಷೆ	ಹೊಸ ಪ್ರಕರಣ	ಒಟ್ಟು ಪ್ರಕರಣ	ಮರಣ ಪ್ರಕರಣ	ಒಟ್ಟು ಮರಣ
ಏ.10	98,790	6,955	10.55 ಲಕ್ಷ	36	12,849
ಏ.20	1.47 ಲಕ್ಷ	21,794	11.98 ಲಕ್ಷ	149	13,646
ಏ.30	1.89 ಲಕ್ಷ	48,296	15.23 ಲಕ್ಷ	217	15,523
ಮೇ 10	1.24 ಲಕ್ಷ	39,305	19.73 ಲಕ್ಷ	596	19,372
ಮೇ 21	1.33 ಲಕ್ಷ	32,218	23.67 ಲಕ್ಷ	353	24,207

ಲಾಕ್‌ಡೌನ್: 12 ದಿನಗಳಲ್ಲಿ 4.33 ಲಕ್ಷ ಪ್ರಕರಣ

ಬೆಂಗಳೂರು: ಕೋವಿಡ್ ಎರಡನೇ ಅಲೆ ನಿಯಂತ್ರಣ ಸಂಬಂಧ ರಾಜ್ಯ ಸರ್ಕಾರವು ಪೂರ್ಣ ಪ್ರಮಾಣದ ಲಾಕ್‌ಡೌನ್ ಜಾರಿ ಮಾಡಿದ ಮೇ 10ರ ನಂತರದ 12 ದಿನಗಳಲ್ಲಿ 4.33 ಲಕ್ಷ ಕೋವಿಡ್ ಪ್ರಕರಣಗಳು ವರದಿಯಾಗಿವೆ.

ಪ್ರತಿನಿತ್ಯ ಸರಾಸರಿ 39,396 ಪ್ರಕರಣಗಳು ದೃಢಪಟ್ಟಿವೆ. ಲಾಕ್‌ಡೌನ್ ಪೂರ್ವದಲ್ಲಿ ದಿನವೊಂದಕ್ಕೆ 1.89 ಲಕ್ಷದವರೆಗೂ ಪರೀಕ್ಷೆ ಮಾಡಲಾಗಿತ್ತು. ಇದರಿಂದಾಗಿ ಹೊಸ ಪ್ರಕರಣಗಳ ಸಂಖ್ಯೆ 50 ಸಾವಿರದ ಗಡಿಯ ಆಸುಪಾಸಿಗೆ ಏರಿಕೆ ಕಂಡಿತ್ತು. ಲಾಕ್‌ಡೌನ್ ಜಾರಿ ಮಾಡಿದ ಬಳಿಕ ಪರೀಕ್ಷೆಗಳ ಸಂಖ್ಯೆ 97 ಸಾವಿರಕ್ಕೆ ಇಳಿಕೆ ಕಂಡು, ಈಗ ಮತ್ತೆ 1.30 ಲಕ್ಷಕ್ಕೆ ಏರಿಕೆಯಾಗಿದೆ. ಈ ಅವಧಿಯಲ್ಲಿ ಸೋಂಕಿನ ತೀವ್ರತೆಗೆ 5,431 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ.

10ನೇ ಪುಟ ನೋಡಿ



ಔಷಧಿಗೆ ಮುಗಿಬಿದ್ದ ಜನ ಆಂಧ್ರ ಪ್ರದೇಶದ ನೆಲ್ಲೂರಿನ ಕೃಷ್ಣಪಟ್ಟಣಂನಲ್ಲಿ 'ಕೋವಿಡ್ ಆಯುರ್ವೇದ ಔಷಧಿ'ಗಾಗಿ ಸಾವಿರಾರು ಜನರು ಶುಕ್ರವಾರ ಅಂತರ ಮರೆತು ಗುಂಪುಗೂಡಿ ನಿಂತಿದ್ದರು –ಪಿಟಿಐ ಚಿತ್ರ

ಸುದ್ದಿ 11

ಕೇಂದ್ರಕ್ಕೆ ₹ 99,122 ಕೋಟಿ ಲಾಭಾಂಶ: ಆರ್‌ಬಿಐ ನಿರ್ಧಾರ

ಮುಂಬೈ (ಪಿಟಿಐ): ಕೇಂದ್ರ ಸರ್ಕಾರಕ್ಕೆ ಲಾಭಾಂಶದ ರೂಪದಲ್ಲಿ ₹ 99,122 ಕೋಟಿ ಮೊತ್ತವನ್ನು ವರ್ಗಾಯಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ನಿರ್ಧರಿಸಿದೆ. ಇದರಿಂದಾಗಿ, ಕೋವಿಡ್–19 ಸಾಂಕ್ರಾಮಿಕವನ್ನು ನಿಯಂತ್ರಿಸಲು ಕೇಂದ್ರ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳಿಗೆ ಒಂದಿಷ್ಟು ನೆರವಾಗಲಿದೆ.



ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ನೇತೃತ್ವದಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆದ ಸಭೆಯಲ್ಲಿ, 2021ರ ಮಾರ್ಚ್ 31ಕ್ಕೆ ಕೊನೆಗೊಂಡ ಒಂಭತ್ತು ತಿಂಗಳ ಲೆಕ್ಕಪತ್ರ ಅವಧಿಗೆ ಸಂಬಂಧಿಸಿದಂತೆ ಈ ಮೊತ್ತವನ್ನು ವರ್ಗಾಯಿಸಲು ನಿರ್ಧರಿಸಲಾಯಿತು. ಆರ್‌ಬಿಐ ತನಗೆ ಹೂಡಿಕೆಗಳಿಂದ ಬರುವ ಲಾಭ ಹಾಗೂ ಬಡ್ಡಿ ರೂಪದಲ್ಲಿ ಬರುವ ಆದಾಯದಲ್ಲಿ ಒಂದಿಷ್ಟು ಪಾಲನ್ನು ಸರ್ಕಾರಕ್ಕೆ ಪ್ರತಿವರ್ಷ ಲಾಭಾಂಶದ ರೂಪದಲ್ಲಿ ನೀಡುತ್ತದೆ. ಈ ಬಾರಿ ಕೇಂದ್ರಕ್ಕೆ ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಲಾಭಾಂಶ ಆರ್‌ಬಿಐ ಕಡೆಯಿಂದ ಸಿಗುತ್ತಿದೆ.

ಜುಲೈ–ಜೂನ್ ಅವಧಿಯನ್ನು 'ಲೆಕ್ಕಪತ್ರ ಅವಧಿ' ಎಂದು ಈ ಮೊದಲು ಪರಿಗಣಿಸುತ್ತಿದ್ದ ಆರ್‌ಬಿಐ, ಈಗ ಏಪ್ರಿಲ್‌ನಿಂದ ಮಾರ್ಚ್ ಅಂತ್ಯದವರೆಗಿನ 'ಹಣಕಾಸು ವರ್ಷ'ವನ್ನೇ ತನ್ನ 'ಲೆಕ್ಕಪತ್ರ ಅವಧಿ' ಎಂದು ಪರಿಗಣಿಸಲು ಆರಂಭಿಸಿದೆ.


2019–20ರ ಲೆಕ್ಕಪತ್ರ ಅವಧಿಯಲ್ಲಿ ₹ 57,128 ಕೋಟಿ ಹಣವನ್ನು ಕೇಂದ್ರ ಸರ್ಕಾರಕ್ಕೆ ಆರ್‌ಬಿಐ ವರ್ಗಾಯಿಸಿದೆ. 2018–19ರಲ್ಲಿ ಆರ್‌ಬಿಐನಿಂದ ಕೇಂದ್ರ ಸರ್ಕಾರಕ್ಕೆ ₹ 1.23 ಲಕ್ಷ ಕೋಟಿ ಲಾಭಾಂಶ ಸಿಕ್ಕಿತ್ತು. ಇದರ ಜೊತೆಯಲ್ಲೇ, ₹ 52,637 ಕೋಟಿ ಹೆಚ್ಚುವರಿ ಮೊತ್ತವನ್ನು (ಒಟ್ಟು ಮೊತ್ತ ₹ 1.76 ಲಕ್ಷ ಕೋಟಿ) ಕೂಡ ಆ ವರ್ಷ ಆರ್‌ಬಿಐ ವರ್ಗಾವಣೆ ಮಾಡಿತ್ತು.

ಬಿಮಲ್ ಜಲನ್ ಸಮಿತಿಯ ಶಿಫಾರಸಿಗೆ ಅನುಗುಣವಾಗಿ ಮೀಸಲು ನಿಧಿಯಾಗಿ ಶೇಕಡ 5.5ರಷ್ಟು ಮೊತ್ತವನ್ನು ಇರಿಸಿಕೊಳ್ಳಲು ಕೂಡ ಆರ್‌ಬಿಐ ತೀರ್ಮಾನಿಸಿದೆ. ಮೀಸಲು ನಿಧಿಯ ಪ್ರಮಾಣವು ಶೇ 6.5ರಿಂದ ಶೇ 5.5ರ ನಡುವೆ ಇರಬೇಕು ಎಂದು ಸಮಿತಿಯು ಶಿಫಾರಸು ಮಾಡಿತ್ತು.

ಸದ್ಯದ ಆರ್ಥಿಕ ಪರಿಸ್ಥಿತಿ, ಜಾಗತಿಕ ಮತ್ತು ದೇಶಿ ಸವಾಲುಗಳು ಹಾಗೂ ಆರ್ಥಿಕತೆಯ ಮೇಲೆ ಕೋವಿಡ್–19 ಸಾಂಕ್ರಾಮಿಕದ ಎರಡನೇ ಅಲೆಯ ಪರಿಣಾಮಗಳನ್ನು ತಡೆಯಲು ಆರ್‌ಬಿಐ ಕೈಗೊಂಡಿರುವ ಇತ್ತೀಚಿನ ಕ್ರಮಗಳ ಬಗ್ಗೆ ಸಭೆಯಲ್ಲಿ ಪರಿಶೀಲನೆ ನಡೆಸಲಾಯಿತು ಎಂದು ಪ್ರಕಟಣೆ ತಿಳಿಸಿದೆ.

2021–22ನೇ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ತನಗೆ ಆರ್‌ಬಿಐ, ರಾಷ್ಟ್ರೀಕೃತ ಬ್ಯಾಂಕ್‌ಗಳು ಹಾಗೂ ಇತರ ಹಣಕಾಸು ಸಂಸ್ಥೆಗಳಿಂದ ಬರುವ ಲಾಭಾಂಶವು ₹ 53,510 ಕೋಟಿ ಎಂದು ಅಂದಾಜಿಸಿತ್ತು. ಈಗ ಅಂದಾಜಿಗಿಂತ ಹೆಚ್ಚಿನ ಮೊತ್ತವು ಆರ್‌ಬಿಐ ಕಡೆಯಿಂದಲೇ ಸಿಗಲಿದೆ.

ಸುಂದರಲಾಲ ಬಹುಗುಣ ಇನ್ನಿಲ್ಲ



ಹೃಷಿಕೇಶ (ಪಿಟಿಐ): ಖ್ಯಾತ ಪರಿಸರವಾದಿ ಹಾಗೂ 'ಚಿಪ್ಕೊ ಚಳವಳಿ' ನೇತಾರ ಸುಂದರಲಾಲ ಬಹುಗುಣ (94) ಅವರು ಕೋವಿಡ್–19ನಿಂದಾಗಿ ಹೃಷಿಕೇಶದ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಏಮ್ಸ್) ಶುಕ್ರವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರಿ ಮತ್ತು ಪುತ್ರರು ಇದ್ದಾರೆ.

11ನೇ ಪುಟ ನೋಡಿ

ಸಂಬಿತ್ ಪಾತ್ರಾ ಟ್ವೀಟ್‌ನಲ್ಲಿ 'ತಿರುಚಲಾದ ಮಾಹಿತಿ'

ನವದೆಹಲಿ(ಪಿಟಿಐ): 'ಪ್ರಧಾನಿ ನರೇಂದ್ರ ಮೋದಿಯವರನ್ನು ಅವಹೇಳನ ಮಾಡಲು ಕಾಂಗ್ರೆಸ್ ಟೂಲ್‌ಕಿಟ್ ರೂಪಿಸಿದೆ' ಎಂದು ಬಿಜೆಪಿಯ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರಾ ಅವರು ಮಾಡಿದ್ದ ಟ್ವೀಟ್ ನಲ್ಲಿನ ದಾಖಲೆಗಳನ್ನು 'ತಿರುಚಲಾದ ಮಾಹಿತಿ' ಎಂದು ಟ್ವಿಟರ್ ಟ್ಯಾಗ್ ಮಾಡಿದೆ.



ಸಂಬಿತ್ ಪಾತ್ರಾ

ಇದರಿಂದ ಟೂಲ್‌ಕಿಟ್ ಜಟಾಪಟಿಯಲ್ಲಿ ಬಿಜೆಪಿಗೆ ಭಾರಿ ಹಿನ್ನಡೆಯಾಗಿದೆ.

11ನೇ ಪುಟ ನೋಡಿ

ಟ್ಯಾಗ್ ತೆಗೆಯಲು ಟ್ವಿಟರ್‌ಗೆ ಕೇಂದ್ರ ಸೂಚನೆ

'ಸಂಬಿತ್ ಪಾತ್ರಾ ಅವರ ಟ್ವೀಟ್‌ನಲ್ಲಿ ಮಾಡಿರುವ 'ತಿರುಚಲಾದ ಮಾಹಿತಿ' ಟ್ಯಾಗ್ ಅನ್ನು ತೆಗೆಯಿರಿ' ಎಂದು ಕೇಂದ್ರ ಸರ್ಕಾರವು ಟ್ವಿಟರ್‌ಗೆ ಸೂಚನೆ ನೀಡಿದೆ ಎಂದು ಮೂಲಗಳು ಹೇಳಿವೆ. ಪಾತ್ರಾ ಅವರ ಟ್ವೀಟ್ ಅನ್ನು ಟ್ಯಾಗ್ ಮಾಡಿದ್ದು ಬಿಜೆಪಿಗೆ ಭಾರಿ ಹಿನ್ನಡೆಯಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿರುವ ಸಂದರ್ಭದಲ್ಲೇ ಕೇಂದ್ರ ಸರ್ಕಾರ ಈ ಕ್ರಮ ತೆಗದುಕೊಂಡಿದೆ ಎನ್ನಲಾಗಿದೆ.

'ಟೂಲ್‌ಕಿಟ್‌ಗೆ ಸಂಬಂಧಿಸಿದ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿದೆ. ತನಿಖಾ ಸಂಸ್ಥೆಗಳು ಇನ್ನೂ ತನಿಖೆ ನಡೆಸುತ್ತಿವೆ. ಮಾಹಿತಿ ಸತ್ಯವೇ ಅಥವಾ ತಿರುಚಲಾಗಿದೆಯೇ ಎಂಬುದನ್ನು ತನಿಖಾ ಸಂಸ್ಥೆಗಳು ನಿರ್ಧರಿಸಲಿವೆ. ಅದು ತಿರುಚಲಾದ ಮಾಹಿತಿ ಎಂದು ಟ್ವಿಟರ್ ತೀರ್ಪು ನೀಡುವುದು ಸಾಧ್ಯವಿಲ್ಲ' ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯವು ಟ್ವಿಟರ್‌ಗೆ ಪತ್ರ ಬರೆದಿದೆ ಎನ್ನಲಾಗಿದೆ.

ಸರ್ಕಾರ ಈ ಪತ್ರ ಬರೆದ ನಂತರ ಹಲವು ಗಂಟೆಗಳು ಕಳೆದರೂ, ಟ್ವಿಟರ್ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಪಾತ್ರಾ ಅವರ ಟ್ವೀಟ್‌ನಲ್ಲಿ, 'ತಿರುಚಲಾದ ಮಾಹಿತಿ' ಎಂಬ ಟ್ಯಾಗ್ ಇದೆ.


ಕೇಂದ್ರದ ಮಾಜಿ ಸಚಿವ ಬಾಬಾಗೌಡ ಪಾಟೀಲ ನಿಧನ



ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ರೈತ ಹೋರಾಟಗಾರ ಹಾಗೂ ಕೇಂದ್ರದ ಮಾಜಿ ಸಚಿವ ಬಾಬಾಗೌಡ ಪಾಟೀಲ (78) ಅನಾರೋಗ್ಯದಿಂದಾಗಿ ಬೆಳಗಾವಿಯ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

10ನೇ ಪುಟ ನೋಡಿ

ಮೇ 4ರ ನಂತರ 11 ಬಾರಿ ತೈಲ ದರ ಏರಿಕೆ



ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಮೇ 4ರಿಂದ ಇಲ್ಲಿಯವರೆಗೆ ಒಟ್ಟಾರೆ 11 ಬಾರಿ ಇಂಧನ ದರ ಹೆಚ್ಚಿಸಿವೆ. ಬೆಂಗಳೂರಿನಲ್ಲಿ ಮೇ 4ರಂದು ಲೀಟರಿಗೆ ₹ 93.67ರಷ್ಟಿದ್ದ ಪೆಟ್ರೋಲ್ ದರವು ಶುಕ್ರವಾರ (ಮೇ 21) ₹ 96.14ಕ್ಕೆ ಏರಿಕೆ ಕಂಡಿದೆ.

ಅಂದರೆ, ಲೀಟರಿಗೆ ₹ 2.47ರಷ್ಟು ಹೆಚ್ಚಾದಂತಾಗಿದೆ. ಡೀಸೆಲ್ ದರವು ಮೇ 4ರಂದು ಲೀಟರಿಗೆ ₹ 85.87ರಷ್ಟು ಇದ್ದಿದ್ದು ಶುಕ್ರವಾರ ₹ 88.84ಕ್ಕೆ ತಲುಪಿದೆ. ಅಂದರೆ ಲೀಟರಿಗೆ ₹ 2.97ರಷ್ಟು ಹೆಚ್ಚಾಗಿದೆ.

ಶುಕ್ರವಾರ ಪೆಟ್ರೋಲ್ ದರ ಲೀಟರಿಗೆ 19 ಪೈಸೆ ಮತ್ತು ಡೀಸೆಲ್ ದರ 29 ಪೈಸೆ ಹೆಚ್ಚಳವಾಗಿದೆ. ರಾಜಸ್ಥಾನ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದ ಹಲವು ನಗರಗಳಲ್ಲಿ ಪೆಟ್ರೋಲ್ ದರವು ಈಗಾಗಲೇ ಲೀಟರಿಗೆ ₹ 100ರ ಗಡಿ ದಾಟಿದೆ. ಶುಕ್ರವಾರದ ದರ ಏರಿಕೆಯ ಕಾರಣ ಮುಂಬೈನಲ್ಲಿಯೂ ಲೀಟರ್ ಪೆಟ್ರೋಲ್ ದರವು ₹ 100ರ ಸಮೀಪಕ್ಕೆ (₹99.32) ಬಂದಿದೆ. ಡೀಸೆಲ್ ದರ ₹ 91.01ಕ್ಕೆ ತಲುಪಿದೆ.

ದೆಹಲಿಯಲ್ಲಿ ಪೆಟ್ರೋಲ್ ದರ ₹ 93.04 ಮತ್ತು ಡೀಸೆಲ್ ದರ ₹ 83.80ಕ್ಕೆ ಏರಿಕೆಯಾಗಿದೆ. ರಾಜಸ್ಥಾನದ ಶ್ರೀಗಂಗಾನಗರ ಜಿಲ್ಲೆಯಲ್ಲಿ ಪೆಟ್ರೋಲ್ ದರವು ಅತ್ಯಂತ ಗರಿಷ್ಠ ಮಟ್ಟದಲ್ಲಿ (ಲೀಟರ್‌ಗೆ ₹ 104) ಇದೆ.

ರಾಜ್ಯ ಕೋವಿಡ್ ಅಂಕಿ–ಅಂಶ

23,67,742 ▲ ಒಟ್ಟು ಸೋಂಕಿತರು (23,35,524 ನಿನ್ನೆಯ ವಿವರ)
5,14,238 ▼ ಸಕ್ರಿಯ ಪ್ರಕರಣಗಳು
18,29,276 ▲ ಗುಣಮುಖರಾದವರು
24,207 ▲ ಒಟ್ಟು ಸಾವು


ದಿನದ ಏರಿಕೆ

ಹೊಸ ಪ್ರಕರಣ	32,218	▲
ಗುಣಮುಖ	52,581	▲
ಸಾವು	353	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಒಳ ಪುಟ

'ಮೇಷ್ಟ್ರು' ಕೆ.ಆರ್. ಪೇಟೆ ಕೃಷ್ಣ ಇನ್ನಿಲ್ಲ



ಮಂಡ್ಯ: ಮೇಷ್ಟ್ರು ಎಂದೇ ಖ್ಯಾತರಾಗಿದ್ದ ಮಾಜಿ ಸ್ಪೀಕರ್ ಕೆ.ಆರ್. ಪೇಟೆ ಕೃಷ್ಣ (80) ಅವರು ಅನಾರೋಗ್ಯದಿಂದ ಮೈಸೂರಿನ ತಮ್ಮ ನಿವಾಸದಲ್ಲಿ ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ ಇಂದಿರಮ್ಮ, ಪುತ್ರಿ ಮಂಜುಳಾ ಇದ್ದಾರೆ.

4ನೇ ಪುಟ ನೋಡಿ

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅವಕಾಶ ಉಪಯೋಗಿಸಿಕೊಂಡ ಉದ್ಯಮಿ

ಆಗ ಶಾಲಾ ಸಮವಸ್ತ್ರ, ಈಗ ಪಿಪಿಇ ಕಿಟ್ ತಯಾರಿಕೆ

• ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ಕೋವಿಡ್ 19 ಕಾರಣದಿಂದ ಬಹಳಷ್ಟು ಕಾರ್ಖಾನೆಗಳು ಮುಚ್ಚಿವೆ. ಆದರೆ, ಇಲ್ಲೊಬ್ಬರು ತಮ್ಮ ಕೈಗಾರಿಕೆಗೆ ಎದುರಾಗಿದ್ದ ಸವಾಲನ್ನೇ ಅವಕಾಶವಾಗಿಸಿಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ.

ತಾಲ್ಲೂಕಿನ ಬು. ಅರಳಿಕಟ್ಟಿ ಹಾಗೂ ನಗರದ ಬಂಕಾಪುರ ಚೌಕ್ ಬಳಿ 'ಬುರಟ್ ಎಂಟರ್‌ಪ್ರೈಸಸ್' ಹೆಸರಿನಲ್ಲಿ ಪ್ರವೀಣ ಬುರಟ್ ಅವರು ಗಾರ್ಮೆಂಟ್ ನಡೆಸುತ್ತಿದ್ದರು.

ಶಾಲಾ ಮಕ್ಕಳ ಸಮವಸ್ತ್ರ, ಸ್ಕೂಲ್ ಹಾಗೂ ಟ್ರಾವೆಲ್ ಬ್ಯಾಗ್ ತಯಾರಿಸುತ್ತಿದ್ದರು. ಕೋವಿಡ್‌ನಿಂದಾಗಿ ಶಾಲೆಗಳು ನಡೆಯದೇ, ಲಕ್ಷಾಂತರ ಮೊತ್ತದ ಆರ್ಡರ್‌ಗಳೆಲ್ಲ ರದ್ದಾದವು. ಕಾರ್ಖಾನೆ ನಡೆಸುವುದೇ ಕಷ್ಟವಾಗಿತ್ತು. ಆಗ ಕೊರೊನಾ ಚಿಕಿತ್ಸೆಯಲ್ಲಿ ಬಳಸುವ ಪಿಪಿಇ ಕಿಟ್ ಮುಂತಾದ ಸಾಮಗ್ರಿಗಳ ತಯಾರಿಕೆಯನ್ನು ಆರಂಭಿಸಿ ಕಾರ್ಖಾನೆ ಉಳಿಸಿಕೊಂಡಿದ್ದಲ್ಲದೆ, ಉದ್ಯೋಗಿಗಳಿಗೂ ಕೆಲಸ ನೀಡಿದ್ದಾರೆ.

ಬೇಡಿಕೆಗೆ ತಕ್ಕಂತೆ ಬದಲಾದ



ಹುಬ್ಬಳ್ಳಿಯ ಬುರಟ್ ಎಂಟರ್‌ಪ್ರೈಸಸ್‌ನ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಪಿಪಿಇ ಕಿಟ್ ಸಿದ್ಧಪಡಿಸುತ್ತಿರುವ ದೃಶ್ಯ

ಪ್ರಜಾವಾಣಿ ವಿಶೇಷ

ಇವರ ಫ್ಯಾಕ್ಟರಿಯಲ್ಲೀಗ ಪಿಪಿಇ ಕಿಟ್, ಕೋವಿಡ್‌ನಿಂದ ಮೃತಪಟ್ಟವರಿಗೆ ಬಳಸುವ ಬ್ಯಾಗ್, ವೈದ್ಯರ ಗೌನ್, ಸೋಂಕಿತರು ಧರಿಸುವ ಗೌನ್ ಉತ್ಪಾದಿಸಲಾಗುತ್ತಿದೆ.

ಗುಜರಾತ್‌ನ ಸೂರತ್, ಬೆಂಗಳೂರಿನಿಂದ ಕಚ್ಚಾವಸ್ತುಗಳನ್ನು ತರಿಸಲಾಗುತ್ತಿದೆ. ಇಲ್ಲಿ ತಯಾರಿಸಿದ ವೈದ್ಯಕೀಯ ಸಾಮಗ್ರಿಗಳನ್ನು ಧಾರವಾಡ ಜಿಲ್ಲೆಗೆ ಪೂರೈಸಲಾಗುತ್ತಿದೆ.

4ನೇ ಪುಟ ನೋಡಿ



ಶಾಲೆಗಳು ಬಂದ್ ಆದಾಗ ಫ್ಯಾಕ್ಟರಿಯೂ ಬಂದ್ ಆಗುವ ಆತಂಕ ಎದುರಾಗಿತ್ತು. ಇದ್ದ ಸಂಪನ್ಮೂಲ ಬಳಸಿ ಬದಲಾವಣೆ ಮಾಡಿಕೊಂಡಿದ್ದರಿಂದ ಎಲ್ಲರಿಗೂ ಕೆಲಸ ಸಿಕ್ಕಿದೆ
ಪ್ರವೀಣ್ ಬುರಟ್
ಮಾಲೀಕರು, ಬುರಟ್ ಎಂಟರ್‌ಪ್ರೈಸಸ್

ನಗರದಲ್ಲಿ ಇಂದು

100 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರ ಉದ್ಘಾಟನೆ: ವಸತಿ ಸಚಿವ ವಿ.ಸೋಮಣ್ಣ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ಸ್ಥಳ-ಕೇಂದ್ರೀಯ ವಿದ್ಯಾಲಯ, ಮಿಲಿಟರಿ ಕಾಂಪೌಂಡ್, ಸೇಂಟ್ ಜಾನ್ಸ್ ರಸ್ತೆ, ಬೆಳಿಗ್ಗೆ 11.30

'ಅನಂತಪಥ' ಮಾಸ ಪತ್ರಿಕೆ ಬಿಡುಗಡೆ: ಶಿಕ್ಷಣ ತಜ್ಞ ಎಚ್.ಎಸ್.ನಾಗರಾಜ, ಆಯೋಜನೆ-ಅನಂತಕುಮಾರ್ ಪ್ರತಿಷ್ಠಾನ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

ಹಿಂದುಸ್ತಾನಿ ಗಾಯಕ ಡಾ.ಬಸವರಾಜ ರಾಜಗುರು ಸ್ಮರಣೆ: ಉದ್ಘಾಟನೆ-ಗೊ.ರು. ಚನ್ನಬಸಪ್ಪ, ಅತಿಥಿ-ಸಂಗೀತ ಕಟ್ಟಿ ಕುಲಕರ್ಣಿ, ನಿಜಗುಣ ರಾಜಗುರು, ಅಧ್ಯಕ್ಷತೆ-ಮುದ್ದು ಮೋಹನ್, ಉಪಸ್ಥಿತಿ-ನಾಗೇಶ್ ಬೆಟ್ಟಕೋಟೆ, ಕೆ.ವಿ. ನಾಗರಾಜ ಮೂರ್ತಿ, ಆಯೋಜನೆ-ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

ಒಳನುಡಿಗಳ ಒಳ್ನುಡಿ: ಜಾಲಗೋಷ್ಠಿ ಸರಣಿ: ವಿಷಯ-ಕೊಂಕಣಿ ಭಾಷೆ ಮತ್ತು ಸಾಹಿತ್ಯ, ಉಪನ್ಯಾಸ-ಕೊಂಕಣಿ ಸಾಹಿತಿ ಕೆ. ಮೋಹನ ಪೈ, ಅತಿಥಿ-ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಕೆ.ಜಗದೀಶ್ ಪೈ, ಆಯೋಜನೆ-ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

ಪಶುವೈದ್ಯರಿಗೆ ಲಸಿಕೆ: ಸಿ.ಎಂಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶುಸಂಗೋಪನೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುವ ಪಶು ವೈದ್ಯರು ಮತ್ತು ಇತರ ಸಿಬ್ಬಂದಿಗೆ ಆದ್ಯತೆ ಮೇರೆಗೆ ಲಸಿಕೆ ನೀಡಲು ವ್ಯವಸ್ಥೆ ಮಾಡಬೇಕು ಎಂದು ಇಲಾಖಾ ಸಚಿವ ಪ್ರಭು ಚವ್ಹಾಣ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

ಕೋವಿಡ್ ನಡುವೆಯೂ ಇಲಾಖೆ ಸಿಬ್ಬಂದಿ ಹಳ್ಳಿಗಳಲ್ಲಿ ರೈತರ ಮನೆಗೆ ಭೇಟಿ ನೀಡಿ, ಜಾನುವಾರುಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ನೇರವಾಗಿ ಸಾರ್ವಜನಿಕರ ಸಂಪರ್ಕಕ್ಕೆ ಬರುವುದರಿಂದ ಅಪಾಯ ಎದುರಿಸುತ್ತಿದ್ದಾರೆ. ಆದ್ದರಿಂದ, ಸಿಬ್ಬಂದಿ ಮತ್ತು ಅವರ ಕುಟುಂಬದವರ ಆರೋಗ್ಯದ ದೃಷ್ಟಿಯಿಂದ ಲಸಿಕೆ ನೀಡಬೇಕಾಗಿದೆ ಎಂದು ಹೇಳಿದ್ದಾರೆ.

ಬಿಬಿಎಂಪಿ ಶಾಲೆಗಳ ಗುತ್ತಿಗೆ ಶಿಕ್ಷಕರ ಅಳಲು

ವರ್ಷವಾದರೂ ಇಲ್ಲ ವೇತನ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಶಾಲೆಗಳ ಅತಿಥಿ ಶಿಕ್ಷಕರಿಗೆ ಕಳೆದ ವರ್ಷದ ಜೂನ್-ಜುಲೈ ತಿಂಗಳ ವೇತನವನ್ನೂ ಈವರೆಗೆ ಪಾವತಿಸಿಲ್ಲ ಎಂದು ಶಿಕ್ಷಕರು ದೂರಿದ್ದಾರೆ.

'ಕಳೆದ ವರ್ಷ ಕೋವಿಡ್ ಕರ್ತವ್ಯ ಮಾಡಿದವರಿಗೆ ಮಾತ್ರ ಜೂನ್-ಜುಲೈ ತಿಂಗಳ ವೇತನ ಪಾವತಿಸಲಾಗುವುದು ಎಂದಿದ್ದರು. ನಾವು ಶಾಲೆಗಳಿಗೆ ಹೋಗಿ ಕೆಲಸ ಮಾಡಿದ್ದೆವು. ಎಸ್ಸೆಸ್ಸೆಲ್ಸಿ ಪರೀಕ್ಷೆ ಮತ್ತು ಮೌಲ್ಯಮಾಪನ ಕಾರ್ಯ ನಿರ್ವಹಿಸಿದ್ದೆವು. ನಮ್ಮನ್ನು ಹೊರಗುತ್ತಿಗೆ ಪಡೆದಿರುವ ಕ್ರಿಸ್ಟಲ್ ಸಂಸ್ಥೆ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಈ ಬಗ್ಗೆ ಹಲವು ಬಾರಿ ಮನವಿ ಮಾಡಿಕೊಂಡಿದ್ದೆವು. ವೇತನ ನೀಡಲು ಒಪ್ಪಿದ್ದರು. ಆದರೆ, ಈವರೆಗೂ ಜೂನ್-ಜುಲೈ ತಿಂಗಳ ವೇತನ ನೀಡಿಲ್ಲ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಶಿಕ್ಷಕರೊಬ್ಬರು ಹೇಳಿದರು.

'ವಾರದಲ್ಲಿ, 15 ದಿನಗಳಲ್ಲಿ ಈ ವೇತನ ಹಾಕಲಾಗುವುದು ಎಂದು ಹೇಳುತ್ತಾರೆ. ಅದು ಕಾರ್ಯರೂಪಕ್ಕೆ ಮಾತ್ರ ಬರುವುದಿಲ್ಲ. ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಅವರಿಗೂ ಈ ಬಗ್ಗೆ ಮನವಿ ಮಾಡಿದ್ದೆವು. ಆದರೂ ಪ್ರಯೋಜನವಾಗಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಈ ವರ್ಷದ ಮಾರ್ಚ್, ಏಪ್ರಿಲ್ ತಿಂಗಳ ವೇತನವನ್ನು ಈವರೆಗೂ ನೀಡಿಲ್ಲ. ನಾವು ಜೀವನ ನಡೆಸುವುದು ಹೇಗೆ' ಎಂದು ಮತ್ತೊಬ್ಬ ಶಿಕ್ಷಕರು ಅಳಲು ತೋಡಿಕೊಂಡರು.

'ಕೋವಿಡ್ ಕರ್ತವ್ಯಕ್ಕೆ ನಮ್ಮನ್ನು ನಿಯೋಜಿಸುತ್ತಿದ್ದಾರೆ. ಈಗಾಗಲೇ ಇಬ್ಬರು ಶಿಕ್ಷಕರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ನಮಗೆ ಈ ಕರ್ತವ್ಯ ನಿರ್ವಹಿಸಲು ಅಭ್ಯಂತರವಿಲ್ಲ. ಆದರೆ, ಬಿಬಿಎಂಪಿಯು ನಮಗೆ ಆರ್ಥಿಕ ಮತ್ತು ಆರೋಗ್ಯ ಭದ್ರತೆ ಒದಗಿಸಬೇಕು' ಎಂದು ಅವರು ಒತ್ತಾಯಿಸಿದರು.

ಪಾವತಿಗೆ ಕ್ರಮ: 'ಕೋವಿಡ್ ಕರ್ತವ್ಯ ನಿರ್ವಹಿಸಿದ ಮತ್ತು ಶಾಲೆಗೆ ಹಾಜರಾಗಿ ಕರ್ತವ್ಯ ನಿರ್ವಹಿಸಿದ್ದರ ಬಗ್ಗೆ ಹಾಜರಾತಿ ವಿವರ ನೀಡಿದ ಶಿಕ್ಷಕರ ಪೈಕಿ ಕಳೆದ ಜೂನ್‌ನಲ್ಲಿ 104 ಮತ್ತು ಜುಲೈನಲ್ಲಿ 130 ಜನರಿಗೆ ವೇತನ ಪಾವತಿಸಲಾಗಿದೆ. ತಡವಾಗಿ ಹಾಜರಾತಿ ವಿವರ ನೀಡಿದವರಿಗೆ ವೇತನ ನೀಡಲು ಆಗಿಲ್ಲ. ಈ ಪ್ರಕ್ರಿಯೆ ಚಾಲ್ತಿಯಲ್ಲಿತ್ತು. ಆದರೆ, ಮತ್ತೆ ಲಾಕ್‌ಡೌನ್ ಆಗಿದ್ದರಿಂದ ವಿಳಂಬವಾಗಿದೆ. ಬಿಬಿಎಂಪಿಯಿಂದ ಮತ್ತೆ ಸೂಚನೆ ಬಂದ ಕೂಡಲೇ ಈ ಎರಡು ತಿಂಗಳ ವೇತನ ನೀಡಲಾಗುವುದು' ಎಂದು 'ಕ್ರಿಸ್ಟಲ್' ಏಜೆನ್ಸಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಜಯ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಮಾರ್ಚ್ ತಿಂಗಳ ವೇತನ ಒಂದು ವಾರದಲ್ಲಿ ಪಾವತಿಸಲಾಗುತ್ತದೆ. ಏಪ್ರಿಲ್ ತಿಂಗಳ ಹಾಜರಾತಿ ವಿವರವನ್ನು ಸಂಗ್ರಹಿಸಲು ಇನ್ನೂ ಸಾಧ್ಯವಾಗಿಲ್ಲ. ಇನ್ನು, ಯಾವಾಗಲೂ ಮೇ ತಿಂಗಳಲ್ಲಿ ರಜೆ ಇರುತ್ತಿದ್ದುದರಿಂದ ಈ ತಿಂಗಳ ವೇತನವನ್ನು ಈವರೆಗೆ ಶಿಕ್ಷಕರಿಗೆ ನೀಡುತ್ತಿರಲಿಲ್ಲ. ಆದರೆ, ಈ ಬಾರಿ ಶಿಕ್ಷಕರು ಮೇ ತಿಂಗಳಲ್ಲಿಯೂ ಕೋವಿಡ್ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ತಿಂಗಳ ವೇತನವನ್ನೂ ಪಾವತಿಸಲು ಅನುಮತಿ ಕೋರಿ ಬಿಬಿಎಂಪಿಗೆ ಪತ್ರ ಬರೆಯಲಾಗಿದೆ' ಎಂದೂ ಅವರು ಮಾಹಿತಿ ನೀಡಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಬಿಬಿಎಂಪಿ ಶಿಕ್ಷಣ ವಿಭಾಗದ ಸಹಾಯಕ ಆಯುಕ್ತ ನಾಗೇಂದ್ರ ನಾಯ್ಕ್ ಅವರಿಗೆ ಕರೆ ಮಾಡಲಾಯಿತು. ಆದರೆ ಅವರು ಸಂಪರ್ಕಕ್ಕೆ ಸಿಗಲಿಲ್ಲ.

'ಸ್ಥಳೀಯ ಭಾಷೆಗಳು ಆಡಳಿತ ಭಾಷೆಯ ಕೊಂಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕನ್ನಡ ಭಾಷೆ ಸಾರ್ವಭೌಮ. ವಲಯವಾರು ಸ್ಥಳೀಯ ಭಾಷೆಗಳು ಆಡಳಿತ ಭಾಷೆಗೆ ಕೊಂಡಿ ಇದ್ದಂತೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ತಿಳಿಸಿದರು.

ಕುವೆಂಪು ಭಾಷಾಭಾರತಿ ಪ್ರಾಧಿಕಾರವು ಶುಕ್ರವಾರ ಹಮ್ಮಿಕೊಂಡಿದ್ದ 'ಒಳನುಡಿಗಳ ಒಳ್ನುಡಿ: ಜಾಲಗೋಷ್ಠಿ ಸರಣಿ' ಉದ್ಘಾಟಿಸಿ ಅವರು ಮಾತನಾಡಿದರು.

'ಕರ್ನಾಟಕದಲ್ಲಿ ಸುಮಾರು 56 ಭಾಷೆಗಳಿವೆ. ಅವುಗಳಲ್ಲಿ ಕುವೆಂಪು ಭಾಷಾ ಪ್ರಾಧಿಕಾರ 13 ಭಾಷೆಗಳ ಬಗ್ಗೆ ಸರಣಿ ಜಾಲಗೋಷ್ಠಿ ಹಮ್ಮಿಕೊಂಡಿದೆ. ವ್ಯವಹಾರ, ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಈ ಸ್ಥಳೀಯ ಭಾಷೆಗಳ ಪ್ರಭಾವವನ್ನು ಕಾಣಬಹುದು' ಎಂದರು.

ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ.ಅಜಕ್ಕಳ ಗಿರೀಶ ಭಟ್, 'ಕೊಡವ, ತುಳು ಸೇರಿದಂತೆ ಅನೇಕ ಸ್ಥಳೀಯ ಭಾಷೆಗಳು ಕನ್ನಡಕ್ಕೆ ಅಂಟಿಕೊಂಡಿವೆ. ಅವು ಒಂದಕ್ಕೊಂದು ಬೆಸೆದುಕೊಂಡಿವೆ. ಮುಂದಿನ ದಿನಗಳಲ್ಲಿ ಪುಸ್ತಕಗಳನ್ನು ಕೇಂದ್ರೀಕರಿಸಿ, ಕಾರ್ಯಕ್ರಮ ರೂಪಿಸಲಾಗುವುದು'.

'ಸ್ಥಳೀಯ ಭಾಷೆಗಳು ಹಾಗೂ ಅಲ್ಲಿನ ಸಂಪ್ರದಾಯಗಳ ಬಗ್ಗೆ ಬೆಳಕು ಚೆಲ್ಲುವಂತಹ ಕಾರ್ಯಕ್ರಮಗಳನ್ನು ಪ್ರಾಧಿಕಾರದಿಂದ ರೂಪಿಸಲಾಗುವುದು. ಅದರ ಪೂರ್ವಭಾವಿಯಾಗಿ ಕೊಡವ, ತುಳು, ಕೊಂಕಣಿ, ಕುಂದಾಪುರ ಭಾಷೆಗಳಿಗೆ ಸಂಬಂಧಿಸಿದ ವಿಚಾರಗೋಷ್ಠಿಗಳನ್ನು ಈಗ ಹಮ್ಮಿಕೊಳ್ಳಲಾಗಿದೆ' ಎಂದರು.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷೆ ಡಾ.ಪಾರ್ವತಿ ಅಯ್ಯಪ್ಪ ಹಾಗೂ ಇತರರು ಭಾಗವಹಿಸಿದ್ದರು. ಸರಣಿಯು ಜೂನ್ 2ರವರೆಗೆ ಪ್ರತಿದಿನ ಸಂಜೆ 7 ಗಂಟೆಗೆ ನಡೆಯಲಿದೆ.

ಏರ್ ಇಂಡಿಯಾ: ಪ್ರಯಾಣಿಕರ ವೈಯಕ್ತಿಕ ಮಾಹಿತಿ ಸೋರಿಕೆ

ನವದೆಹಲಿ (ಪಿಟಿಐ): ಏರ್ ಇಂಡಿಯಾ ಪ್ರಯಾಣಿಕರ ಸೇವಾ ವ್ಯವಸ್ಥೆ ಪೂರೈಕೆದಾರ ಸಂಸ್ಥೆ 'ಎಸ್‌ಐಟಿಎ' ಫೆಬ್ರುವರಿಯಲ್ಲಿ ಸೈಬರ್ ದಾಳಿಗೆ ಒಳಗಾಗಿದ್ದು, ಪ್ರಯಾಣಿಕರ ವೈಯಕ್ತಿಕ ಮಾಹಿತಿ ಸೋರಿಕೆ ಆಗಿದೆ ಎಂದು ಏರ್ ಇಂಡಿಯಾ ತಿಳಿಸಿದೆ.

2011ರ ಆಗಸ್ಟ್ 11ರಿಂದ 2021ರ ಫೆಬ್ರುವರಿ 3ವರೆಗೆ ನೋಂದಾಯಿಸಿದ್ದ ಗ್ರಾಹಕರ ಹೆಸರು, ಹುಟ್ಟಿದ ದಿನ, ಸಂಪರ್ಕದ ಮಾಹಿತಿ, ಪಾಸ್‌ಪೋರ್ಟ್ ಮತ್ತು ಟಿಕೆಟ್ ಮಾಹಿತಿ, ಕ್ರೆಡಿಟ್ ಕಾರ್ಡ್ ದತ್ತಾಂಶ ಸೇರಿದಂತೆ ಹಲವು ವೈಯಕ್ತಿಕ ದತ್ತಾಂಶಗಳು ಸೋರಿಕೆ ಆಗಿವೆ ಎಂದು ಪ್ರಕಟಣೆ ಹೇಳಿದೆ.

'ಈ ಕುರಿತು ತೆಗೆದುಕೊಳ್ಳಬಹುದಾದ ಪರಿಹಾರ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ಅದರ ನಡುವೆಯೂ ಪ್ರಯಾಣಿಕರು ತಮ್ಮ ವೈಯಕ್ತಿಕ ದತ್ತಾಂಶ ಸುರಕ್ಷತೆ ದೃಷ್ಟಿಯಿಂದ ಪಾಸ್‌ವರ್ಡ್‌ಗಳನ್ನು ಬದಲಿಸಿಕೊಳ್ಳುವುದು ಒಳ್ಳೆಯದು' ಪ್ರಕಟಣೆಯಲ್ಲಿ ತಿಳಿಸಿದೆ.

ಈ ಸೈಬರ್ ದಾಳಿಯಿಂದಾಗಿ ಏರ್ ಇಂಡಿಯಾ ಪ್ರಯಾಣಿಕರೂ ಸೇರಿದಂತೆ ವಿಶ್ವದಾದ್ಯಂತ ಸುಮಾರು 45 ಲಕ್ಷ ಗ್ರಾಹಕರ ವೈಯಕ್ತಿಕ ಮಾಹಿತಿ ಸೋರಿಕೆ ಆಗಿದೆ ಎಂದು ಪ್ರಕಟಣೆ ಹೇಳಿದೆ. ಎಸ್‌ಐಟಿಎ ಸ್ವಿಟ್ಜರ್ಲೆಂಡ್ ಮೂಲದ ಸಂಸ್ಥೆಯಾಗಿದೆ.

ರಾಜ್ಯಪಾಲರ ಮಧ್ಯಪ್ರವೇಶಕ್ಕೆ ಜೆಡಿಎಸ್ ಆಗ್ರಹ

ಪ್ರಜಾವಾಣಿ ವಾರ್ತೆ



ಎಚ್.ಕೆ. ಕುಮಾರಸ್ವಾಮಿ

ಹಾಸನ: 'ಕೋವಿಡ್ ಪರಿಸ್ಥಿತಿ ನಿರ್ವಹಣೆಯಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದ್ದು, ರಾಜ್ಯಪಾಲರು ತಕ್ಷಣ ಮಧ್ಯ ಪ್ರವೇಶಿಸಿ, ರಾಜ್ಯದ ವಸ್ತುಸ್ಥಿತಿ ಕುರಿತು ಕೇಂದ್ರಕ್ಕೆ ವರದಿ ಕಳುಹಿಸಬೇಕು' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಕೆ.ಕುಮಾರಸ್ವಾಮಿ ಶುಕ್ರವಾರ ಇಲ್ಲಿ ಆಗ್ರಹಿಸಿದರು.

'ಸೋಂಕು ಪ್ರಕರಣಗಳು ಹಾಗೂ ಸಾವಿನ ಸಂಖ್ಯೆಯನ್ನು ಸರ್ಕಾರ ಮುಚ್ಚಿಡುತ್ತಿದೆ. ಆಸ್ಪತ್ರೆಗಳಲ್ಲಿ ಆಮ್ಲಜನಕ ಸಿಗದೆ ಮೃತಪಡುತ್ತಿದ್ದಾರೆ. ವೈದ್ಯರು, ಔಷಧ ಹಾಗೂ ವೆಂಟಿಲೇಟರ್‌ಗಳ ಕೊರತೆ ಇದೆ. ಕೋವಿಡ್ ಹೊರತಾದ ರೋಗಿಗಳಿಗೂ ಸೂಕ್ತ ಚಿಕಿತ್ಸೆ ದೊರಕುತ್ತಿಲ್ಲ' ಎಂದು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

'ರಾಜ್ಯ ಸರ್ಕಾರದ ಮೇಲೆ ವಿಶ್ವಾಸದ ಇಲ್ಲದ ಕಾರಣ, ಪ್ರಧಾನಿ ಮೋದಿ ಅವರು ಕೋವಿಡ್ ನಿರ್ವಹಣೆಯ ಸಂಪೂರ್ಣ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಿದ್ದಾರೆ' ಎಂದರು.



ಸೀರೆಯೇ ಜೋಕಾಲಿ...

ನಗರದ ಟೋಲ್ ಗೇಟ್ ಕೆಳಸೇತುವೆ ಬಳಿಯ ರಸ್ತೆಯ ಪಕ್ಕ ಕಂಬವೊಂದಕ್ಕೆ ಕಟ್ಟಿದ್ದ ಸೀರೆಯನ್ನೇ ಮಕ್ಕಳು ಜೋಕಾಲಿಯನ್ನಾಗಿಸಿಕೊಂಡು ಆಟವಾಡುತ್ತಿರುವ ದೃಶ್ಯ

ಪ್ರಜಾವಾಣಿ ಚಿತ್ರ: /ಎಂ.ಎಸ್.ಮಂಜುನಾಥ್

10 ದಿನಕ್ಕಿಂತ ಹೆಚ್ಚಿನ ಅವಧಿಗೆ ಆಸ್ಪತ್ರೆಯಲ್ಲಿರುವ ವಿಚಾರದಲ್ಲಿ ಗೊಂದಲ ಸೃಷ್ಟಿ

ಆಸ್ಪತ್ರೆ–ಬಿಬಿಎಂಪಿಗೆ ಅಲೆದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಆಸ್ಪತ್ರೆಗಳಲ್ಲಿ ಅನಗತ್ಯವಾಗಿ ನಿಗದಿಗಿಂತ ಹೆಚ್ಚು ದಿನ ಇರುತ್ತಿದ್ದ ರೋಗಿಗಳನ್ನು ನಿಯಂತ್ರಿಸುವ ಉದ್ದೇಶದಿಂದ ಬಿಬಿಎಂಪಿ ನೀಡಿದ್ದ ಆದೇಶಕ್ಕೆ ಖಾಸಗಿ ಆಸ್ಪತ್ರೆಗಳು ಭಿನ್ನ ಮಾರ್ಗ ಕಂಡುಕೊಂಡಿರುವುದರಿಂದ ರೋಗಿಗಳ ಸಂಬಂಧಿಕರು ಪರದಾಡಬೇಕಾಗಿದೆ.

ಕೊರೊನಾ ಸೋಂಕು ದೃಢಪಟ್ಟು ಆಸ್ಪತ್ರೆಗೆ ದಾಖಲಾಗುವ ವ್ಯಕ್ತಿಗೆ 10 ದಿನಗಳಿಗಿಂತ ಹೆಚ್ಚಿನ ಚಿಕಿತ್ಸೆ ಅವಶ್ಯಕ ಎಂದು ಕಂಡುಬಂದರೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಪೋರ್ಟಲ್‌ಗೆ ಅಥವಾ ಪಾಲಿಕೆಗೆ ಆಯಾ ಆಸ್ಪತ್ರೆಯಿಂದ ಅರ್ಜಿ ಸಲ್ಲಿಸಬೇಕು ಎನ್ನುವ ನಿಯಮವನ್ನು ಬಿಬಿಎಂಪಿ ರೂಪಿಸಿತ್ತು.

ಕೆಲವು ಖಾಸಗಿ ಆಸ್ಪತ್ರೆಗಳು 20 ದಿನವಾದರೂ ಕೊರೊನಾ ಸೋಂಕಿತರ ಗುಣಮುಖ ವಿವರ ಅಥವಾ ಬಿಡುಗಡೆಯ ಮಾಹಿತಿ ನೀಡದೆ ಇರುವುದು ಹಾಗೂ ನಿರ್ದಿಷ್ಟ ವ್ಯಕ್ತಿ ಗುಣಮುಖರಾದರೂ ಹಾಸಿಗೆ ಖಾಲಿ ಆಗಿರುವ ಬಗ್ಗೆ ವಿವರ ನೀಡದೆ ಇರುವ ಬಗ್ಗೆ ದೂರುಗಳು ಕೇಳಿ ಬಂದಿದ್ದರಿಂದ ಬಿಬಿಎಂಪಿ ಈ ಕ್ರಮ ಕೈಗೊಂಡಿತ್ತು.

ಆದರೆ, ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ ನೀವೇ ಬಿಬಿಎಂಪಿಗೆ ಅರ್ಜಿ ಸಲ್ಲಿಸಿ ಅನುಮತಿ ಪಡೆಯಿರಿ ಎಂದು ಕೆಲವು ಖಾಸಗಿ ಆಸ್ಪತ್ರೆಗಳು ರೋಗಿಗಳ ಕಡೆಯವರಿಗೆ ಹೇಳುತ್ತಿರುವುದರಿಂದ ಸಮಸ್ಯೆಯಾಗಿದೆ.

ಪೋರ್ಟಲ್ ಮೂಲಕ ಸಲ್ಲಿಸಬಹುದಾದ ಅರ್ಜಿಯನ್ನು ಭೌತಿಕವಾಗಿ ನೀಡಿ, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಪೋರ್ಟಲ್‌ಗೆ ಅಥವಾ ಪಾಲಿಕೆಯಿಂದ ಅನುಮತಿ ಪಡೆದುಕೊಂಡು ಬರುವಂತೆ ಕೆಲವು ಖಾಸಗಿ ಆಸ್ಪತ್ರೆಗಳು ಒತ್ತಾಯಿಸುತ್ತಿವೆ ಎಂದು ರೋಗಿಯ ಸಂಬಂಧಿಕರೊಬ್ಬರು ಹೇಳಿದರು.

ಈ ಸಂಬಂಧ ಪ್ರತಿಕ್ರಿಯಿಸಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಕೋವಿಡ್ ದೃಢಪಟ್ಟು 10 ದಿನ ಆಸ್ಪತ್ರೆಯಲ್ಲಿದ್ದ ಯಾರಿಗಾದರೂ ಆರೋಗ್ಯ ಸುಧಾರಿಸದೆ ಹೆಚ್ಚಿನ ಆರೋಗ್ಯ ಸೇವೆ ಅವಶ್ಯಕತೆ ಇದ್ದರೆ, ಆಯಾ ಆಸ್ಪತ್ರೆಯ ಆಡಳಿತ ಮಂಡಳಿಯಿಂದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಪೋರ್ಟಲ್‌ಗೆ ಅಥವಾ ಪಾಲಿಕೆಗೆ ಅರ್ಜಿ ಸಲ್ಲಿಸಬೇಕು. ಇದರಲ್ಲಿ ಕೊರೊನಾ ಸೋಂಕಿತರ ಕುಟುಂಬದವರ ಯಾವುದೇ ಪಾತ್ರ ಇರುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ನಿರ್ದಿಷ್ಟ ವ್ಯಕ್ತಿಯ ಆರೋಗ್ಯ ಪರಿಸ್ಥಿತಿ ಆಧಾರದ ಮೇಲೆ ಯಾವುದೇ ಆಸ್ಪತ್ರೆಯು ಅರ್ಜಿ ಸಲ್ಲಿಸಬಹುದು. ಈ ವಿಚಾರದಲ್ಲಿ ಅನವಶ್ಯಕ ಗೊಂದಲ ಸೃಷ್ಟಿ ಮಾಡುವ ಅವಶ್ಯಕತೆ ಇಲ್ಲ' ಎಂದರು.

'ಕೊರೊನಾ ಸೋಂಕಿತರ ಕುಟುಂಬದವರಿಗೆ ಕಿರುಕುಳ ನೀಡುವುದು ಕಂಡುಬಂದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದೂ ಅವರು ಎಚ್ಚರಿಕೆ ನೀಡಿದರು.

'778 ಸೋಂಕಿತರ ಸಾವಿಗೆ ಸರ್ಕಾರವೇ ಹೊಣೆ'

ಬೆಂಗಳೂರು: 'ಮೇ ತಿಂಗಳ 18 ದಿನಗಳಲ್ಲಿ ಮನೆ ಆರೈಕೆಯಲ್ಲಿದ್ದ 778 ಮಂದಿ ಕೋವಿಡ್ ಪೀಡಿತರು ಪ್ರಾಣ ಕಳೆದುಕೊಂಡಿದ್ದಾರೆ. ಅವರ ಸಾವಿಗೆ ಸರ್ಕಾರವೇ ನೇರ ಹೊಣೆ' ಎಂದು ಆಮ್ ಆದ್ಮಿ ಪಕ್ಷದ ಬೆಂಗಳೂರು ನಗರ ಘಟಕದ ಉಪಾಧ್ಯಕ್ಷ ಬಿ.ಟಿ.ನಾಗಣ್ಣ ಆರೋಪಿಸಿದ್ದಾರೆ.

'ಬೆಂಗಳೂರಿನ ಆಸ್ಪತ್ರೆಗಳಲ್ಲಿ ಹಾಸಿಗೆ ಅಭಾವ ಸೃಷ್ಟಿಯಾಗಿತ್ತು. ಹೀಗಾಗಿ ಅನೇಕರು ಮನೆ ಆರೈಕೆಯಲ್ಲಿದ್ದರು. ರಾಜ್ಯ ಸರ್ಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಸೋಂಕಿತರಿಗೆ ಸರಿಯಾದ ವೈದ್ಯಕೀಯ ಸೇವೆ ಒದಗಿಸಿಲ್ಲ. ವೈದ್ಯರಿಂದ ಅಗತ್ಯ ಮಾರ್ಗದರ್ಶನ ಹಾಗೂ ಸಲಹೆ ಒದಗಿಸುವ ಕೆಲಸವನ್ನೂ ಮಾಡಿಲ್ಲ. ಸರ್ಕಾರ ಮತ್ತು ಬಿಬಿಎಂಪಿ ನಿರ್ಲಕ್ಷ್ಯದಿಂದಾಗಿಯೇ ಅವರೆಲ್ಲಾ ಸಾವಿಗೀಡಾಗಿದ್ದಾರೆ. ಇದು ಸರ್ಕಾರಿ ಪ್ರಾಯೋಜಿತ ಕೊಲೆ' ಎಂದು ದೂರಿದ್ದಾರೆ.

'ಸೂಕ್ತ ಸಮಯದಲ್ಲಿ ವೈದ್ಯಕೀಯ ಸೇವೆ ಒದಗಿಸಿದ್ದರೆ ಇಷ್ಟು ಮಂದಿ ಸಾಯುವುದನ್ನು ತಡೆಯಬಹುದಿತ್ತು. ಈ ಕೆಲಸವನ್ನು ಸರ್ಕಾರವಾಗಲೀ, ಬಿಬಿಎಂಪಿಯಾಗಲೀ ಮಾಡಲೇ ಇಲ್ಲ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸುಳ್ಳುಗಳನ್ನೇ ಹೇಳುತ್ತಾ ಜನರ ದಾರಿ ತಪ್ಪಿಸಿದರು. ಸರ್ಕಾರವೇ ರಚಿಸಿದ್ದ ಸಮಿತಿ ತನ್ನ ವರದಿಯಲ್ಲಿ ಸತ್ಯ ಬಯಲಿಗೆಳೆದಿದೆ. ಈ ವಿಷಯದಲ್ಲಿ ಹೈಕೋರ್ಟ್ ಮಧ್ಯಪ್ರವೇಶಿಸಬೇಕು. ತಪ್ಪಿತಸ್ಥರನ್ನು ಪತ್ತೆಹಚ್ಚಿ ಕಾನೂನಿನ ಅಡಿಯಲ್ಲಿ ಕಠಿಣ ಶಿಕ್ಷೆ ವಿಧಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಮುಖ್ಯಾಂಶಗಳು

- ಬಿಬಿಎಂಪಿಗೆ ಅರ್ಜಿ ಸಲ್ಲಿಸಿ ಅನುಮತಿ ಪಡೆಯುವಂತೆ ಖಾಸಗಿ ಆಸ್ಪತ್ರೆಗಳ ಒತ್ತಾಯ
- ಕಿರುಕುಳ ನೀಡಿದರೆ ಕ್ರಮ– ಬಿಬಿಎಂಪಿ ಮುಖ್ಯ ಆಯುಕ್ತ

ಸಿಯೋಲ್‌ನಿಂದ ಸರ್ಕಾರಕ್ಕೆ ನೆರವು

ಬೆಂಗಳೂರು: ಕೋವಿಡ್ ವಿರುದ್ಧದ ಹೋರಾಟದಲ್ಲಿ ರಾಜ್ಯ ಸರ್ಕಾರದ ಜೊತೆ ಕೈಜೋಡಿಸಿರುವ ದಕ್ಷಿಣ ಕೊರಿಯಾದ ಸಿಯೋಲ್ ಸೆಮಿಕಂಡಕ್ಟರ್ ಕಂಪನಿಯು ₹7 ಕೋಟಿ ಮೌಲ್ಯದ ವೈದ್ಯಕೀಯ ಸಲಕರಣೆಗಳನ್ನು ಕೊಡುಗೆಯಾಗಿ ನೀಡಿದೆ.

ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರನ್ನು ಶುಕ್ರವಾರ ಭೇಟಿಯಾದ ಕಂಪನಿಯ ಅಧಿಕಾರಿಗಳು ಸಾಂಕೇತಿಕವಾಗಿ ಕೆಲ ಉಪಕರಣಗಳನ್ನು ಹಸ್ತಾಂತರಿಸಿದರು.

'ಸಿಯೋಲ್ ಕಂಪನಿಯು 30 ಸಾವಿರ ಕೆ-94 ಮುಖಗವಸು, 20 ಸಾವಿರ ಕೈಗವಸು, 2,500 ವಾಯು ಸಂಸ್ಕರಣಾ ಸಲಕರಣೆ ಹಾಗೂ 100 ಪಿಪಿಇ ಕಿಟ್‌ಗಳನ್ನು ಬೆಂಗಳೂರಿನ ಪಶ್ಚಿಮ ವಿಭಾಗದಲ್ಲಿ ಬಳಸುವಂತೆ ನೀಡಿದೆ' ಎಂದು ಅಶ್ವತ್ಥನಾರಾಯಣ ತಿಳಿಸಿದರು.

ಕಂಪನಿಯ ಸಿಇಒ ಚುಂಗ್ ಹೂನ್ ಲೀ, ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದರು. ಕಂಪನಿಯ ಭಾರತೀಯ ಉಪಾಧ್ಯಕ್ಷ ಅರ್ಷಿ ಕೃಷ್ಣಾಚಾರ್, ಬೆಂಗಳೂರಿನ ಹೊಂಗಿರಣ ಟ್ರಸ್ಟ್‌ನ ಅಧ್ಯಕ್ಷ ರವಿಶಂಕರ್, ಪಿ.ಎನ್. ಗೋವಿಂದ ರಾಜುಲು ಇದ್ದರು.

ಸೋಂಕಿತರೆಲ್ಲರೂ ಮನೆ ಆರೈಕೆಯಲ್ಲಿ ಇರುವಂತಿಲ್ಲ!

ಪ್ರಜಾವಾಣಿ ವಾರ್ತೆ


ಬೆಂಗಳೂರು: ಇನ್ನುಮುಂದೆ, ಕೊರೊನಾ ಸೋಂಕಿನ ಸೌಮ್ಯ ಸ್ವಭಾವದ ಲಕ್ಷಣಗಳನ್ನು ಹೊಂದಿದ ಎಲ್ಲರೂ ಮನೆ ಆರೈಕೆಯಲ್ಲಿರುವಂತಿಲ್ಲ. ಮನೆಯಲ್ಲಿ ಪ್ರತ್ಯೇಕವಾಗಿದ್ದುಕೊಂಡು ಆರೈಕೆಗೆ ಒಳಗಾಗುವ ವ್ಯವಸ್ಥೆ ಇಲ್ಲದವರು ಪಕ್ಕದ ಕೋವಿಡ್ ಆರೈಕೆ ಕೇಂದ್ರಗಳಿಗೆ ದಾಖಲಾಗಬೇಕು ಎಂದು ಬಿಬಿಎಂಪಿ ಹೇಳಿದೆ.

ಈ ಕುರಿತು ಪರಿಷ್ಕೃತ ಆದೇಶ ಹೊರಡಿಸಿರುವ ಪಾಲಿಕೆಯು, ಮನೆ ಆರೈಕೆಗೆ ಪೂರಕವಾಗಿ ಸೋಂಕಿತರ ಮನೆಯಲ್ಲಿ ಗಾಳಿ ವ್ಯವಸ್ಥೆ, ಪ್ರತ್ಯೇಕ ಕೊಠಡಿ, ಶೌಚಾಲಯ ಇರಬೇಕು. ಸೋಂಕಿತರ ಮನೆಯಲ್ಲಿ ಇತರೆ ಆರೋಗ್ಯ ಸಮಸ್ಯೆ ಇರುವವರು ಇರಬಾರದು ಎಂದು ಹೇಳಿದೆ.

ಈ ಎಲ್ಲ ಅಂಶಗಳನ್ನು ಪರಿಶೀಲಿಸಿದ ನಂತರವೇ ಮನೆ ಆರೈಕೆಗೆ ಅನುಮತಿ ನೀಡಬೇಕು ಎಂದು ಬಿಬಿಎಂಪಿ ವಿಶೇಷ ಆಯುಕ್ತರು (ಆರೋಗ್ಯ) ಆದೇಶಿಸಿದ್ದಾರೆ.

ಸೋಂಕು ಪ್ರಕರಣಗಳ ಸಂಖ್ಯೆ ನಗರದಲ್ಲಿ ಹೆಚ್ಚಾದ ಕಾರಣ ಮನೆ ಆರೈಕೆಯಲ್ಲಿರುವವರನ್ನು ತಪಾಸಣೆ ಮಾಡಿ ಅನುಮತಿ ನೀಡುವುದರಲ್ಲೂ ಲೋಪವಾಗಿತ್ತು. ಅಲ್ಲದೆ, ಇತ್ತೀಚೆಗೆ ಮನೆಯಲ್ಲಿ ಆರೈಕೆ ಪಡೆಯುತ್ತಿದ್ದ ಸೌಮ್ಯ ಸ್ವಭಾವದ ಸೋಂಕಿತರೂ ಕೂಡ ಸಾವನ್ನಪ್ಪುವುದು ಹೆಚ್ಚಾಗಿದ್ದರಿಂದ ಪಾಲಿಕೆ ಈ ಕ್ರಮ ಕೈಗೊಂಡಿದೆ.

ಮನೆ ಆರೈಕೆಯಲ್ಲಿದ್ದ 778 ರೋಗಿಗಳು ಮೇ ತಿಂಗಳಲ್ಲಿ ಸಾವನ್ನಪ್ಪಿದ ಬಗ್ಗೆ ಸಾವು ಪರಿಶೀಲನಾ ಸಮಿತಿಯು ವರದಿ ನೀಡಿತ್ತು.



ಕಪ್ಪು ಶಿಲೀಂಧ್ರ: ಮತ್ತಷ್ಟು ಮಂದಿಗೆ ಸೋಂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪೀಡಿತರಾಗಿ ಕಪ್ಪು ಶಿಲೀಂಧ್ರ ಸೋಂಕಿಗೆ (ಮ್ಯುಕೋರ್ ಮೈಕೋಸಿಸ್-ಬ್ಲ್ಯಾಕ್ ಫಂಗಸ್) ಒಳಪಡುವವರ ಸಂಖ್ಯೆ ಏರಿಕೆ ಕಾಣುತ್ತಿದ್ದು, ಶುಕ್ರವಾರ 6 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ.

ವಿಕ್ಟೋರಿಯಾದಲ್ಲಿ ಇಬ್ಬರಲ್ಲಿ ಹಾಗೂ ಬೌರಿಂಗ್ ಆಸ್ಪತ್ರೆಯಲ್ಲಿ ನಾಲ್ವರಲ್ಲಿ ಶಿಲೀಂಧ್ರ ಸೋಂಕು ಕಾಣಿಸಿಕೊಂಡಿದೆ. ಇದರಿಂದಾಗಿ ವಿಕ್ಟೋರಿಯಾದಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ 20ಕ್ಕೆ ಏರಿಕೆಯಾಗಿದೆ. ಬೌರಿಂಗ್‌ನಲ್ಲಿ 28 ಮಂದಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದು, ಇಬ್ಬರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಅಲ್ಲಿ ಹಾಸಿಗೆ ಸಮಸ್ಯೆ ತಲೆದೋರಿದ್ದು, ರೋಗಿಗಳು ದಾಖಲಾತಿಗಾಗಿ ಕಾಯಲಾರಂಭಿಸಿದ್ದಾರೆ.

'ಶಿಲೀಂಧ್ರ ಸೋಂಕಿಗೆ 10 ಹಾಸಿಗೆಗಳನ್ನು ಮೀಸಲಿಡಲಾಗಿತ್ತು. ಈಗ 28 ಮಂದಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಹಾಸಿಗೆ ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸಲು ಅವಕಾಶವಿಲ್ಲ. ಹೀಗಾಗಿ, ಹೊಸ ದಾಖಲಾತಿ ಮಾಡಿಕೊಳ್ಳಲಾಗುತ್ತಿಲ್ಲ. ಔಷಧಕ್ಕೆ ಕೂಡ ಬೇಡಿಕೆ ಹೆಚ್ಚಿದ್ದು, ಹಲವರು ಈ ಬಗ್ಗೆ ವಿಚಾರಿಸುತ್ತಿದ್ದಾರೆ' ಎಂದು ಬೌರಿಂಗ್ ಆಸ್ಪತ್ರೆ ನಿರ್ದೇಶಕ ಡಾ. ಮನೋಜ್ ಕುಮಾರ್ ತಿಳಿಸಿದರು.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

11,03,844 ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
2,89,131	8,04,056	10,656

ದಿನದ ಏರಿಕೆ

ಹೊಸ ಪ್ರಕರಣ	9,591
ಗುಣಮುಖ	26,956
ಸಾವು	129

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

200ಕ್ಕೂ ಅಧಿಕ ಮಂದಿಗೆ ಸೋಂಕು: ಮಣಿಪಾಲ್, ಎಚ್‌ಸಿಜಿ, ಅಪೋಲೊ, ನಾರಾಯಣ ನೇತ್ರಾಲಯ, ಟ್ರಸ್ಟ್‌ವೆಲ್, ಫೋರ್ಟಿಸ್ ಸೇರಿದಂತೆ ನಗರದ ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿ ಕೂಡ ಶಿಲೀಂಧ್ರ ಸೋಂಕು ಪ್ರಕರಣಗಳು ವರದಿಯಾಗುತ್ತವೆ. ಈಗಾಗಲೇ 19ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದು, 30ಕ್ಕೂ ಹೆಚ್ಚು ಮಂದಿ ದೃಷ್ಟಿ ಕಳೆದುಕೊಂಡಿದ್ದಾರೆ. ಔಷಧದ ಕೊರತೆಯಿಂದ ಹಲವರು ಚಿಕಿತ್ಸೆಗೆ ಎದುರು ನೋಡುತ್ತಿದ್ದಾರೆ.

ಎಚ್‌ಸಿಜಿ ಆಸ್ಪತ್ರೆಯಲ್ಲಿ 60 ಪ್ರಕರಣ, ನಾರಾಯಣ ನೇತ್ರಾಲಯದಲ್ಲಿ 20 ಪ್ರಕರಣ, ಆಸ್ಟರ್ ಸಿಎಂಐ ಆಸ್ಪತ್ರೆಯಲ್ಲಿ 7 ಪ್ರಕರಣ, ಅಪೋಲೊ ಆಸ್ಪತ್ರೆಯಲ್ಲಿ 25 ಪ್ರಕರಣ, ಸಾಕ್ರಾ ಆಸ್ಪತ್ರೆಯಲ್ಲಿ 11 ಪ್ರಕರಣಗಳು ಈವರೆಗೆ ದೃಢಪಟ್ಟಿದೆ.

ಸರ್ಕಾರಿ ಆಸ್ಪತ್ರೆಗಳಿಗೆ 69 ಐಸಿಯು ಹಾಸಿಗೆ

ಬೆಂಗಳೂರು: ಎಂಬಸ್ಸಿ ಆರ್‌ಇಐಟಿ ನಗರದ ಮೂರು ಸರ್ಕಾರಿ ಆಸ್ಪತ್ರೆಗಳಲ್ಲಿ 69 ಐಸಿಯು ಹಾಸಿಗೆ ಸೌಲಭ್ಯ ಕಲ್ಪಿಸಿದ್ದು, ಇವುಗಳ ನಿರ್ವಹಣೆಗೆ ಅಗತ್ಯ ಮಾನವ ಸಂಪನ್ಮೂಲ, ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನೂ ಒದಗಿಸಿದೆ.

ಈ ಕಾರ್ಯಕ್ಕೆ ಎಎನ್‌ಜೆಡ್, ಸ್ವಿಸ್ ರೇ, ಕ್ಯಾಪಿಟಲ್ಯಾಂಡ್ ಸೇರಿದಂತೆ ಅನೇಕ ಕಾರ್ಪೊರೇಟ್ ಕಂಪನಿಗಳು ಕೈಜೋಡಿಸಿವೆ. ಇವು ಒಟ್ಟು ₹7.3 ಕೋಟಿ ದೇಣಿಗೆ ಸಂಗ್ರಹಿಸಿವೆ. ಚಿಕಿತ್ಸೆಯು ಸಂಪೂರ್ಣ ಉಚಿತವಾಗಿರುತ್ತದೆ.

ಅಜೀಂ ಪ್ರೇಮ್‌ಜೀ ಫೌಂಡೇಷನ್, ಡಾಕ್ಟರ್ಸ್ ಫಾರ್ ಯೂ, ಕ್ಲೌಡ್ ಫಿಸಿಷಿಯನ್ಸ್ ಮತ್ತು ಲೇಬರ್ ನೆಟ್ ಸಂಸ್ಥೆಗಳು ವೈದ್ಯರು, ಶುಶ್ರೂಷಕಿಯರನ್ನು ಒದಗಿಸಲು ನೆರವಾಗಲಿವೆ. ಆರೋಗ್ಯ ಇಲಾಖೆಯು ಪ್ರಧಾನಮಂತ್ರಿ ಪರಿಹಾರ ನಿಧಿಯ ಅಡಿಯಲ್ಲಿ ಈ ಆಸ್ಪತ್ರೆಗಳಿಗೆ ವೆಂಟಿಲೇಟರ್‌ಗಳನ್ನು ಪೂರೈಸಲಿದೆ.

69 ಹಾಸಿಗೆಗಳ ಪೈಕಿ ಇಂದಿರಾ ನಗರದ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಹಾಗೂ ಜಯನಗರದ ಸಾರ್ವಜನಿಕ ಆಸ್ಪತ್ರೆಗಳಲ್ಲಿ 46 ಹಾಸಿಗೆಗಳ ವ್ಯವಸ್ಥೆ ಮಾಡಲಾಗಿದೆ.

'ಡಿಸೆಂಬರ್ ವೇಳೆಗೆ ಬಹುತೇಕರಿಗೆ ಲಸಿಕೆ'

ಪ್ರಜಾವಾಣಿ ವಾರ್ತೆ

ದಾವಣಗೆರೆ: ಡಿಸೆಂಬರ್ ಅಂತ್ಯದ ವೇಳೆಗೆ ರಾಜ್ಯದಲ್ಲಿ ಎಲ್ಲಾ ವಯೋಮಾನದವರಿಗೂ ಕೋವಿಡ್ ಲಸಿಕೆ ನೀಡಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಶುಕ್ರವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡುತ್ತಾ, 'ರಾಜ್ಯದಲ್ಲಿ ಎಲ್ಲೂ ಆಕ್ಸಿಜನ್ ಕೊರತೆ ಇಲ್ಲ. ರೆಮ್‌ಡಿಸಿವಿರ್ ಎಲ್ಲ ಜಿಲ್ಲೆಯಲ್ಲೂ ಹೆಚ್ಚಿನ ಪ್ರಮಾಣದಲ್ಲಿವೆ. ಕೇಂದ್ರ ಈವರೆಗೂ ರೆಮ್‌ಡಿಸಿವಿರ್‌ನ 10 ಲಕ್ಷ ವಯಲ್‌ಗಳನ್ನು ಕಳುಹಿಸಿದೆ' ಎಂದರು.

ಹೆಚ್ಚು ಸೋಂಕು ಪ್ರಕರಣಗಳು ಕಂಡುಬಂದಿದ್ದ ಬೆಂಗಳೂರು ನಗರ ಹಾಗೂ ಜಿಲ್ಲೆಗಳಲ್ಲಿ ಈಗ ಸೋಂಕು ಇಳಿಮುಖವಾಗಿದೆ. ಶೇ 47ರಷ್ಟಿದ್ದ ಅದರ ಪ್ರಮಾಣ ಶೇ 23ರಿಂದ 24ಕ್ಕೆ ಇಳಿಕೆಯಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಲಾಕ್‌ಡೌನ್ ಮುಂದುವರಿಸ ಬೇಕು ಎಂಬುದು ಅನೇಕ ಸಚಿವರ ಅಭಿಪ್ರಾಯ. ಮುಖ್ಯಮಂತ್ರಿಯೂ ಅದೇ ಮನಃಸ್ಥಿತಿಯಲ್ಲಿದ್ದಾರೆ ಎಂದು ಪ್ರತಿಕ್ರಿಯಿಸಿದರು.



ಡಾ. ಕೆ. ಸುಧಾಕರ್

ಔಷಧಗಳ ಕೊರತೆ: 'ಕಪ್ಪು ಶಿಲೀಂಧ್ರ ಸೋಂಕು ಅಥವಾ ಮ್ಯೂಕರ್ ಮೈಕೊಸಿಸ್ ಚಿಕಿತ್ಸೆಗೆ ಔಷಧಗಳ ಕೊರತೆ ಇದ್ದು, ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಅವರು ಇದಕ್ಕಾಗಿ ಶತಪ್ರಯತ್ನ ಮಾಡುತ್ತಿದ್ದಾರೆ. ಕೆಲವು ಕಂಪನಿಗಳ ಜತೆಗೆ ಮಾತನಾಡಿ ಔಷಧಗಳನ್ನು ಸರಬರಾಜು ಮಾಡುವ ಭರವಸೆ ನೀಡಿದ್ದಾರೆ' ಎಂದು ತಿಳಿಸಿದರು.

2150 ವೈದ್ಯರ ನೇಮಕ: ರಾಜ್ಯದಲ್ಲಿ 2150 ವೈದ್ಯರು, 780 ತಜ್ಞ ವೈದ್ಯರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದು, ಇನ್ನೆರಡು ದಿನಗಳಲ್ಲಿ ಅವರಿಗೆ ಸ್ಥಳ ನಿಯುಕ್ತಿ ಆದೇಶ ಆಗಲಿದೆ ಎಂದು ಹೇಳಿದರು.



ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಗೌರವ ಕಾರ್ಯದರ್ಶಿ ಎನ್‌.ಎಂ.ಸುರೇಶ್ ಹಾಗೂ ಮಂಡಳಿಯ ಮಾಜಿ ಅಧ್ಯಕ್ಷ ಸಾ.ರಾ.ಗೋವಿಂದು ಮುಖ್ಯಮಂತ್ರಿ ಬಿ.ಎಸ್‌. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದರು. ತಾರಾ ಅನೂರಾಧಾ ಇದ್ದಾರೆ.

'ಪೋಷಕ ಕಲಾವಿದರಿಗೂ ಪ್ಯಾಕೇಜ್ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಚಲನಚಿತ್ರ ರಂಗದಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರು, ಪೋಷಕ ಕಲಾವಿದರು ಹಾಗೂ ಅಸಂಘಟಿತ ಕಾರ್ಮಿಕರನ್ನು ಗಮನದಲ್ಲಿಟ್ಟುಕೊಂಡು ವಿಶೇಷ ಪ್ಯಾಕೇಜ್ ಪ್ರಕಟಿಸಿ' ಎಂದು ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ತಾರಾ ಅನೂರಾಧಾ ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಿಗೆ ಮನವಿ ಮಾಡಿದ್ದಾರೆ.

ಮುಖ್ಯಮಂತ್ರಿಯವರನ್ನು ಶುಕ್ರವಾರ ಭೇಟಿ ಮಾಡಿದ ಅವರು ಮನವಿ ಪತ್ರ ಸಲ್ಲಿಸಿದರು.

ಬಳಿಕ ಮಾತನಾಡಿದ ತಾರಾ, 'ಚಿತ್ರರಂಗದಲ್ಲಿ 3 ಸಾವಿರ ನೋಂದಾಯಿತ ಕಾರ್ಮಿಕರಿದ್ದಾರೆ. 125 ಸಿನಿಮಾ ಪತ್ರಕರ್ತರು ಹಾಗೂ ಸಿನಿಮಾ ಪ್ರಚಾರಕರು ಇದ್ದಾರೆ. ವಿಶೇಷ ಪ್ಯಾಕೇಜ್ ಮೂಲಕ ಇವರ ಕುಟುಂಬಗಳಿಗೆ ನೆರವಾಗಬೇಕು' ಎಂದರು.

ಇಂದಿರಾ ಕ್ಯಾಂಟೀನ್: ಆಹಾರ ವಿತರಣೆಗೆ ಹೊಸ ಆ್ಯಪ್

ಪ್ರಜಾವಾಣಿ ವಾರ್ತೆ


ಬೆಂಗಳೂರು: ಇಂದಿರಾ ಕ್ಯಾಂಟೀನ್‌ನಲ್ಲಿ ಊಟ ವಿತರಣೆ ವೇಳೆ ಯಾವುದೇ ದುರ್ಬಳಕೆ ನಡೆಯಬಾರದು, ಆಹಾರದ ಲೆಕ್ಕಾಚಾರದಲ್ಲಿ ಯಾವುದೇ ಅಕ್ರಮಗಳಿಗೆ ಆಸ್ಪದ ನೀಡದಂತೆ ಪಾರದರ್ಶಕ ವ್ಯವಸ್ಥೆ ತರುವ ಉದ್ದೇಶದಿಂದ ಬಿಬಿಎಂಪಿಯು ಹೊಸ ಆ್ಯಪ್ ಪರಿಚಯಿಸಿದೆ.

'ಬಿಬಿಎಂಪಿ ಐಸಿಪಿಡಿ' ಹೆಸರಿನ ಆ್ಯಪ್ ಬುಧವಾರದಿಂದಲೇ ಕಾರ್ಯಾರಂಭ ಮಾಡಿದ್ದು, ಇಂದಿರಾ ಕ್ಯಾಂಟೀನ್ ಆಹಾರದ ಪಾರ್ಸಲ್ ವಿತರಣೆಯ ಮಾಹಿತಿ ದಾಖಲಿಸಿಕೊಳ್ಳುತ್ತದೆ. ಇಂದಿರಾ ಕ್ಯಾಂಟೀನ್‌ನಲ್ಲಿರುವ ಸಿಬ್ಬಂದಿಯು ಆಹಾರ ಪಡೆಯುವ ಫಲಾನುಭವಿಗಳ ಫೋಟೊ, ದೂರವಾಣಿ ಸಂಖ್ಯೆ ಹಾಗೂ ಆಹಾರ ಪೊಟ್ಟಣಗಳ ಸಂಖ್ಯೆಯನ್ನು ಇದರಲ್ಲಿ ನಮೂದಿಸಬೇಕು.

ಈ ಆ್ಯಪ್‌ನಲ್ಲಿ ಫೋಟೊ ಅಪ್‌ಲೋಡ್ ಮಾಡುವಾಗ ವಿಳಂಬವಾಗುತ್ತಿದೆ. ಇದರಿಂದ ಆಹಾರ ವಿತರಣೆಯೂ ತಡವಾಗುತ್ತಿದೆ ಎಂಬ ದೂರುಗಳು ಕೇಳಿ ಬಂದಿವೆ. ಅಲ್ಲದೆ, ಹೆಚ್ಚಿನ ಸಿಬ್ಬಂದಿಗೆ ಸ್ಮಾರ್ಟ್ ಫೋನ್ ಬಳಕೆ ತಿಳಿಯದೇ ಇರುವುದರಿಂದಲೂ ಕಷ್ಟವಾಗುತ್ತಿದೆ. ಇದೇ ಆ್ಯಪ್‌ನಲ್ಲಿ ಈಗ ಆಹಾರ ವಿತರಣೆಯ ಮಾಹಿತಿ ಅಂಶವನ್ನೂ ಸೇರಿಸಿ ಹೊಸದಾಗಿ ರೂಪಿಸಲಾಗಿದೆ.

ಮನೆಗೆ ಮೂರಕ್ಕಿಂತ ಹೆಚ್ಚು ಊಟ ಅಗತ್ಯ ಇದ್ದವರು ರೇಷನ್ ಕಾರ್ಡ್ ಸಂಖ್ಯೆ ಕೊಟ್ಟು, ಆ್ಯಪ್‌ನಲ್ಲಿ ನಮೂದಿಸಿ ಒಟಿಪಿ ಸಂಖ್ಯೆಯನ್ನು ಹೇಳಿ ಆಹಾರ ಪೊಟ್ಟಣ ಪಡೆಯಬಹುದಾಗಿದೆ.

ಲಾಕ್‌ಡೌನ್ ಆರಂಭವಾದ ಬಳಿಕ ಇಂದಿರಾ ಕ್ಯಾಂಟೀನ್ ನಲ್ಲಿ ಮೂರು ಹೊತ್ತೂ ಉಚಿತ ಊಟ, ಉಪಾಹಾರವನ್ನು ನೀಡಲಾಗುತ್ತಿದೆ.



ಬಿಬಿಎಂಪಿ ಐಸಿಪಿಡಿ ಆ್ಯಪ್‌ನ ಸ್ಕ್ರೀನ್‌ಶಾಟ್

ಕೋವಿಡ್ ಪೀಡಿತರಿಗೆ ಸದ್ದಿಲ್ಲದ ದಾಸೋಹ

ಇವರು ಮನೆಮನೆಯ ಫುಡ್ ವಾರಿಯರ್ಸ್...

• ಶರತ್ ಹೆಗ್ಡೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಲಾಕ್‌ಡೌನ್ ಆರಂಭವಾಗುತ್ತಿದ್ದಂತೆಯೇ ತಮ್ಮೆಲ್ಲ ವ್ಯವಹಾರ ಸ್ಥಗಿತಗೊಳಿಸಿ ಸುಮ್ಮನಿದ್ದವರು ಬಹುತೇಕ ಮಂದಿ. ಆದರೆ, ಇಲ್ಲೊಂದು ದೊಡ್ಡ ತಂಡ ಸದ್ದಿಲ್ಲದೆ ಬೆಂಗಳೂರು ನಗರದಾದ್ಯಂತ ಕೋವಿಡ್ ಪೀಡಿತರಿಗೆ ಮನೆ ಆಹಾರ ತಲುಪಿಸುತ್ತಿದೆ.

ಇವರು 'ಫುಡ್ ವಾರಿಯರ್ಸ್'

ಇಲ್ಲಿರುವುದು ಸಣ್ಣ ಆಲೋಚನೆ. ಆದರೆ ತಲುಪಿದ್ದು ಮಾತ್ರ ಸಾವಿರಕ್ಕೂ ಮೀರಿದ ಸಂಖ್ಯೆಯ ಕೋವಿಡ್ ಸೋಂಕಿತರು.

ಹೊರಮಾವಿನಲ್ಲಿ ತಮ್ಮ ಗೃಹ ಉದ್ಯಮ 'ದಿ ಸ್ವೀಟ್ ಅಫೇರ್ ಶಾಪ್' ಹೆಸರಿನಲ್ಲಿ ಬೇಕರಿ ಉತ್ಪನ್ನ ಸಿದ್ಧಪಡಿಸುತ್ತಿರುವ ಸಮಂತಾ ಲಾಸರೋ ಅವರ ತಂಡಕ್ಕೆ ಈ ಆಲೋಚನೆ ಹೊಳೆಯಿತು.

ಕಾರ್ಯಾಚರಣೆ ಹೇಗೆ?

ಪ್ರತಿದಿನ ಮನೆಯಲ್ಲಿ ತಯಾರಿಸುವ ಆಹಾರವನ್ನು ಸ್ವಲ್ಪ ಹೆಚ್ಚಿಗೆ ಸಿದ್ಧಪಡಿಸುವುದು. ಆಯಾ ಪ್ರದೇಶದ ಬೇಡಿಕೆಗೆ ಅನುಗುಣವಾಗಿ ಆಯಾ ಸಮೀಪದ ಮನೆಯವರು ಹೆಚ್ಚುವರಿ ಆಹಾರ ಸಿದ್ಧಪಡಿಸುತ್ತಾರೆ. ಅವಶ್ಯಕತೆವುಳ್ಳವರು ಕರೆ ಮಾಡಿದಾಗ 'ಸ್ವಿಗ್ಗಿ' ಮೂಲಕ ಆಹಾರ ತಲುಪಿಸುತ್ತಾರೆ. ಪ್ರತಿ ಸೋಂಕಿತರು/ ಬಾಧಿತರಿಗೆ ಐದು ದಿನಗಳ ಕಾಲ ಎರಡು ಹೊತ್ತು ಆಹಾರ ಒದಗಿಸುತ್ತಿದೆ ಈ ತಂಡ. ಆಹಾರಕ್ಕೆ ಯಾವುದೇ ಶುಲ್ಕ ಇಲ್ಲ. ಅದನ್ನು ಪೂರೈಸುವ (ಸ್ವಿಗ್ಗಿ) ವೆಚ್ಚವನ್ನು ಫಲಾನುಭವಿಗಳು ಭರಿಸಬಹುದು. ಅದೂ ಅಸಾಧ್ಯವಾದರೆ ಇದೇ ತಂಡ ಅದನ್ನೂ ಭರಿಸುತ್ತಿದೆ.

ನಗರದಾದ್ಯಂತ 40 ಸ್ವಯಂಸೇವಕರ ತಂಡ ಮೇ 2ರಿಂದ ಈ ಕಾಯಕ ಮಾಡುತ್ತಿದೆ. ಪ್ರತಿ ಸ್ವಯಂಸೇವಕರು ತಮ್ಮಿಂದಾದಷ್ಟು ಆಹಾರ ತಯಾರಿಸಿ ಪೂರೈಸುತ್ತಿದ್ದಾರೆ. ಹೀಗೆ ಈ ತಂಡದಿಂದ ಪ್ರಯೋಜನ ಪಡೆದವರು 1,500ಕ್ಕೂ ಅಧಿಕ ಮಂದಿ.

ಈ ಸ್ವಯಂಸೇವಕರ ಪಡೆ ಬೆಳೆಯುತ್ತಲೇ ಇದೆ. ಸಾಮಾಜಿಕ ಜಾಲತಾಣಗಳು ಸಹಿತ ಸಾಧ್ಯವಿರುವ ಎಲ್ಲ ಮಾಧ್ಯಮಗಳನ್ನು ಸಂವಹನಕ್ಕಾಗಿ ಈ ತಂಡ ಬಳಸುತ್ತಿದೆ. ಇನ್ನಷ್ಟು ಜನರು ಕೈ ಜೋಡಿಸಬಹುದು. ಹಾಗಾದಾಗ ಸಾಕಷ್ಟು ಅವಶ್ಯಕತೆ ಉಳ್ಳವರಿಗೆ ನಾವು ತಲುಪಿಸಲು ಸಾಧ್ಯ ಎನ್ನುತ್ತಾರೆ ಸಮಂತಾ ಮತ್ತು ಈ ತಂಡದ ಸ್ವಯಂಸೇವಕಿ ಅರುಂಧತಿ.

ಸ್ವಯಂ ಸೇವಕರಾಗಲು ಮೊಬೈಲ್: 9880945552

ಫೇಸ್‌ಬುಕ್: https://www.facebook.com/Food-Warriors-102650378679374/

ಇನ್‌ಸ್ಟಾಗ್ರಾಂ: http://Www.instagram.com/foodwarriorsblr



ಆಹಾರ ಪೊಟ್ಟಣವನ್ನು ಸ್ವಿಗ್ಗಿ ಡೆಲಿವರಿ ಬಾಯ್‌ಗೆ ನೀಡಿದರು

ಒಳ್ಳೆ ಸುದ್ದಿ



ಕೆ.ಆರ್‌. ಮಾರುಕಟ್ಟೆ ಜಂಕ್ಷನ್ ಅಭಿವೃದ್ಧಿ ಕಾಮಗಾರಿಯನ್ನು ರಾಕೇಶ್ ಸಿಂಗ್ ಶುಕ್ರವಾರ ಪರಿಶೀಲಿಸಿದರು. ವಂದಿತಾ ಶರ್ಮ ಮತ್ತು ಹಿರಿಯ ಅಧಿಕಾರಿಗಳು ಇದ್ದಾರೆ

ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೆತ್ತಿಕೊಳ್ಳಲಾದ ಕೆ.ಆರ್. ಮಾರುಕಟ್ಟೆ ಜಂಕ್ಷನ್ ಅಭಿವೃದ್ಧಿ ಕಾಮಗಾರಿ ಹಾಗೂ ಇಂಟಿಗ್ರೇಟೆಡ್ ಮೊಬಿಲಿಟಿ ಹಬ್ ಕಾಮಗಾರಿ ಪ್ರಗತಿಯನ್ನು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅವರು ಶುಕ್ರವಾರ ಪರಿಶೀಲಿಸಿದರು.

'ಸ್ಮಾರ್ಟ್ ಸಿಟಿ' ಯೋಜನೆ ಅಡಿ ನಗರದ ವಿವಿಧೆಡೆ ನಡೆಯುತ್ತಿರುವ ಕಾಮಗಾರಿಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಲಾಕ್‌ಡೌನ್ ಅವಧಿಯಲ್ಲೂ ಕಾಮಗಾರಿಪ್ರಗತಿಯಲ್ಲಿಯಾವುದೇಹಿನ್ನಡೆಆಗದಂತೆ ನೋಡಿಕೊಳ್ಳಬೇಕು ಎಂದರು.

ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಮತ್ತು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

'ಕೋವಿಡ್: ಎಲ್ಲಾ ತಪ್ಪಿಗೂ ಕ್ಷಮೆ ಸಿಗದು'

ಪ್ರಜಾವಾಣಿ ವಾರ್ತೆ



ಬೆಂಗಳೂರು: ಎಲ್ಲಾ ಲೋಪಕ್ಕೂ ಕೋವಿಡ್ ಕಾರಣ ನೀಡಲು ಆಗುವುದಿಲ್ಲ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ನಿರೀಕ್ಷಣಾ ಜಾಮೀನು ಆದೇಶದಲ್ಲಿದ್ದ ನಿರ್ಬಂಧ ಸಡಿಲಿಕೆ ಕೋರಿದ್ದ ಅರ್ಜಿಯೊಂದನ್ನು ವಜಾಗೊಳಿಸಿದೆ. 10 ದಿನಗಳಲ್ಲಿ ಪೊಲೀಸ್ ಮುಂದೆ ಹಾಜರಾಗುವಂತೆ ಅರ್ಜಿದಾರರಿಗೆ ನಿರ್ದೇಶನ ನೀಡಿದೆ.

ಮಂಡ್ಯ ನಿವಾಸಿ ದೇವರಾಜ್ ಎಂಬುವರ ವಿರುದ್ಧ ನಾಗಮಂಗಲ ಗ್ರಾಮಾಂತರ ಪೊಲೀಸರು ಸ್ಫೋಟಕ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣವನ್ನು 2019ರ ನವೆಂಬರ್ 4ರಂದು ದಾಖಲಿಸಿದ್ದರು. ಟೈಫಾಯಿಡ್‌ನಿಂದ ಬಳಲುತ್ತಿದ್ದ ಕಾರಣ ನೀಡಿದ್ದಕ್ಕಾಗಿ ನಿರೀಕ್ಷಣಾ ಜಾಮೀನನ್ನು ನ್ಯಾಯಾಲಯ ನೀಡಿತ್ತು. ಚೇತರಿಸಿಕೊಂಡ ಬಳಿಕ ತನಿಖಾಧಿಕಾರಿ ಮುಂದೆ ಹಾಜರಾಗುವಂತೆ ಆದೇಶಿಸಿತ್ತು.

2021 ಏಪ್ರಿಲ್ 23ರಂದು ಹೈಕೋರ್ಟ್ ಮುಂದೆ ಹೊಸ ಅರ್ಜಿ ಸಲ್ಲಿಸಿರುವ ದೇವರಾಜ್, ಕೋವಿಡ್ ಸಾಂಕ್ರಮಿಕ ರೋಗ ಎಲ್ಲೆಡೆ ತೀವ್ರವಾಗಿ ಹರಡುತ್ತಿರುವ ಕಾರಣ ಪೊಲೀಸರ ಮುಂದೆ ಶರಣಾಗಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

10 ದಿನಗಳಲ್ಲಿ ಪೊಲೀಸರ ಮುಂದೆ ಶರಣಾಗುವಂತೆ ಆದೇಶಿಸಿದ್ದರೂ, 15 ತಿಂಗಳ ಬಳಿಕ ಹೊಸ ಅರ್ಜಿ ಹಿಡಿದು ಬಂದಿರುವ ಅರ್ಜಿದಾರರ ವಿರುದ್ಧ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಪೀಠ ಗರಂ ಆಯಿತು. ಎಲ್ಲಾ ಲೋಪಕ್ಕೂ ಸಾಂಕ್ರಾಮಿಕ ರೋಗದ ಕಾರಣ ನೀಡಿ ಕ್ಷಮಿಸಲು ಆಗುವುದಿಲ್ಲ ಎಂದು ಅಭಿಪ್ರಾಯಪಟ್ಟಿತು.

'ಟೈಫಾಯಿಡ್‌ನಿಂದ ಚೇತರಿಸಿಕೊಂಡಿದ್ದರೂ ಪೊಲೀಸ್ ಠಾಣೆಗೆ ಶರಣಾಗಿಲ್ಲ. ಈ ತನಕ ನ್ಯಾಯಾಲಯವನ್ನು ಸಂಪರ್ಕಿಸುವ ಪ್ರಯತ್ನವನ್ನೂ ಮಾಡಿಲ್ಲ. ಈಗ ಕೋವಿಡ್ ತೀವ್ರಗೊಂಡಿರುವ ಸಂದರ್ಭದಲ್ಲಿ ಅರ್ಜಿ ಸಲ್ಲಿಸಲಾಗಿದೆ. ಈ ಅರ್ಜಿಯನ್ನು ಮಾನ್ಯ ಮಾಡಲು ಸಾಧ್ಯವಿಲ್ಲ' ಎಂದು ತಿಳಿಸಿತು. ಅರ್ಜಿದಾರನಿಗೆ ₹2 ಸಾವಿರ ದಂಡ ವಿಧಿಸಿ ಅರ್ಜಿ ವಜಾಗೊಳಿಸಿತು.

ಪೇಟೆಂಟ್ ವಿನಾಯಿತಿ ಪಡೆಯಲು ಕೋರಿ ಅರ್ಜಿ

ಬೆಂಗಳೂರು: ವೈದ್ಯಕೀಯ ತುರ್ತು ಸಂದರ್ಭದಲ್ಲಿ ಸ್ವಯಂ ಪ್ರೇರಿತ ಪರವಾನಗಿ ಪಡೆದುಕೊಳ್ಳಲು ಪೇಟೆಂಟ್ ಕಾಯ್ದೆಯಲ್ಲಿರುವ ವಿನಾಯಿತಿ ಬಳಸಿಕೊಳ್ಳಲು ಔಷಧ ಕಂಪನಿಗಳನ್ನು ಪ್ರೋತ್ಸಾಹಿಸಬೇಕು ಎಂದು ಕೋರಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ನೀಡಿದೆ.

ಪೇಟೆಂಟ್‌ಗಳ ಪ್ರಧಾನ ನಿಯಂತ್ರಕರು, ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆ(ಐಸಿಎಂಆರ್) ಮತ್ತು ಭಾರತೀಯ ಪ್ರಧಾನ ಔಷಧ ನಿಯಂತ್ರಕರಿಗೂ ನೋಟಿಸ್ ನೀಡಲು ಆದೇಶಿಸಿದೆ.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಬೆಂಗಳೂರಿನ(ಐಐಎಂಬಿ) ನಿವೃತ್ತ ಪ್ರಾಧ್ಯಾಪಕ ಪ್ರೊ.ಎಸ್. ಚಂದ್ರಶೇಖರ್ ಈ ಅರ್ಜಿ ಸಲ್ಲಿಸಿದ್ದಾರೆ. 'ವೈದ್ಯಕೀಯ ತುರ್ತು ಪರಿಸ್ಥಿತಿಯನ್ನು ಕೋವಿಡ್ ಸೃಷ್ಟಿಸಿದೆ. ಈ ಸಂದರ್ಭದಲ್ಲಿ ಔಷಧ ಕಂಪನಿಗಳು ಪೇಟೆಂಟ್ ಕಾಯ್ದೆ 1970ರ ಸೆಕ್ಷನ್ 92ರ ಪ್ರಕಾರ ವಿನಾಯಿತಿ ಪಡೆಯಲು ಅವಕಾಶ ಇದೆ. ಇದನ್ನು ಪಡೆದುಕೊಳ್ಳುವಂತೆ ಔಷಧ ಕಂಪನಿಗಳನ್ನು ಸರ್ಕಾರ ಪ್ರೋತ್ಸಾಹಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

'ಕೋವಿಡ್ ಲಸಿಕೆ ತಯಾರಿಕೆ ಮತ್ತು ವಿತರಣೆಯಲ್ಲಿನ ವೇಗವನ್ನು ಖಚಿತಪಡಿಸಿಕೊಳ್ಳಲು ಐಸಿಎಂಆರ್‌ಗೆ ನಿರ್ದೇಶನ ನೀಡಬೇಕು. 2021ರ ಆಗಸ್ಟ್ ವೇಳೆಗೆ ಇಡೀ ದೇಶದ ಜನರಿಗೆ ಲಸಿಕೆ ನೀಡಲು ಕಾರ್ಯತಂತ್ರ ರೂಪಿಸುವ ಅವಶ್ಯಕತೆ ಇದೆ' ಎಂದು ಅವರು ತಿಳಿಸಿದ್ದಾರೆ.



ಲಸಿಕೆಗಾಗಿ ಸರದಿ

ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ವಿಕ್ಟೋರಿಯಾ ಆಸ್ಪತ್ರೆ ಮುಂದೆ ಶುಕ್ರವಾರ ಸೇರಿದ ಜನ - ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ.

21 ಕಪ್ಪು ಶಿಲೀಂಧ್ರ ಪ್ರಕರಣ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಜಿಲ್ಲೆಯಲ್ಲಿ ಕಪ್ಪು ಶಿಲೀಂಧ್ರ ಪ್ರಕರಣ ದಾಂಗುಡಿ ಇಟ್ಟಿದ್ದು, ಈವರೆಗೆ ಒಟ್ಟು 21 ಪ್ರಕರಣಗಳು ಪತ್ತೆಯಾಗಿವೆ. ಡಾ.ಪ್ರಹ್ಲಾದ್ ನೇತೃತ್ವದಲ್ಲಿ ತಂಡವೊಂದನ್ನು ರಚಿಸಲಾಗಿದೆ.

ಕಪ್ಪು ಶಿಲೀಂಧ್ರ ಕಾಣಿಸಿಕೊಂಡ ಬಹುತೇಕರು ಕೋವಿಡ್‌ಗೆ ಚಿಕಿತ್ಸೆ ಪಡೆದವರು. ತೀವ್ರ ಮಧುಮೇಹದಿಂದ ಬಳಲುತ್ತಿದ್ದ ರೋಗಿಗಳನ್ನು ಇದು ಬಾಧಿಸಿದೆ. ಬಸವೇಶ್ವರ ವೈದ್ಯಕೀಯ ಕಾಲೇಜು ಆಸ್ಪತ್ರೆ ಹಾಗೂ ಚಳ್ಳಕೆರೆ ರಸ್ತೆಯಲ್ಲಿರುವ ಡಾ.ಪ್ರಹ್ಲಾದ್ ಅವರ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

'ಕಪ್ಪು ಶಿಲೀಂಧ್ರ ಪ್ರಕರಣ ಸಾಂಕ್ರಾಮಿಕವಲ್ಲ. ಇದು ಒಬ್ಬರಿಂದ ಮತ್ತೊಬ್ಬರಿಗೆ ಹರಡುವುದಿಲ್ಲ. ಸಾರ್ವಜನಿಕರು ಗಾಬರಿ ಆಗುವ ಅಗತ್ಯವಿಲ್ಲ. ಈ ರೋಗಿಗಳ ಮೇಲೆ ಆರೋಗ್ಯ ಇಲಾಖೆ ನಿಗಾ ಇಟ್ಟಿದೆ. ಎಲ್ಲರೂ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸಿ.ಎಲ್. ಫಾಲಾಕ್ಷ ತಿಳಿಸಿದರು.

ಮತ್ತೆ 6 ಮಂದಿಗೆ ಶಿಲೀಂಧ್ರ ಸೋಂಕು

ಕೋಲಾರ: ಜಿಲ್ಲೆಯಲ್ಲಿ ಹೊಸದಾಗಿ 6 ಮಂದಿಯಲ್ಲಿ ಶಿಲೀಂಧ್ರ ಸೋಂಕಿನ (ಬ್ಲ್ಯಾಕ್ ಫಂಗಸ್) ಲಕ್ಷಣ ಕಾಣಿಸಿಕೊಂಡಿದೆ.

ಕಳೆದ ವಾರ 12 ಮಂದಿಯಲ್ಲಿ ಈ ಸೋಂಕು ಪತ್ತೆಯಾಗಿತ್ತು. ಇದೀಗ ಮತ್ತೆ 6 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿರುವುದು ಆತಂಕಕ್ಕೆ ಕಾರಣವಾಗಿದೆ. ಕೋವಿಡ್–19 ಸಾವಿನ ದವಡೆಯಿಂದ ಪಾರಾಗಿ ಮನೆಗೆ ಮರಳಿದವರಲ್ಲಿ ಈ ಸೋಂಕು ಕಾಣಿಸಿಕೊಳ್ಳುತ್ತಿದೆ.

'ಜಿಲ್ಲೆಯಲ್ಲಿ ಒಟ್ಟಾರೆ 18 ಮಂದಿಯಲ್ಲಿ ಶಿಲೀಂಧ್ರ ಸೋಂಕಿನ ಲಕ್ಷಣ ಕಾಣಿಸಿಕೊಂಡಿವೆ. ಈ ಪೈಕಿ 5 ಮಂದಿಗೆ ಸೋಂಕು ಇರುವುದು ಖಚಿತವಾಗಿದೆ. ಉಳಿದ 13 ಮಂದಿಯ ವರದಿ ಬರಬೇಕಿದೆ' ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಜಗದೀಶ್ ತಿಳಿಸಿದ್ದಾರೆ.

ಬಿ.ಎಲ್‌.ಸಂತೋಷ್ ಟೀಕೆ

ಪಡಿತರ ಅಂಗಡಿಗಳ ಮಾಲೀಕರು ಹಾಗೂ ಪರಿಹಾರದ ಹಣ ನೀಡುವವರು ಟಿಎಂಸಿ ಪಕ್ಷದವರೇ ಆಗಿರುತ್ತಾರೆ ಎಂದರು.

'ಬಂಗಾಳದಲ್ಲಿ ರಾಜಕೀಯ ಅಪರಾಧೀಕರಣ'

ಬೆಂಗಳೂರು: 'ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆಗಳ ನಂತರ 7,300ಕ್ಕೂ ಹೆಚ್ಚು ಹಿಂಸಾಚಾರದ ಘಟನೆಗಳು ನಡೆದಿವೆ. ಘಟನೆಯಲ್ಲಿ ಹಲವು ಅಮಾಯಕರು ಬಲಿಯಾಗಿದ್ದಾರೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್ ಆರೋಪಿಸಿದರು.

'ಚುನಾವಣೆ ನಂತರ ಬಂಗಾಳದ ಪರಿಸ್ಥಿತಿ' ಕುರಿತು ಸಂವಾದ ವತಿಯಿಂದ ಶುಕ್ರವಾರ ನಡೆದ ಆನ್‌ಲೈನ್ ಸಂವಾದದಲ್ಲಿ ಮಾತನಾಡಿದರು.



'ಪಶ್ಚಿಮ ಬಂಗಾಳದಲ್ಲಿ ಚುನಾವಣೆಯ ಸಂದರ್ಭದಲ್ಲಿ ಆರು ಸಾವಿರಕ್ಕೂ ಹೆಚ್ಚಿನ ಹಿಂಸಾಚಾರ ಘಟನೆಗಳು ನಡೆದಿದ್ದು, 40 ಪ್ರಕರಣಗಳಲ್ಲಿ ಮಾತ್ರ ಎಫ್‌ಐಆರ್ ದಾಖಲಾಗಿದ್ದು, ಅಲ್ಲಿನ ಪೊಲೀಸ್ ವ್ಯವಸ್ಥೆ ರಾಜಕೀಯಕರಣಗೊಂಡಿದೆ. ಆಡಳಿತದ ರಾಜಕೀಯಕರಣ ಹಾಗೂ ರಾಜಕೀಯದ ಅಪರಾಧೀಕರಣವನ್ನು ಆ ರಾಜ್ಯದಲ್ಲಿ ಕಾಣಬಹುದು' ಎಂದರು.

'ಅಲ್ಲಿನ ಆಡಳಿತ ಹಾಗೂ ರಾಜಕೀಯಕ್ಕೆ ಭ್ರಷ್ಟಾಚಾರ ನೆಲೆ ನೀಡಿದೆ. ಕೇಂದ್ರ ಸರ್ಕಾರ ಗರೀಬ್ ಕಲ್ಯಾಣ ಯೋಜನೆಯಡಿ ನೀಡಿದ ಪಡಿತರ ಹಾಗೂ ಕೊರೊನಾ ಸಂದರ್ಭದಲ್ಲಿ ವಿತರಿಸಿರುವ ಪಡಿತರ, ಪರಿಹಾರವನ್ನು ಪಶ್ಚಿಮ ಬಂಗಾಳದ ಆಡಳಿತ ವ್ಯವಸ್ಥೆ ತಿಂದು ತೇಗಿದೆ' ಎಂದು ಟೀಕಿಸಿದರು.


'ಬಂಗಾಳದಲ್ಲಿ ಸ್ಥಳೀಯ ಮಟ್ಟದಲ್ಲಿರುವ ಅನೇಕ ಟಿಎಂಸಿ ನಾಯಕರು ಬಾಂಗ್ಲಾದೇಶದಿಂದ ಅಕ್ರಮವಾಗಿ ವಲಸೆ ಬಂದವರು. ಚುನಾವಣೆ ನಂತರದ ಹಿಂಸಾಚಾರದ ಹಿಂದೆ ಇದ್ದವರು ಮುಸ್ಲಿಂ ವಲಸಿಗರು' ಎಂದು ಹೇಳಿದರು.

ರಾಜೀನಾಮೆಗೆ ಮುಂದಾದ ಎಂಎಲ್‌ಸಿ ಪುಟ್ಟಣ್ಣ

ಪ್ರಜಾವಾಣಿ ವಾರ್ತೆ

ರಾಮನಗರ: 'ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ಶಿಕ್ಷಕರ ವಿಚಾರದಲ್ಲಿ ಸರ್ಕಾರ ಕುರುಡನಂತೆ ವರ್ತಿಸುತ್ತಿದೆ. ಈ ಧೋರಣೆ ಬದಲಿಸಿಕೊಳ್ಳದೇ ಹೋದಲ್ಲಿ ರಾಜೀನಾಮೆಗೂ ಸಿದ್ಧನಿದ್ದೇನೆ' ಎಂದು ಬಿಜೆಪಿಯವರೇ ಆದ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಎಚ್ಚರಿಸಿದ್ದಾರೆ.

ಕೋವಿಡ್‌ನಿಂದ ಸಂಕಷ್ಟಕ್ಕೆ ಒಳಗಾಗಿರುವ ಖಾಸಗಿ ಶಿಕ್ಷಕರಿಗೆ ಈ ಬಾರಿಯ ಆರ್ಥಿಕ ಪ್ಯಾಕೇಜ್‌ನಲ್ಲಿ ಯಾವುದೇ ಪರಿಹಾರ ನೀಡದ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದ ಪುಟ್ಟಣ್ಣ, 'ಪದೇ ಪದೇ ಮನವಿ ಮಾಡಿಕೊಂಡಾಗ್ಯೂ ಸರ್ಕಾರ ಖಾಸಗಿ ಶಾಲೆಗಳ ಶಿಕ್ಷಕರ ನೋವಿಗೆ ಸ್ಪಂದಿಸಿಲ್ಲ. ಹೀಗಾಗಿ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾದವರು ರಾಜೀನಾಮೆ ನೀಡಬೇಕು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಒತ್ತಡ ಹೆಚ್ಚಾಗುತ್ತಿದೆ. ನಾನೂ ಈ ಬಗ್ಗೆ ಚಿಂತನೆ ನಡೆಸಿದ್ದೇನೆ' ಎಂದರು.



ಪುಟ್ಟಣ್ಣ

'ಈ ಸರ್ಕಾರದ ಬಗ್ಗೆ ಭಾರಿ ನಿರೀಕ್ಷೆ ಇತ್ತು. ಆದರೆ, ನಮ್ಮ ಬೇಡಿಕೆಗಳ ಬಗ್ಗೆ ನಯಾಪೈಸೆಯ ಸ್ಪಂದನೆ ಸಿಗುತ್ತಿಲ್ಲ. ಖಾಸಗಿ ಶಾಲೆಗಳಿಗೆ ಇನ್ನೂ ಆರ್‌ಟಿಇ ಶುಲ್ಕ ಬಿಡುಗಡೆ ಮಾಡಿಲ್ಲ. ಮತ್ತೊಂದೆಡೆ ಶಿಕ್ಷಣ ಸಚಿವರು ಅರ್ಧ ವರ್ಷ ಮುಂಚೆಯೇ ಎಲ್ಲ ವಿದ್ಯಾರ್ಥಿಗಳೂ ಪಾಸ್ ಎಂದು ಘೋಷಿಸುತ್ತಾರೆ. ಹೀಗಿರುವಾಗ ಯಾವ ಪೋಷಕರು ಖಾಸಗಿ ಶಾಲೆಗಳಿಗೆ ಶುಲ್ಕ ಕಟ್ಟುತ್ತಾರೆ?' ಎಂದು ಪ್ರಶ್ನಿಸಿದರು.

'ಸರ್ಕಾರ ಕೇವಲ ಸರ್ಕಾರಿ ಮತ್ತು ಅನುದಾನಿತ ಶಾಲೆಗಳವರನ್ನು ಮಾತ್ರ ಶಿಕ್ಷಕರು ಎಂದು ಭಾವಿಸಿದೆ. ಖಾಸಗಿ ಶಾಲೆಗಳ ನೂರಾರು ಶಿಕ್ಷಕರು ಕೋವಿಡ್‌ನಿಂದ ಸತ್ತಿದ್ದಾರೆ. ಆ ಸಾವು ಅವರಿಗೆ ಲೆಕ್ಕಕ್ಕಿಲ್ಲ. ಶಿಕ್ಷಣ ಸಂಸ್ಥೆಗಳು ತಮ್ಮ ಸಿಬ್ಬಂದಿಗೆ ಸಂಬಳ ಪಾವತಿಸುವ ಸ್ಥಿತಿಯಲ್ಲಿ ಇಲ್ಲ. ಹೀಗಾಗಿ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮುನ್ನ ಸರ್ಕಾರ ಸಮಸ್ಯೆ ಬಗೆಹರಿಸಬೇಕು. ವಿಮಾ ಯೋಜನೆಯನ್ನು ಖಾಸಗಿ ಶಿಕ್ಷಕರಿಗೂ ವಿಸ್ತರಿಸಬೇಕು. ಬಡತನರೇಖೆಗಿಂತ ಕೆಳಗಿರುವ ಖಾಸಗಿ ಶಿಕ್ಷಕರು ಮತ್ತು ಸಿಬ್ಬಂದಿಗೆ ಆಹಾರದ ಕಿಟ್‌ಗಳನ್ನು ವಿತರಿಸಬೇಕು' ಎಂದು ಆಗ್ರಹಿಸಿದರು.

'ಇಡೀ ಶಿಕ್ಷಣ ಇಲಾಖೆ ಗೊಂದಲದ ಗೂಡಾಗಿದೆ. ಕಡ್ಡಾಯ ವರ್ಗಾವಣೆ ರದ್ದು ಮಾಡಿ ಶಿಕ್ಷಕ ಸ್ನೇಹಿ ವರ್ಗಾವಣೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿಕೊಂಡೇ ಸರ್ಕಾರ ಎರಡು ವರ್ಷ ಕಳೆದಿದೆ' ಎಂದು ಆರೋಪಿಸಿದರು.

ಖಾತರಿ ನೀಡಿದವರಿಂದ ಸಾಲ ವಸೂಲಿ: 'ಸುಪ್ರೀಂ' ಅಸ್ತು

ನವದೆಹಲಿ (ಪಿಟಿಐ): ಕಂಪನಿಯೊಂದಕ್ಕೆ ನೀಡಿದ್ದ ಸಾಲವನ್ನು, ಖಾತರಿ ನೀಡಿದವರಿಂದ ವಸೂಲಿ ಮಾಡಲು ಬ್ಯಾಂಕುಗಳಿಗೆ ಅನುಮತಿ ನೀಡಿ ಕೇಂದ್ರ ಸರ್ಕಾರ ಹೊರಡಿಸಿದ್ದ ಅಧಿಸೂಚನೆಯನ್ನು ಸುಪ್ರೀಂಕೋರ್ಟ್ ಶುಕ್ರವಾರ ಎತ್ತಿ ಹಿಡಿದಿದೆ.

'ಹಣಕಾಸು ನಷ್ಟ ಮತ್ತು ದಿವಾಳಿ ಸಂಹಿತೆ' (ಐಬಿಸಿ)ಯಡಿ ಸಾಲ ವಸೂಲು ಮಾಡಲು ಬ್ಯಾಂಕುಗಳಿಗೆ ಅನುಮತಿ ನೀಡಿ ಕೇಂದ್ರ ಸರ್ಕಾರ 2019ರ ನವೆಂಬರ್ 15ರಂದು ಅಧಿಸೂಚನೆ ಹೊರಡಿಸಿತ್ತು. ಈ ಅಧಿಸೂಚನೆಯ ಸಿಂಧುತ್ವವನ್ನು ಪ್ರಶ್ನಿಸಿ 75ಕ್ಕೂ ಹೆಚ್ಚು ಅರ್ಜಿಗಳನ್ನು ಸಲ್ಲಿಸಲಾಗಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರರಾವ್ ಹಾಗೂ ಎಸ್. ರವೀಂದ್ರ ಭಟ್ ಅವರಿರುವ ನ್ಯಾಯಪೀಠ ಈ ಅರ್ಜಿಗಳ ವಿಚಾರಣೆ ನಡೆಸಿತು.

ಚಿತ್ರಾವಳಿ



ಬಿಬಿಎಂಪಿ ಹಾಗೂ ವೋಲ್ವೊ ಸಹಯೋಗದಲ್ಲಿ ಇಂದಿರಾನಗರದ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಎಂಡೋಕ್ರೈನಾಲಜಿ ಆ್ಯಂಡ್ ರೀಸರ್ಚ್ ಸೆಂಟರ್‌ನಲ್ಲಿ (ಕೆಐಇಆರ್) ಆರಂಭಿಸಿರುವ 100 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರವನ್ನು ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಶುಕ್ರವಾರ ಉದ್ಘಾಟಿಸಿದರು. ಬಳಿಕ ಕೇಂದ್ರದಲ್ಲಿರುವ ಯಂತ್ರಗಳ ಕುರಿತು ಮಾಹಿತಿ ಪಡೆದರು. ಸಂಸದ ಪಿ.ಸಿ. ಮೋಹನ್, ಸಚಿವ ವಿ.ಸೋಮಣ್ಣ, ಶಾಸಕ ಎಸ್‌. ರಘು ಇದ್ದರು –ಪ್ರಜಾವಾಣಿ ಚಿತ್ರ



ಟಿವಿಎಸ್ ಮೋಟಾರ್ ಕಂಪನಿಯು ಸುಂದರಂ ಕ್ಲೇಟನ್ ಲಿಮಿಟೆಡ್ ಜೊತೆಗೂಡಿ ತನ್ನ ಸಾಮಾಜಿಕ ಸೇವಾ ಸಂಸ್ಥೆ ಶ್ರೀನಿವಾಸನ್ ಸರ್ವೀಸಸ್ ಟ್ರಸ್ಟ್ ಮೂಲಕ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ₹1 ಕೋಟಿ ಮೊತ್ತ ನೀಡಿದೆ. ಚೆಕ್ ಅನ್ನು ಟಿವಿಎಸ್ ಮೋಟಾರ್ ಕಂಪನಿಯ ಉಪಾಧ್ಯಕ್ಷ (ಕಾರ್ಪೊರೇಟ್ ರಿಲೇಷನ್ಸ್) ವಿ.ಆರ್‌.ಕರುಣಾಕರ ರೆಡ್ಡಿ ಹಾಗೂ ಟಿವಿಎಸ್ ಮೋಟಾರ್ ಕಂಪನಿಯ ಸಹ ಉಪಾಧ್ಯಕ್ಷ ಸೇತುರಾಮನ್ ಅವರು ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಅವರಿಗೆ ಹಸ್ತಾಂತರಿಸಿದರು. ಟ್ರಸ್ಟ್ ವತಿಯಿಂದ ಕೋವಿಡ್ ನಿಯಂತ್ರಣಕ್ಕಾಗಿ 300 ಆಮ್ಲಜನಕ ಸಾಂದ್ರೀಕರಣ ಸಾಧನ, ಅಗತ್ಯ ವೈದ್ಯಕೀಯ ಪರಿಕರ ಸೇರಿದಂತೆ ₹ 3 ಕೋಟಿ ಮೌಲ್ಯದ ಪರಿಕರಗಳನ್ನು ನೀಡಲಾಗಿದೆ



ಪೀಣ್ಯ ದಾಸರಹಳ್ಳಿ ಸಮೀಪದ ಹೆಗ್ಗನಹಳ್ಳಿಯ ಸರ್ಕಾರಿ ಶಾಲೆಯಲ್ಲಿ ರಾಜಗೋಪಾಲನಗರ ಮತ್ತು ಹೆಗ್ಗನಹಳ್ಳಿ ವಾರ್ಡ್ ಮಟ್ಟದ ಕೋವಿಡ್ ಟ್ರಯಾಜ್ ಕೇಂದ್ರವನ್ನು ಶಾಸಕ ಆರ್‌. ಮಂಜುನಾಥ್ ಉದ್ಘಾಟಿಸಿದರು. ಬಿಬಿಎಂಪಿ ದಾಸರಹಳ್ಳಿವಲಯ ಆಯುಕ್ತ ರವೀಂದ್ರ, ಜಂಟಿ ಆಯುಕ್ತ ನರಸಿಂಹಮೂರ್ತಿ, ಡಾ, ರವಿಕುಮಾರ್‌, ಡಾ. ಅಶ್ವಿನಿ, ಆರೋಗ್ಯ ಪರಿವೀಕ್ಷಕ ಶಿವಲಿಂಗಯ್ಯ, ಜೆಡಿಎಸ್ ಮುಖಂಡರಾದ ಎಚ್‌. ಎನ್‌. ಗಂಗಾಧರ್‌, ಎಚ್‌. ಆರ್‌. ಪ್ರಕಾಶ್ ಇದ್ದರು.



ಗೋವಿಂದರಾಜನಗರ ಕ್ಷೇತ್ರದಲ್ಲಿ ವಸತಿ ಸಚಿವ ವಿ. ಸೋಮಣ್ಣ ಅವರು ಕಟ್ಟಡಗಳಿಗೆ ಸೋಂಕು ನಿವಾರಕ ದ್ರಾವಣವನ್ನು ಸಿಂಪಡಿಸುವ ಮೂಲಕ ಒಂಬತ್ತು ಸೋಂಕು ನಿವಾರಕ ದ್ರಾವಣ ಸಾಗಾಟದ ವಾಹನಗಳನ್ನು ಶುಕ್ರವಾರ ಉದ್ಘಾಟಿಸಿದರು –ಪ್ರಜಾವಾಣಿ ಚಿತ್ರ

ನೇಪಾಳ: ಸರ್ಕಾರ ರಚನೆಯ ಹಕ್ಕು ಮಂಡಿಸಿದ ಒಲಿ, ವಿರೋಧ ಪಕ್ಷಗಳು

ಕಠ್ಮಂಡು (ಪಿಟಿಐ): ನೇಪಾಳದಲ್ಲಿ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಮತ್ತು ವಿರೋಧ ಪಕ್ಷಗಳು ಪ್ರತ್ಯೇಕವಾಗಿ ಸರ್ಕಾರ ರಚನೆಯ ಹಕ್ಕು ಮಂಡಿಸಿವೆ.

ಒಲಿ ಅವರು ತಮ್ಮ ಸಿಪಿಎನ್–ಯುಎಂಎಲ್ ಪಕ್ಷದ 121 ಸಂಸದರು ಮತ್ತು ಜನತಾ ಸಮಾಜವಾದಿ ಪಕ್ಷ–ನೇಪಾಳ (ಜೆಎಸ್‌ಪಿ–ಎನ್) ಪಕ್ಷದ 32 ಸಂಸದರ ಬೆಂಬಲ ಇದೆ ಎಂದು ಅಧ್ಯಕ್ಷೆ ವಿದ್ಯಾದೇವಿ ಭಂಡಾರಿ ಅವರ ಬಳಿ ಹಕ್ಕು ಮಂಡಿಸಿದ್ದಾರೆ.

ಇದಕ್ಕೂ ಮುನ್ನ ನೇಪಾಳಿ ಕಾಂಗ್ರೆಸ್ ಅಧ್ಯಕ್ಷ ಶೇರ್ ಬಹದ್ದೂರ್ ಡಿಯುಬಾ ಅವರು ತಮಗೆ 149 ಸಂಸದರ ಬೆಂಬಲ ಇದೆ ಎಂದು ಹೇಳಿ ಸರ್ಕಾರ ರಚನೆಯ ಹಕ್ಕು ಮಂಡಿಸಿದರು.

ಸಿಪಿಎನ್–ಯುಎಂಎಲ್ ಪಕ್ಷದ ಅಧ್ಯಕ್ಷ ಒಲಿ ಅವರು ಸಂವಿಧಾನದ 76(3)ನೇ ವಿಧಿ ಪ್ರಕಾರ ಮೇ 14ರಂದು ನೇಪಾಳದ ಪ್ರಧಾನಿ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಅದಕ್ಕೂ ನಾಲ್ಕು ದಿನ ಮುನ್ನವಷ್ಟೇ ಅವರು ಸಂಸತ್ತಿನಲ್ಲಿ ವಿಶ್ವಾಸಮತ ಸಾಬೀತುಪಡಿಸುವಲ್ಲಿ ವಿಫಲರಾಗಿದ್ದರು. ಅವರು 30 ದಿನದೊಳಗೆ ಸದನದಲ್ಲಿ ವಿಶ್ವಾಸಮತ ಸಾಬೀತುಪಡಿಸಬೇಕಾಗಿತ್ತು. ಆದರೆ ಮತ್ತೆ ಸದನದಲ್ಲಿ ಈ ಪರೀಕ್ಷೆ ಎದುರಿಸುವ ಒಲವನ್ನು ಅವರು ತೋರಿರಲಿಲ್ಲ.

ಹೀಗಾಗಿ ಅಧ್ಯಕ್ಷೆ ವಿದ್ಯಾದೇವಿ ಅವರು ಇತರ ರಾಜಕೀಯ ಪಕ್ಷಗಳಿಗೆ ಸರ್ಕಾರ ರಚನೆಯ ಹಕ್ಕು ಮಂಡಿಸಲು ಅವಕಾಶ ನೀಡಿದ್ದರು. ಇದಕ್ಕಾಗಿ ಶುಕ್ರವಾರ ಸಂಜೆ 5ರವರೆಗೆ ಗಡುವು ನಿಗದಿ ಮಾಡಿದ್ದರು.

ಚೀನಾದಿಂದ ಗಡಿ ಸಮೀಪ ಅಭಿವೃದ್ಧಿ

ಬೀಜಿಂಗ್ (ಪಿಟಿಐ) : ಭಾರತದ ಅರುಣಾಚಲ ಪ್ರದೇಶ, ಭೂತಾನ್ ಮತ್ತು ನೇಪಾಳ ದೇಶಗಳ ಗಡಿ ಸಮೀಪ ಇರುವ ಟಿಬೆಟ್‌ನ ಗ್ರಾಮಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಪಡಿಸುವ ಪ್ರಯತ್ನಗಳಿಗೆ ಚೀನಾ ವೇಗ ನೀಡಿದೆ ಎಂದು ಟಿಬೆಟ್ ಕುರಿತು ಚೀನಾ ಸರ್ಕಾರ ಶುಕ್ರವಾರ ಬಿಡುಗಡೆ ಮಾಡಿರುವ ಶ್ವೇತಪತ್ರದಲ್ಲಿ ತಿಳಿಸಿದೆ.

ಹಿಮಾಲಯ ಪ್ರದೇಶದೊಂದಿಗೆ ಸುಮಾರು 4,000 ಕಿ.ಮೀ ಉದ್ದದ ಬಾಹ್ಯ ಗಡಿರೇಖೆಯನ್ನು ಹಂಚಿಕೊಳ್ಳುವುದರಿಂದ ಟಿಬೆಟ್‌ನ ಗಡಿ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಜನರ ಜೀವನವನ್ನು ಸುಧಾರಿಸುವುದು ಮುಖ್ಯವಾಗಿದೆ ಎಂದು ಚೀನಾ ಪ್ರತಿಪಾದಿಸಿದೆ. ಈ ಕುರಿತು ಅದು '1951ರಿಂದ ಟಿಬೆಟ್: ವಿಮೋಚನೆ, ಅಭಿವೃದ್ಧಿ ಮತ್ತು ಸಮೃದ್ಧಿ' ಎಂಬ ವರದಿಯಲ್ಲಿ ತಿಳಿಸಿದೆ.

ಗಡಿ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಮೂಲಕ ಜನರ ಜೀವನವನ್ನು ಸುಧಾರಿಸಲು ಎಲ್ಲಾ ಹಂತದ ಪ್ರಯತ್ನವನ್ನೂ ಸರ್ಕಾರ ಮಾಡಲಿದೆ ಎಂದು ಅದು ಹೇಳಿದೆ.

ಆಡಳಿತದಲ್ಲಿರುವ ಕಮ್ಯುನಿಸ್ಟ್ ಪಕ್ಷದ ಮಾರ್ಗದರ್ಶನದಲ್ಲಿ ಟಿಬೆಟ್‌ನ ಗಡಿ ಅಭಿವೃದ್ಧಿಗೆ ವರ್ಷದಿಂದ ವರ್ಷಕ್ಕೆ ಹೆಚ್ಚಿನ ಹಣಕಾಸನ್ನು ಹಂಚಿಕೆ ಮಾಡಲಾಗುವುದು ಎಂದು ಚೀನಾ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಆಕ್ಸ್‌ಫರ್ಡ್ ವಿದ್ಯಾರ್ಥಿ ಸಂಘ: ಭಾರತ ಮೂಲದ ಅನ್ವಿ ಅಧ್ಯಕ್ಷೆ

ಲಂಡನ್: ಭಾರತ ಮೂಲದ ವಿದ್ಯಾರ್ಥಿನಿ ಅನ್ವಿ ಭೂತಾನಿ ಅವರು ಆಕ್ಸ್‌ಫರ್ಡ್ ವಿದ್ಯಾರ್ಥಿ ಸಂಘದ (ಎಸ್‌ಯು) ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಅನ್ವಿ ಭೂತಾನಿ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಮ್ಯಾಗ್ಡಲೇನ್ ಕಾಲೇಜಿನ ಮಾನವ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ.

ಅನ್ವಿ ಭೂತಾನಿ ಅವರು ಆಕ್ಸ್‌ಫರ್ಡ್ ಎಸ್‌ಯುನ ಜನಾಂಗೀಯ ಜಾಗೃತಿ ಮತ್ತು ಸಮಾನತೆ ಅಭಿಯಾನದ (ಸಿಆರ್‌ಎಇ) ಸಹ ಅಧ್ಯಕ್ಷೆ ಮತ್ತು ಆಕ್ಸ್‌ಫರ್ಡ್ ಇಂಡಿಯಾ ಸೊಸೈಟಿಯ ಅಧ್ಯಕ್ಷರು ಕೂಡ ಆಗಿದ್ದಾರೆ.

'2021–22ರ ಸಾಲಿನ ಆಕ್ಸ್‌ಫರ್ಡ್ ವಿದ್ಯಾರ್ಥಿ ಸಂಘದ ಉಪಚುನಾವಣೆಯಲ್ಲಿ ದಾಖಲೆ ಪ್ರಮಾಣದಲ್ಲಿ ಮತದಾನವು ನಡೆದಿದೆ. ಈ ಬಾರಿ 2,506 ವಿದ್ಯಾರ್ಥಿಗಳು ಮತ ಚಲಾಯಿಸಿದ್ದಾರೆ. ಅಲ್ಲದೆ ಈ ಸ್ಥಾನಕ್ಕೆ ಮೊದಲ ಬಾರಿ 11 ವಿದ್ಯಾರ್ಥಿಗಳು ಸ್ಪರ್ಧೆಗಳಿದಿದ್ದರು' ಎಂದು ವಿದ್ಯಾರ್ಥಿ ಪತ್ರಿಕೆ 'ಚೆರ್ವೆಲ್' ಹೇಳಿದೆ.

ನಿಯಮ ಉಲ್ಲಂಘಿಸಿ ಮದುವೆ: ವೈದ್ಯೆ ವಧು–ವರ ಸೇರಿ ಐವರ ವಿರುದ್ಧ ಪ್ರಕರಣ

ಹರಪನಹಳ್ಳಿ: ವಿವಾಹ ನಿಷೇಧ ಆದೇಶ ಉಲ್ಲಂಘಿಸಿ ಮದುವೆ ನೆರವೇರಿಸಿದ ಆರೋಪದ ಮೇಲೆ ವೈದ್ಯೆ ವಧು ಮತ್ತು ವರ ಸೇರಿ ಐವರ ವಿರುದ್ಧ ಶುಕ್ರವಾರ ಪ್ರಕರಣ ದಾಖಲಾಗಿದೆ.

ತಾಲ್ಲೂಕಿನ ನಿಲುವಂಜಿ ಗ್ರಾಮದ ವಧು, ವೈದ್ಯೆ ಡಾ. ಬಸವರಾಜೇಶ್ವರಿ (ಡಾ.ನಿಧಿ), ವರ ಎಚ್‌.ಬಿ. ಸಿದ್ದಪ್ಪ, ಎನ್.ಬಸವರಾಜ್, ಕಮಲಮ್ಮ, ಬಸವರಾಜ್ ವಿರುದ್ಧ ಪ್ರಕರಣ ದಾಖಲಾಗಿದೆ.

ಶುಕ್ರವಾರ ಮದುವೆ ನಿಶ್ಚಯವಾಗಿತ್ತು. ಆದರೆ, ಸಂಬಂಧಿಕರೊಬ್ಬರು ಮೃತಪಟ್ಟಿದ್ದರಿಂದ ಗುರುವಾರ ರಾತ್ರಿ 9ಕ್ಕೆ ನಿಲುವಂಜಿ ಗ್ರಾಮದಲ್ಲಿ ಮದುವೆ ಕಾರ್ಯಕ್ರಮ ನಡೆದಿತ್ತು. ಈ ಬಗ್ಗೆ ಮಾಹಿತಿ ಪಡೆದ ಅಧಿಕಾರಿಗಳ ತಂಡ ಸ್ಥಳಕ್ಕೆ ಭೇಟಿ ನೀಡಿದಾಗ 20ರಿಂದ 25 ಜನ ಸೇರಿ ಆರತಿ ಕಾರ್ಯಕ್ರಮ ನಡೆಸುತ್ತಿದ್ದರು.

ಪ್ರಭಾರ ಕಂದಾಯ ನಿರೀಕ್ಷಕ ಎಚ್‌. ಹೊನ್ನಪ್ಪ, ಗ್ರಾಮ ಲೆಕ್ಕಾಧಿಕಾರಿ ಎಸ್‌.ಎಂ. ಚನ್ನಬಸಯ್ಯ, ಪಿಡಿಒ ಅಂಜಿನಪ್ಪ, ನೀರಗಂಟಿ ಕೊಟ್ರೇಶ್ ಅವರ ತಂಡ ಸ್ಥಳಕ್ಕೆ ಭೇಟಿ ನೀಡಿತ್ತು. ಬೆಣ್ಣೆಹಳ್ಳಿ ಗ್ರಾಮ ಪಂಚಾಯಿತಿ ಪಿಡಿಒ ಟಿ.ಅಂಜಿನಪ್ಪ ನೀಡಿದ ದೂರಿನ ಮೇರೆಗೆ ಚಿಗಟೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಮೆರಿಕ: ಶಾಲೆಗಳಲ್ಲಿ ಯೋಗ ಕಲಿಕೆ ಮಸೂದೆಗೆ ಸಹಿ

ವಾಷಿಂಗ್ಟನ್ (ಪಿಟಿಐ): ಅಲಬಾಮಾದ ಶಾಲೆಗಳಲ್ಲಿ ನಮಸ್ತೆ ಭಂಗಿಯ ಹೊರತಾಗಿ ಯೋಗವನ್ನು ಕಲಿಸಲು ಅನುಮತಿ ನೀಡುವ ಮಸೂದೆಗೆ ಅಲ್ಲಿನ ಗವರ್ನರ್ ಕೇ ಐವಿ ಅವರು ಗುರುವಾರ ಸಹಿ ಹಾಕಿದ್ದಾರೆ. ಈ ಮೂಲಕ ಯೋಗ ಕಲಿಸುವಿಕೆ ಮೇಲೆ ಹೇರಲಾಗಿದ್ದ ಮೂರು ದಶಕಗಳ ನಿಷೇಧವನ್ನು ತೆರವುಗೊಳಿಸಲಾಗಿದೆ.

1993ರಲ್ಲಿ ಅಲಬಾಮಾ ರಾಜ್ಯ ಶಿಕ್ಷಣ ಮಂಡಳಿಯು ಯೋಗವು ಹಿಂದೂ ಧರ್ಮದೊಂದಿಗೆ ಸಂಬಂಧವನ್ನು ಹೊಂದಿದೆ ಎಂಬ ಕಾರಣಕ್ಕಾಗಿ ಶಾಲೆಗಳಲ್ಲಿ ಯೋಗವನ್ನು ಕಲಿಸದಂತೆ ನಿರ್ಬಂಧ ಹೇರಿತ್ತು.

ಶಿಲ್ಪಿ ಮೊಹಪಾತ್ರ ಅವರ ಮಕ್ಕಳು ಇನ್ನಿಲ್ಲ

ಭುವನೇಶ್ವರ, ಒಡಿಶಾ: ರಾಜ್ಯಸಭೆಯ ಮಾಜಿ ಸದಸ್ಯ, ಪ್ರಖ್ಯಾತ ಶಿಲ್ಪಿ ರಘುನಾಥ್ ಮೊಹಪಾತ್ರ ಅವರ ನಿಧನದ ಬೆನ್ನಲ್ಲೇ ಅವರ ಇಬ್ಬರು ಮಕ್ಕಳು ಕೂಡ ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

ರಘುನಾಥ್ ಮೊಹಪಾತ್ರ ಅವರು ಮೇ 9ರಂದು ಸೋಂಕಿನಿಂದಾಗಿ ಭುವನೇಶ್ವರದ ಏಮ್ಸ್ ಆಸ್ಪತ್ರೆಯಲ್ಲಿ ನಿಧನರಾಗಿದ್ದರು. ಇದೇ ಆಸ್ಪತ್ರೆಯಲ್ಲಿ ಅವರ ಕಿರಿಯ ಮಗ, ಒಡಿಶಾದ ರಣಜಿ ಟ್ರೋಫಿ ಕ್ರಿಕೆಟ್ ತಂಡದ ಮಾಜಿ ನಾಯಕ ಪ್ರಶಾಂತ್ ಮೊಹಪಾತ್ರ ಅವರು ಕೋವಿಡ್‌ನಿಂದಾಗಿ ಬುಧವಾರ ಮೃತಪಟ್ಟಿದ್ದಾರೆ.

'ರಘುನಾಥ್ ಅವರ ಹಿರಿಯ ಮಗ ಜಶೋಬಂತ ಮೊಹಪಾತ್ರ ಅವರಲ್ಲಿಯೂ ಸೋಂಕು ದೃಢಪಟ್ಟಿತ್ತು. ಅವರನ್ನು ಏಮ್ಸ್ ಆಸ್ಪತ್ರೆಯಿಂದ ಒಡಿಶಾದ ಕೋವಿಡ್ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಅವರು ಗುರುವಾರ ಆಸ್ಪತ್ರೆಯಲ್ಲೇ ಕೊನೆ ಉಸಿರೆಳೆದರು' ಎಂದು ಆಸ್ಪತ್ರೆ ಹೇಳಿಕೆ ಬಿಡುಗಡೆ ಮಾಡಿದೆ.

ನಿಧನ ವಾರ್ತೆ

ಕೆ.ಎನ್‌. ವೆಂಕಟೇಶ್



ಬೆಂಗಳೂರು : ಕೆ.ಆರ್.ಪುರಂನ ಸಾಯಿ ಲೇಔಟ್ ನಿವಾಸಿ, ಎಲ್‌ಐಸಿ ಫೇರ್ಮನ್ಸ್ ಕ್ಲಬ್ ಸದಸ್ಯರಾದ ಕೆ.ಎನ್. ವೆಂಕಟೇಶ್ (72) ಶುಕ್ರವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರಿಯರು ಇದ್ದಾರೆ. ಅವರು ಮೂಲತಃ ಶಿವಮೊಗ್ಗ ಜಿಲ್ಲೆ ಕುಂಸಿಯವರು.

ಕೆ.ಟಿ. ರಾಜಶೇಖರ್



ಮಾಗಡಿ (ರಾಮನಗರ): ಎಸ್‌ಆರ್‌ಎಸ್ ಟ್ರಾವೆಲ್ಸ್ ಕಂಪನಿಯ ಮಾಲೀಕ ಕೆ.ಟಿ. ರಾಜಶೇಖರ್ (78) ಕೋವಿಡ್ ಸೋಂಕಿನಿಂದಾಗಿ ಶುಕ್ರವಾರ ನಿಧನರಾದರು.

ಅವರು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ದುಡುಪನಹಳ್ಳಿಯವರು. 1961ರಲ್ಲಿ ಬೆಂಗಳೂರಿನಿಂದ ಕುಣಿಗಲ್‌ಗೆ ಬಸ್ ಸೇವೆ ಆರಂಭಿಸುವ ಮೂಲಕ ಸಾರಿಗೆ ಉದ್ಯಮಕ್ಕೆ ಇಳಿದ ರಾಜಶೇಖರ್, 1981ರಲ್ಲಿ ಎಸ್‌ಆರ್‌ಎಸ್ ಹೆಸರಿನಲ್ಲಿ ಪ್ರವಾಸಿ ಮತ್ತು ಗುತ್ತಿಗೆ ಆಧಾರದ ಬಸ್ ಸೇವೆ ಆರಂಭಿಸಿದರು. ಇಂದು ಎಸ್‌ಆರ್‌ಎಸ್ ಕಂಪನಿ 5,500ಕ್ಕೂ ಹೆಚ್ಚು ಬಸ್‌ಗಳನ್ನು ಹೊಂದಿದ್ದು, ದೇಶದ ಪ್ರತಿಷ್ಠಿತ ಸಾರಿಗೆ ಕಂಪನಿಗಳಲ್ಲಿ ಒಂದಾಗಿದೆ.

ಅವರಿಗೆ ಪುತ್ರಿ, ಅಳಿಯ ಇದ್ದಾರೆ. ಬೆಂಗಳೂರಿನಲ್ಲಿ ಅಂತ್ಯಕ್ರಿಯೆ ನಡೆಯಿತು.

ತೋಟಗಳಲ್ಲೇ ನಾಶವಾಗುತ್ತಿರುವ ಬೆಳೆ

ಸಂಕಷ್ಟದಲ್ಲಿರುವ ರೈತರ ನೆರವಿಗೆ ಒತ್ತಾಯ

● ಡಿ.ಸುರೇಶ್

ಯಲಹಂಕ: ಲಾಕ್‌ಡೌನ್‌ನಿಂದ ರೈತರು ಬೆಳೆದ ಬೆಳೆಗಳನ್ನು ಮಾರಾಟ ಮಾಡಲು ಸಾಧ್ಯವಾಗದೆ ತೋಟಗಳಲ್ಲೇ ನಾಶವಾಗುತ್ತಿದ್ದು, ಇದರಿಂದ ಕಂಗಾಲಾಗಿರುವ ರೈತರ ನೆರವಿಗೆ ಸರ್ಕಾರ ಕೂಡಲೇ ಧಾವಿಸಬೇಕು ಎಂದು ರೈತರು ಹಾಗೂ ರೈತಸಂಘಟನೆಗಳ ಮುಖಂಡರು ಒತ್ತಾಯಿಸಿದ್ದಾರೆ.

ವಿದ್ಯುತ್ ಕಣ್ಣಾಮುಚ್ಚಾಲೆ, ಅಂತರ್ಜಲ ಮಟ್ಟ ಕುಸಿತದಿಂದ ನೀರಿನ ಸಮಸ್ಯೆ, ಕೂಲಿಕಾರ್ಮಿಕರ ಸಮಸ್ಯೆ, ರಸಗೊಬ್ಬರಗಳ ಬೆಲೆ ಏರಿಕೆಯಂತಹ ತೊಂದರೆಗಳ ನಡುವೆ ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿ ಬೆಳೆ ಬೆಳೆದಿದ್ದರೂ, ಈಗ ಕೊರೊನಾ ಲಾಕ್‌ಡೌನ್ ಪರಿಣಾಮ, ಕೈಗೆ ಬಂದಿದ್ದು ಬಾಯಿಗೆ ಬರದಂತಾಗಿದೆ. ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಸರ್ಕಾರ ಮಧ್ಯಪ್ರವೇಶಿಸಿ ರೈತರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂಬುದು ರೈತರ ಒತ್ತಾಯ.



ಮಾರಾಟವಾಗದೆ ತೋಟದಲ್ಲೇ ಉಳಿದಿರುವ ಕುಂಬಳಕಾಯಿ ಬೆಳೆ

ಬೆಂಗಳೂರು ಉತ್ತರ, ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ, ಮಧುಗಿರಿ, ಕೊರಟಗೆರೆ, ಆನೇಕಲ್, ದೇವನಹಳ್ಳಿ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಹಾಗೂ ಹೊಸಕೋಟೆ ಸುತ್ತಮುತ್ತಲ ಪ್ರದೇಶಗಳಲ್ಲಿ ರೈತರು ಬೆಳೆದಿರುವ ತರಕಾರಿ, ಹಣ್ಣು ಹಾಗೂ ಹೂವಿನ ಬೆಳೆಗಳನ್ನು ಮಾರಾಟಮಾಡಲು ಸಾಧ್ಯವಾಗುತ್ತಿಲ್ಲ. ಮತ್ತೊಂದೆಡೆ ಬೆಲೆಗಳು ಕುಸಿದಿರುವುದರಿಂದ ಬೆಳೆಗಳನ್ನು ಕೇಳುವವರೇ ಇಲ್ಲದಂತಾಗಿ ತೋಟಗಳಲ್ಲೇ ಕೊಳೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಜಮೀನುಗಳನ್ನು ಕಳೆದುಕೊಂಡಿರುವ ಕೆಲವು ರೈತರು ಭೋಗ್ಯಕ್ಕೆ ಭೂಮಿ ಪಡೆದು ಕೃಷಿ ಮಾಡುತ್ತಿದ್ದಾರೆ. ಕುಂಬಳಕಾಯಿ, ಸೋರೇಕಾಯಿ ಮತ್ತಿತರ ತರಕಾರಿಗಳು, ಸೀಬೆ, ಸಪೋಟ, ಪಪ್ಪಾಯ, ನೇರಳೆಹಣ್ಣು ಸೇರಿದಂತೆ ಹೂವಿನ ಬೆಳೆಗಳನ್ನು ಬೆಳೆದಿದ್ದಾರೆ. ಆದರೆ, ಬೆಳೆಗಳನ್ನು ಸಾಗಿಸಲು ಅವರಿಗೆ ಯಾವುದೇ ಪಾಸ್ ವಿತರಿಸಿಲ್ಲ. ಮಾರಾಟ ಮಾಡಲು ತೆರಳುವ ರೈತರ ಮೇಲೆ ಪೊಲೀಸರು ಲಾಠಿಚಾರ್ಜ್ ಮಾಡುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ರೈತರಿಗೆ ಪಾಸ್ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಪ್ರೊ.ನಂಜುಂಡಸ್ವಾಮಿ ಸ್ಥಾಪಿತ ಕರ್ನಾಟಕ ರಾಜ್ಯ ರೈತಸಂಘದ ಅಧ್ಯಕ್ಷ ವಿ.ಆರ್.ನಾರಾಯಣ ರೆಡ್ಡಿ ಆಗ್ರಹಿಸಿದರು.

ಇಂತಹ ಸಂದರ್ಭದಲ್ಲಿ ಸರ್ಕಾರ ಮಧ್ಯಪ್ರವೇಶಿಸಿ ಬೆಳೆಗಳ ಮಾರಾಟಕ್ಕೆ ಮುಕ್ತ ಅವಕಾಶ ಕಲ್ಪಿಸಬೇಕು. ಇಲ್ಲದಿದ್ದರೆ ಬೆಳೆಗಳನ್ನು ಖರೀದಿಸಿ ಬೆಂಬಲ ಬೆಲೆ ನೀಡಬೇಕು. ಇಲ್ಲವಾದರೆ ರೈತರು ಪಡೆದಿರುವ ಸಾಲಗಳನ್ನು ಮನ್ನಾ ಮಾಡಬೇಕು ಎಂದು ನಾರಾಯಣ ರೆಡ್ಡಿ ಒತ್ತಾಯಿಸಿದರು.

ಪೆಟ್ರೋಲ್, ಡೀಸೆಲ್ ಹಾಗೂ ರಸಗೊಬ್ಬರಗಳ ಬೆಲೆಗಳು ಹೆಚ್ಚಾಗಿರುವುದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರ ಒಂದೆಡೆ ಕೃಷಿ ಚಟುವಟಿಕೆಗೆ ಯಾವುದೇ ನಿರ್ಬಂಧವಿಲ್ಲ ಎಂದು ಹೇಳುತ್ತಿದ್ದರೂ ಇನ್ನೊಂದೆಡೆ ಲಾಕ್‌ಡೌನ್ ಜಾರಿಗೊಳಿಸಿ ಬೆಳಿಗ್ಗೆ 6 ರಿಂದ 10 ಗಂಟೆಯೊಳಗೆ ಮಾರಾಟ ಮಾಡಬೇಕೆಂದು ಸಮಯ ನಿಗದಿಪಡಿಸಿದೆ. ಈ ಸಮಯದೊಳಗೆ ರೈತರು ತೋಟಗಳಿಂದ ಬೆಳೆಗಳನ್ನು ಮಾರುಕಟ್ಟೆಗಳಿಗೆ ಸಾಗಿಸಿ ಮಾರಾಟ ಮಾಡಲು ಸಾಧ್ಯವೇ ಎಂದು ಅವರು ಪ್ರಶ್ನಿಸಿದರು.

ಕೊರೊನಾದಿಂದ ರೈತರು ಹೆಚ್ಚಿನ ತೊಂದರೆ ಅನುಭವಿಸುತ್ತಿದ್ದಾರೆ. ಇಂತಹ ಭಯ ಮತ್ತು ಸಂಕಷ್ಟ ಪರಿಸ್ಥಿತಿಯಲ್ಲಿಯೂ ತಮ್ಮ ಜೀವದ ಹಂಗನ್ನು ತೊರೆದು ಹಗಲಿರುಳು ಕೃಷಿಕಾರ್ಯದಲ್ಲಿ ತೊಡಗಿ ಬೆಳೆಗಳನ್ನು ಬೆಳೆದು ಮಾರುಕಟ್ಟೆಗಳಿಗೆ ಸರಬರಾಜು ಮಾಡುತ್ತಿದ್ದಾರೆ. ಇದರಿಂದ ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಳೆದುಕೊಳ್ಳುವುದರ ಜೊತೆಗೆ ಆರ್ಥಿಕ ಸಂಕಷ್ಟಕ್ಕೂ ಒಳಗಾಗಿದ್ದಾರೆ. ಆದರೆ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇಲ್ಲದಂತಾಗಿದೆ ಎಂದು ರೈತ ಹರೀಶ್ ಅದ್ದೆ ದೂರಿದರು.

ಶಿಕ್ಷಕರಿಗೆ ಪ್ಯಾಕೇಜ್ ಘೋಷಿಸಲು ಮನವಿ

ಬೆಂಗಳೂರು: ರಾಜ್ಯದ ಅತಿಥಿ ಶಿಕ್ಷಕರು, ಉಪನ್ಯಾಸಕರಿಗೂ ವಿಶೇಷ ಪ್ಯಾಕೇಜ್ ನೀಡಬೇಕು ಎಂದು ಒತ್ತಾಯಿಸಿ ವಿಧಾನ ಪರಿಷತ್‌ನ ಬಿಜೆಪಿ ಸದಸ್ಯರಾದ ಎಸ್. ರವಿಕುಮಾರ್, ಪುಟ್ಟಣ್ಣ ಮತ್ತು ಅರುಣ ಶಹಾಪುರ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

'ಶಿಕ್ಷಕರು ಜೀವನ ನಡೆಸಲು ಕಷ್ಟ ಪಡುತ್ತಿದ್ದಾರೆ. ಹಲವು ಅತಿಥಿ ಉಪನ್ಯಾಸಕರು ಕೂಲಿ ಕೆಲಸ ಮಾಡುತ್ತಿದ್ದಾರೆ. ಕೊರೊನಾ ನಿಯಂತ್ರಿಸುವ ಸೇವೆಯಲ್ಲಿ ಅನೇಕ ಶಿಕ್ಷಕರು ಕೋವಿಡ್‌ನಿಂದ ಸಾವಿಗೀಡಾಗಿದ್ದಾರೆ' ಎಂದು ಎಸ್. ರವಿಕುಮಾರ್ ಹೇಳಿದ್ದಾರೆ.

'ರಾಜ್ಯದ ಶಿಕ್ಷಕರು, ಹೊರಗುತ್ತಿಗೆ ಉಪನ್ಯಾಸಕರು, ಶಿಕ್ಷಕರು, ಬಿಸಿಊಟ ಗುತ್ತಿಗೆ ಶಿಕ್ಷಕರು ಹಾಗೂ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯನ್ನು ಕೊರೊನಾ ಸೇನಾನಿಗಳು ಎಂದು ಪರಿಗಣಿಸಿ ಆರ್ಥಿಕ ನೆರವು ಘೋಷಿಸಬೇಕು' ಎಂದು ಪುಟ್ಟಣ್ಣ ಒತ್ತಾಯಿಸಿದ್ದಾರೆ.

'ಕೋವಿಡ್‌ನಿಂದ ಅತಿ ಹೆಚ್ಚು ಸಮಸ್ಯೆಗೆ ಒಳಗಾಗಿರುವ ಖಾಸಗಿ, ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಬಡ್ಡಿರಹಿತ ಸಾಲವನ್ನು ಒದಗಿಸಿ, ಕಂತುಗಳಲ್ಲಿ ಮರುಪಾವತಿ ಮಾಡಲು ಅವಕಾಶ ಮಾಡಿಕೊಡಬೇಕು' ಎಂದು ಅರುಣ ಶಹಾಪುರ ಮನವಿ ಮಾಡಿದ್ದಾರೆ.

ಪ್ಯಾಕೇಜ್ ನೀಡಲು ಹೊರಟ್ಟಿ ಆಗ್ರಹ

ಹುಬ್ಬಳ್ಳಿ: 'ಕೋವಿಡ್‌ನಿಂದಾಗಿ ಖಾಸಗಿ ಅನುದಾನ ರಹಿತ ಶಾಲಾ, ಕಾಲೇಜುಗಳ ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ ಸಂಕಷ್ಟದಲ್ಲಿದ್ದು, ಆರ್ಥಿಕ ನೆರವು ನೀಡಬೇಕು' ಎಂದು ಕೋರಿ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಶುಕ್ರವಾರ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

ಸಣ್ಣ ವ್ಯಾಪಾರಸ್ಥರು, ಆಟೊ, ಟ್ಯಾಕ್ಸಿ ಚಾಲಕರು, ಕಟ್ಟಡ ಕಾರ್ಮಿಕರಿಗೆ ನೀಡಿದಂತೆ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದಿದ್ದಾರೆ.

ಬಾಕಿ ಉಳಿದಿರುವ ಆರ್‌.ಟಿ.ಇ. ಶುಲ್ಕವನ್ನು ಸರ್ಕಾರ ಪಾವತಿಸುತ್ತಿಲ್ಲ. ಬಾಕಿ ಪಾವತಿಗೆ ₹700 ಕೋಟಿ ಮೀಸಲಿರಿಸಿದ್ದರೂ ರಾಜ್ಯದ ವಿವಿಧ ಶಾಲೆಗಳಿಗೆ ಪಾವತಿಸಬೇಕಾದ ₹600 ಕೋಟಿ ನೀಡಿಲ್ಲ. ಈ ಸಮಸ್ಯೆಗಳ ಬಗ್ಗೆ ಶಿಕ್ಷಣ ಸಚಿವ ಸುರೇಶ್ ಕುಮಾರ್ ಅವರೂ ಗಮನ ಹರಿಸಬೇಕು ಎಂದು ಆಗ್ರಹಿಸಿದ್ದಾರೆ.

'ಕೋವಿಡ್ ಕೈಮೀರಲು ಕಾಂಗ್ರೆಸ್ಸಿಗರೇ ಕಾರಣ'

ಕಲಬುರ್ಗಿ: 'ದೇಶದಲ್ಲಿ ಕೊರೊನಾ ಸೋಂಕು ಹೆಚ್ಚಾಗಲು ಕಾಂಗ್ರೆಸ್ಸಿಗರ ನೀಚ ರಾಜಕಾರಣವೇ ಕಾರಣ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಶುಕ್ರವಾರ ಆರೋಪಿಸಿದರು.


ನಳಿನ್‌ಕುಮಾರ್ ಕಟೀಲ್

'ದೇಶದ ಲಸಿಕೆ ಬಗ್ಗೆ ಕಾಂಗ್ರೆಸ್ಸಿಗರು ಅಪಪ್ರಚಾರ ಮಾಡಿದರು. ಇದು ಬಿಜೆಪಿ ಲಸಿಕೆ, ಪರಿಣಾಮಕಾರಿ ಅಲ್ಲ, ಪುರುಷತ್ವ ಕಡಿಮೆ ಆಗುತ್ತದೆ ಎಂದೆಲ್ಲ ಸುಳ್ಳು ಸುದ್ದಿ ಹರಡಿದರು. ಇದರಿಂದ ಲಸಿಕೆ ಪಡೆಯಲು ಹಲವರು ಹಿಂಜರಿದರು. ಅದರ ಪರಿಣಾಮವೇ ಈಗ ಸೋಂಕು, ಸಾವಿನ ಪ್ರಮಾಣ ಹೆಚ್ಚಾಗಿದೆ' ಎಂದು ದೂರಿದರು.

'ಲಸಿಕೆ ಬಗ್ಗೆ ಕಾಂಗ್ರೆಸ್ ಅಪಪ್ರಚಾರ ಮಾಡಿದೆ ಎಂಬ ಎಚ್.ಡಿ. ಕುಮಾರಸ್ವಾಮಿ ಅವರ ಹೇಳಿಕೆ ಸತ್ಯದಿಂದ ಕೂಡಿದೆ' ಎಂದರು.

'ಫೆಬ್ರುವರಿಯಲ್ಲಿ ಸ್ವತಃ ಪ್ರಧಾನಿ ನರೇಂದ್ರ ಮೋದಿ ಅವರೇ ಲಸಿಕೆ ಪಡೆದು ಜನರಿಗೆ ಪ್ರೇರಣೆ ನೀಡಿದರು. ಆದರೂ ಮೇ ವರೆಗೂ ಲಸಿಕೆಗಾಗಿ ಜನ ಮುಂದೆ ಬರಲಿಲ್ಲ. ಈಗ ಅದರ ಮಹತ್ವ ಎಲ್ಲರಿಗೂ ಗೊತ್ತಾಗಿದೆ. ಹಾಗಾಗಿ, ಲಸಿಕೆ ಬೇಕು ಎಂದು ಮುಗಿಬೀಳುತ್ತಿದ್ದಾರೆ. ಬೇಡಿಕೆ ಬಂದಿದೆ. ಉಪಯೋಗವಿಲ್ಲ ಎಂದು ಅಪಪ್ರಚಾರ ಮಾಡಿದ್ದ ಕಾಂಗ್ರೆಸ್ಸಿಗರೇ ಈಗ ಲಸಿಕೆ ಕೊಡುತ್ತಿಲ್ಲವೆಂದು ಕಣ್ಣೀರು ಹಾಕುತ್ತಿದ್ದಾರೆ' ಎಂದರು.

'ಕಾಂಗ್ರೆಸ್ ಹೈಕಮಾಂಡ್ ಏನು ಮಾಡುತ್ತದೋ ಸಿದ್ದರಾಮಯ್ಯ ಸಹ ಅದನ್ನೇ ಮಾಡುತ್ತಾರೆ. ಅಧಿಕಾರಕ್ಕೆ ಈ ರೀತಿಯ ವರ್ತನೆ ಜನ ಸಹಿಸುವುದಿಲ್ಲ. ಅದಕ್ಕಾಗಿಯೇ ಅವರನ್ನು ವರುಣಾ ಕ್ಷೇತ್ರದಿಂದ ಅಲ್ಲಿಯ ಮತದಾರರು ಓಡಿಸಿದ್ದಾರೆ. ಇದೇ ರೀತಿ ಮಾಡಿದರೆ ಬಾದಾಮಿಯಿಂದಲೂ ಓಡಿಸುತ್ತಾರೆ' ಎಂದರು.

'ಸಮಸ್ಯೆಗಳ ಪರಿಹಾರದಲ್ಲಿ ನಾವೂ ಭಾಗಿಗಳಾಗೋಣ': ಘೋಷವಾಕ್ಯ

ಕಣ್ಮರೆಯಾಗುತ್ತಿದೆ ಪಾರಂಪರಿಕ ತರಕಾರಿ

• ಗಣಪತಿ ಹೆಗಡೆ

ಶಿರಸಿ: 'ಸಮಸ್ಯೆಗಳ ಪರಿಹಾರದಲ್ಲಿ ನಾವೂ ಭಾಗಿಗಳಾಗೋಣ' ಘೋಷವಾಕ್ಯದಡಿ ಈ ವರ್ಷದ ಜೀವ ವೈವಿಧ್ಯ ದಿನಾಚರಣೆ ಶನಿವಾರ (ಮೇ 22) ನಡೆಯಲಿದೆ. ಈ ಹೊತ್ತಿನಲ್ಲಿ ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಯ ಪಾರಂಪರಿಕ ತರಕಾರಿ, ಕರಾವಳಿ ಭಾಗದಲ್ಲಿ ಮತ್ಸ್ಯ ಸಂತತಿ ಉಳಿವಿನ ವಿಚಾರವೂ ಮುನ್ನೆಲೆಗೆ ಬಂದಿದೆ.

ಈ ಭಾಗದಲ್ಲಿ ಸವತೆಕಾಯಿ, ಕುಂಬಳಕಾಯಿ, ಹೀರೆಕಾಯಿ ಸೇರಿ ನೂರೈವತ್ತಕ್ಕೂ ಹೆಚ್ಚು ಪಾರಂಪರಿಕ ತರಕಾರಿ ತಳಿಗಳು ಜನರ ಆರೋಗ್ಯ ಜೀವನಕ್ಕೆ ಕೊಡುಗೆ ನೀಡಿದ್ದವು. ಮನೆ ಅಂಗಳ, ಗದ್ದೆಯ ತುಂಡುಭಾಗದಲ್ಲಿ ಬೆಳೆಯುತ್ತಿದ್ದ ಹಲವು ತರಕಾರಿ ತಳಿ ಈಚಿನ ವರ್ಷಗಳಲ್ಲಿ ಕಣ್ಮರೆಯಾಗಿವೆ ಎನ್ನುತ್ತಿದೆ ತಜ್ಞರ ಅಧ್ಯಯನ ವರದಿ.

ಹೇರಳ ವಿಟಮಿನ್, ಕಬ್ಬಿಣದ ಅಂಶಗಳಿರುತ್ತಿದ್ದ ಸೊಪ್ಪು, ತರಕಾರಿಯನ್ನು ಬೆಳೆಯುವ ರೈತರ ಸಂಖ್ಯೆ ಇಳಿಕೆಯಾಗುತ್ತಿರುವ ಬಗ್ಗೆ 2018–19ರಲ್ಲಿ ಪರಿಸರ ತಜ್ಞ ಡಾ.ಕೇಶವ ಕೊರ್ಸೆ ಕಾಲೇಜು ವಿದ್ಯಾರ್ಥಿಗಳನ್ನು ಒಗ್ಗೂಡಿಸಿಕೊಂಡು ಉತ್ತರ ಕನ್ನಡ, ಶಿವಮೊಗ್ಗದ 8 ತಾಲ್ಲೂಕುಗಳಲ್ಲಿ ಸಮೀಕ್ಷೆ ನಡೆಸಿದ್ದರು. ಈ ವೇಳೆ ಪೌಷ್ಟಿಕಾಂಶ ಒದಗಿಸುತ್ತಿದ್ದ ತರಕಾರಿ ಬೆಳೆಯುವಿಕೆ ಪ್ರಮಾಣ ಶೇ.40ಕ್ಕಿಂತ ಕಡಿಮೆ ಆಗಿದ್ದು ಬೆಳಕಿಗೆ ಬಂದಿತ್ತು. ಒಂದು ಕಾಲದಲ್ಲಿ ಸ್ವಾವಲಂಬಿಗಳಾಗಿದ್ದ ಹಳ್ಳಿ ಜನ ಒಂದೂವರೆ ದಶಕದಿಂದ ಈಚೆಗೆ ತರಕಾರಿ ಖರೀದಿಗೆ ಹತ್ತು ಪಟ್ಟು ಹೆಚ್ಚು ವೆಚ್ಚ ಮಾಡುವುದು ಸ್ಪಷ್ಟವಾಗಿತ್ತು.

'ಎರಡೂವರೆ ದಶಕದಿಂದ ಈಚೆಗೆ ನೂರೈವತ್ತಕ್ಕೂ ಹೆಚ್ಚು ಪಾರಂಪರಿಕ ತರಕಾರಿ ಬೆಳೆ ನಶಿಸುವ ಹಂತಕ್ಕೆ ಬಂದಿದೆ. ಇವುಗಳು ಹೇರಳ ಪ್ರಮಾಣದ ಪೋಷಕಾಂಶ, ಖನಿಜಾಂಶ ಮತ್ತು ಕಬ್ಬಿಣದ ಅಂಶವನ್ನು ದೇಹಕ್ಕೆ ಒದಗಿಸುತ್ತಿದ್ದವು. ಇವುಗಳ ಲಭ್ಯತೆಯ ಬದಲು ರಾಸಾಯನಿಕಯುಕ್ತ ತರಕಾರಿ ಬಳಕೆ ಹೆಚ್ಚಿದ ಪರಿಣಾಮ ರೋಗನಿರೋಧಕ ಶಕ್ತಿ ಕುಗ್ಗುವುದು ಸಹಜವಾಗುತ್ತಿದೆ' ಎನ್ನುತ್ತಾರೆ ಕೇಶವ ಕೊರ್ಸೆ.

'ಬೆಳೆದು ತಿನ್ನುವ ಬದಲು ಹಳ್ಳಿಗಳಲ್ಲೂ ಕೊಂಡುಕೊಳ್ಳುವ ಪರಿಪಾಠ ಹೆಚ್ಚಿದ್ದೇ ಸಾವಯವ ಬೆಳೆಗಳು ವಿನಾಶದ ಅಂಚಿಗೆ ತಲುಪಲು ಕಾರಣ. ನಗರ ವಲಸೆ ಸಂಸ್ಕೃತಿ, ಶ್ರಮಜೀವನ ಮರೆಯಾಗಿದ್ದು ಇನ್ನೊಂದು ಕಾರಣವಾಗಿರಬಹುದು' ಎಂದು ಹೇಳಿದರು. 'ಸಾವಯವ ಪದ್ಧತಿಯ ಮೂಲಕ ಪಾರಂಪರಿಕ ಕೃಷಿಗೆ ಒತ್ತು ನೀಡಿದರೆ ಪೋಷಕಾಂಶದ ಜತೆಗೆ ಜೀವವೈವಿಧ್ಯ ರಕ್ಷಣೆಯೂ ಸಾಧ್ಯ. ಇದಕ್ಕಾಗಿ ಗ್ರಾಮ ಮಟ್ಟದ ಜೀವವೈವಿಧ್ಯ ನಿರ್ವಹಣಾ ಸಮಿತಿ ಮೂಲಕವೂ ಜಾಗೃತಿ ಮೂಡಿಸುವ ಕೆಲಸವಾಗಬೇಕು' ಎಂದು ಪ್ರತಿಪಾದಿಸಿದರು.


ಶಿರಸಿಯ ಗ್ರಾಮೀಣ ಭಾಗದ ಕೃಷಿಕರೊಬ್ಬರು ಸಾವಯವ ಪದ್ಧತಿ ಮೂಲಕ ತರಕಾರಿ ಬೆಳೆಸುತ್ತಿರುವುದು

ಜೀವವೈವಿಧ್ಯ ದಿನದ ವಿಶೇಷ

ಜೀವವೈವಿಧ್ಯ ರಕ್ಷಣೆಗೆ ಬದ್ಧ


ಅನಂತ ಹೆಗಡೆ ಆಶೀಸರ

ರಾಜ್ಯದಲ್ಲಿ ಜೀವವೈವಿಧ್ಯ ಸಂರಕ್ಷಣೆ ಮತ್ತು ಅದಕ್ಕೆ ಪೂರಕವಾಗುವ ಎಲ್ಲ ಬಗೆಯ ಅಂಶಗಳ ಸಂರಕ್ಷಣೆಗೆ ಆದ್ಯತೆ ನೀಡುವ ಕೆಲಸ ಮಾಡಲಾಗುತ್ತಿದೆ ಎನ್ನುತ್ತಾರೆ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ.

'ಶಿವಮೊಗ್ಗದ ಅಂಬಾರಗುಡ್ಡ ಸೇರಿದಂತೆ ಒಟ್ಟೂ ನಾಲ್ಕು ಕಡೆ ಪಾರಂಪರಿಕ ಜೀವವೈವಿಧ್ಯ ತಾಣ ಎಂದು ಗುರುತಿಸಿದ್ದು ದೇಶಕ್ಕೆ ಮಾದರಿ ಆಗಿದೆ' ಎಂದು ಹೇಳಿದರು.

'ಕಗ್ಗ ಭತ್ತ ಬೆಳೆಯುವ ಅಘನಾಶಿನಿ ಅಳಿವೆ, ಕೋಲಾರದ ಅಂತರಗಂಗೆ ಬೆಟ್ಟ, ನೆಲಮಂಗಲದ ಮಹಿಮರಂಗ ಬೆಟ್ಟ ಸೇರಿ 8 ಪ್ರದೇಶಗಳನ್ನು ಜೀವವೈವಿಧ್ಯ ತಾಣ ಎಂದು, ಏಳು ಕಡೆ ಹೊಳೆಯಲ್ಲಿ ಮತ್ಸ್ಯಧಾಮ ಎಂದು ಘೋಷಿಸಿ ಅವುಗಳಲ್ಲಿ ಮತ್ಸ್ಯ ಸಂಕುಲ ಸಂರಕ್ಷಣಾ ಕಾರ್ಯ ಚುರುಕುಗೊಳಿಸಲಾಗಿದೆ. ರಾಜ್ಯದ 6,101 ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಕಾರ್ಯಚಟುವಟಿಕೆ ಬಲಪಡಿಸಲಾಗಿದೆ. ಎಲ್ಲ ಪ್ರದೇಶಗಳ ಜೀವವೈವಿಧ್ಯ ದಾಖಲೀಕರಣ ಕಾರ್ಯ ವೇಗ ಪಡೆದುಕೊಂಡಿದ್ದು, ಸಂಗ್ರಹಿತ ವರದಿ ಆಧರಿಸಿ ಮುಂದಿನ ಸಂರಕ್ಷಣಾ ಕ್ರಮದ ಚಿಂತನ ನಡೆದಿದೆ' ಎಂದು ಹೇಳಿದರು.

ಪಶ್ಚಿಮ ಕರಾವಳಿಯಲ್ಲಿ ಸೇವನೆಗೆ ಯೋಗ್ಯವಿದ್ದ 180 ರಷ್ಟು ಮೀನುಗಳ ಪೈಕಿ ಅವೈಜ್ಞಾನಿಕ ಮೀನುಗಾರಿಕೆ, ಸಮುದ್ರ ಮಾಲಿನ್ಯದಿಂದ 15ಕ್ಕೂ ಹೆಚ್ಚು ಮತ್ಸ್ಯ ಸಂತತಿ ಕ್ಷೀಣಿಸಿದೆ

ಡಾ.ವಿ.ಎನ್.ನಾಯಕ, ಜೀವವಿಜ್ಞಾನಿ

ಆಶಾ ಕಾರ್ಯಕರ್ತೆಯರ ಆನ್‌ಲೈನ್ ಪ್ರತಿಭಟನೆ 24ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಯೋಧರಿಗೆ ನೀಡುವಂತೆ ತಿಂಗಳಿಗೆ ₹ 5 ಸಾವಿರ ಪ್ರೋತ್ಸಾಹಧನ, ಗೌರವಧನ ಬಿಡುಗಡೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರು ಸೋಮವಾರ (ಮೇ 24) ರಾಜ್ಯದಾದ್ಯಂತ ಆನ್‌ಲೈನ್ ಪ್ರತಿಭಟನೆ ಹಮ್ಮಿಕೊಂಡಿದ್ದಾರೆ.

ತಾಯಿ ಮತ್ತು ಮಕ್ಕಳ ಆರೋಗ್ಯದ ಕಾರ್ಯಕ್ರಮಗಳ ಜತೆಗೆ ಕೊರೊನಾ ಸೋಂಕಿತರ ಪತ್ತೆ, ಮನೆ ಮನೆ ಸಮೀಕ್ಷೆ ಸೇರಿದಂತೆ ವಿವಿಧ ಕೆಲಸ ಕಾರ್ಯಗಳಲ್ಲಿ ಆಶಾ ಕಾರ್ಯಕರ್ತೆಯರು ನಿರತರಾಗಿದ್ದಾರೆ. ರಾಜ್ಯದಲ್ಲಿ 42 ಸಾವಿರ ಆಶಾ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ಕೆಲಸದ ಸ್ಥಳ ಅಥವಾ ಮನೆಯಿಂದ ಆನ್‌ಲೈನ್ ಮೂಲಕ ಪೋಸ್ಟರ್ ಚಳವಳಿ ನಡೆಸಲು ಆಶಾ ಕಾರ್ಯಕರ್ತೆಯರು ಮುಂದಾಗಿದ್ದಾರೆ.

'ಆರೋಗ್ಯ ಇಲಾಖೆಯು ಕೊರೊನಾ ಯೋಧರಿಗೆ ನೀಡುವಂತೆ ಆಶಾ ಕಾರ್ಯಕರ್ತೆಯರಿಗೆ ಕೂಡ ವಿಶೇಷ ಪ್ರೋತ್ಸಾಹಧನ ತಿಂಗಳಿಗೆ ₹ 5 ಸಾವಿರ ನೀಡಬೇಕು. ಸೋಂಕಿತರಾದ ಕಾರ್ಯಕರ್ತರಿಗೆ ಕನಿಷ್ಠ ₹ 25 ಸಾವಿರ ಪರಿಹಾರ ಒದಗಿಸಬೇಕು. ಅಗತ್ಯವಿರುವಷ್ಟು ಮುಖಗವಸು, ಸೋಂಕು ನಿವಾರಕ ದ್ರಾವಣ (ಸ್ಯಾನಿಟೈಸರ್), ಕೈಗವಸುಗಳನ್ನು ನೀಡುವ ಮೂಲಕ ಮುಂಚೂಣಿ ಯೋಧರನ್ನು ರಕ್ಷಿಸಬೇಕು. ಬಾಕಿ ಇರುವ ಮೂರು ತಿಂಗಳ ಮಾಸಿಕ ಗೌರವಧನ ₹ 4 ಸಾವಿರವನ್ನು ಕೂಡಲೇ ಬಿಡುಗಡೆ ಮಾಡಬೇಕು. ಮೊದಲ ಅಲೆಯಲ್ಲಿ ಮೃತಪಟ್ಟ ಆಶಾ ಕಾರ್ಯಕರ್ತೆಯರ ಕುಟುಂಬಕ್ಕೆ ತಲಾ ₹ 50 ಲಕ್ಷ ಪರಿಹಾರ ಒದಗಿಸಬೇಕು' ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಆಗ್ರಹಿಸಿದೆ.

'ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಸುಮಾರು 30ರಿಂದ 40 ಆಶಾ ಕಾರ್ಯಕರ್ತೆಯರು ಈಗ ಕೊರೋನಾ ಸೋಂಕಿಗೆ ಒಳಗಾಗಿದ್ದಾರೆ. ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಐವರು ಮೃತಪಟ್ಟಿದ್ದಾರೆ. ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಹಾಗೂ ತೀವ್ರ ಉಸಿರಾಟದ ಸಮಸ್ಯೆಗೆ (ಸಾರಿ) ಒಳಗಾದವರ ಸಮೀಕ್ಷೆ, ಕೋವಿಡ್ ಕಿಟ್ ಹಾಗೂ ಮಾತ್ರೆ ಹಂಚಿಕೆ ಸೇರಿದಂತೆ ವಿವಿಧ ಕಾರ್ಯಗಳಲ್ಲಿ ಆಶಾ ಕಾರ್ಯಕರ್ತರು ತೊಡಗಿದ್ದಾರೆ. ಹಾಗಾಗಿ, ಈ ಸಂಕಷ್ಟದ ಸಮಯದಲ್ಲಿ ಮುಂಚೂಣಿಯಲ್ಲಿ ನಿಂತು ಹೋರಾಡುತ್ತಿರುವ ಅವರಿಗೆ ಸೂಕ್ತ ಸುರಕ್ಷತೆ ಹಾಗೂ ಪ್ರೋತ್ಸಾಹ ಸರ್ಕಾರ ನೀಡಬೇಕು' ಎಂದು ಸಂಘದ ರಾಜ್ಯ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಇಂದಿನಿಂದ ವೈದ್ಯಕೀಯ ಸಾಹಿತ್ಯ ಸಮ್ಮೇಳನ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಇದೇ ಶನಿವಾರ–ಭಾನುವಾರ 'ಕನ್ನಡ ವೈದ್ಯಕೀಯ ಸಾಹಿತ್ಯ ಸಮ್ಮೇಳನ'ವನ್ನು ಆನ್‌ಲೈನ್ ವೇದಿಕೆಯಲ್ಲಿ ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್. ಸಚ್ಚಿದಾನಂದ, 'ಇದೇ ಮೊದಲ ಬಾರಿಗೆ ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲಾಗುತ್ತಿದೆ. 'ವೈದ್ಯ ವಿಜ್ಞಾನ ಅಂದು, ಇಂದು, ಮುಂದು' ಎಂಬ ಶೀರ್ಷಿಕೆಯಡಿ ಸಮ್ಮೇಳನ ನಡೆಯಲಿದೆ. ಸಮ್ಮೇಳನಾಧ್ಯಕ್ಷರಾಗಿ ಕಲಬುರ್ಗಿಯ ಕೆಬಿಎನ್ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಪಿ.ಎಸ್. ಶಂಕರ್ ಆಯ್ಕೆಯಾಗಿದ್ದಾರೆ. ರಜತ ಮಹೋತ್ಸವದ ಪ್ರಯುಕ್ತ ಆಯೋಜಿಸುತ್ತಿರುವ ಈ ಸಮ್ಮೇಳನವು ವೈದ್ಯಕೀಯ ಲೋಕದ ಆಗುಹೋಗುಗಳನ್ನು ಅನಾವರಣ ಮಾಡುವ ಜತೆಗೆ ಕನ್ನಡ ವೈದ್ಯಕೀಯ ಸಾಹಿತ್ಯದ ಬೆಳವಣಿಗೆಗೆ ನೆರವಾಗಲಿದೆ' ಎಂದರು.

'ಶನಿವಾರ ಮಧ್ಯಾಹ್ನ 12 ಗಂಟೆಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, ಸಮ್ಮೇಳನಕ್ಕೆ ಚಾಲನೆ ನೀಡಲಿದ್ದಾರೆ.

ಭಾನುವಾರ ಬೆಳಿಗ್ಗೆ 9 ಗಂಟೆಯಿಂದಲೇ ಗೋಷ್ಠಿಗಳು ಪ್ರಾರಂಭವಾಗಲಿವೆ. ಭವಿಷ್ಯದ ವೈದ್ಯಚಿಕಿತ್ಸೆ, ಕೋವಿಡ್ ಅಲೆ, ಅಂಗ ಕಸಿ, ಆರೋಗ್ಯ ಸುಧಾರಣೆಗೆ ವಿವಿಧ ವೈದ್ಯ ಪದ್ಧತಿಗಳ ಕೊಡುಗೆ ಸೇರಿದಂತೆ ವಿವಿಧ ವಿಷಯಗಳ ಗೋಷ್ಠಿಗಳು ನಡೆಯಲಿವೆ.

'ಕೋವಿಡ್ ಬಗೆಗಿನ ಗೋಷ್ಠಿಯಲ್ಲಿ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ.ಎಂ.ಕೆ. ಸುದರ್ಶನ್, ಸದಸ್ಯರಾದ ಡಾ.ಸಿ.ಎನ್. ಮಂಜುನಾಥ್, ಡಾ. ಗಿರಿಧರ ಬಾಬು ಪಾಲ್ಗೊಳ್ಳಲಿದ್ದಾರೆ. ಕನ್ನಡದ ವೈದ್ಯಕೀಯ ಸಾಹಿತ್ಯಕ್ಕೆ ಕೊಡುಗೆ ನೀಡುತ್ತಿರುವ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ನಾ. ಸೋಮೇಶ್ವರ, ಡಾ. ವೀಣಾ ಭಟ್, ಡಾ.ಸಿ.ಆರ್. ಚಂದ್ರಶೇಖರ್, ಡಾ. ಪದ್ಮಿನಿ ಪ್ರಸಾದ್, ಡಾ. ಆಶಾ ಬೆನಕಪ್ಪ, ಡಾ.ಬಿ.ಟಿ. ರುದ್ರೇಶ್ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ' ಎಂದರು.

ಸಮ್ಮೇಳನದ ವಿಶೇಷತೆ


- ವರ್ಚುವಲ್ ಮಾದರಿಯಲ್ಲಿ ಸಮ್ಮೇಳನ
- 10 ಗೋಷ್ಠಿಗಳ ಆಯೋಜನೆ
- 24 ಕವಿಗಳಿಂದ ಕವನ ವಾಚನ
- 60 ವೈದ್ಯರು ಗೋಷ್ಠಿಗಳಲ್ಲಿ ಭಾಗವಹಿಸುವಿಕೆ
- ಏಕಕಾಲದಲ್ಲಿ 3 ಸಾವಿರ ಮಂದಿ ವೀಕ್ಷಣೆ ನಿರೀಕ್ಷೆ

ಆನ್‌ಲೈನ್ ವೀಕ್ಷಣೆ ಲಿಂಕ್‌ಗಳು: https://www.facebook.com/VCRGUHS/live/ (ಫೇಸ್‌ಬುಕ್)
https://youtu.be/XKilQ3t8PPQ (ಯು ಟ್ಯೂಬ್)
https://youtu.be/PQN1mP6a2wc

'ಕೊರೊನಾ ಮುಕ್ತ ಗ್ರಾ.ಪಂ'ಗೆ ₹ 5 ಲಕ್ಷ ಅನುದಾನ'

ಪ್ರಜಾವಾಣಿ ವಾರ್ತೆ

ಮಡಿಕೇರಿ: ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಗ್ರಾಮ ಪಂಚಾಯಿತಿಗಳು, ತಮ್ಮ ವ್ಯಾಪ್ತಿಯ ಎಲ್ಲ ಹಳ್ಳಿಗಳನ್ನು 'ಕೊರೊನಾ ಮುಕ್ತ ಗ್ರಾಮ'ಗಳನ್ನಾಗಿ ಮಾಡಿದಲ್ಲಿ, ಅಂಥ ಗ್ರಾಮ ಪಂಚಾಯಿತಿಗೆ ಶಾಸಕರ ನಿಧಿಯಿಂದ ₹ 5 ಲಕ್ಷ ಅನುದಾನ ನೀಡುವುದಾಗಿ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್ ಶುಕ್ರವಾರ ಇಲ್ಲಿ ಘೋಷಿಸಿದರು.


ಎಂ.ಪಿ.ಅಪ್ಪಚ್ಚು ರಂಜನ್

ನಗರದಲ್ಲಿ ಮಾತನಾಡಿದ ಅವರು, 'ಕೊಡಗು ಜಿಲ್ಲೆಯಲ್ಲಿ ಕೆಲವು ದಿನಗಳಿಂದ ಸಾವಿನ ಸಂಖ್ಯೆ ಹಾಗೂ ಕೋವಿಡ್ ಪ್ರಕರಣಗಳು ಇಳಿಕೆಯಾಗುತ್ತಿರುವುದು ತುಸು ಸಮಾಧಾನ ತರಿಸಿದೆ. ಜಿಲ್ಲೆಯಲ್ಲಿ ಜನಜಾಗೃತಿ ಮೂಡಿಸಿ ನಿಯಮ ಜಾರಿಗೆ ತರಲಾಗುವುದು' ಎಂದು ಹೇಳಿದರು.

ಆಗ ಶಾಲಾ ಸಮವಸ್ತ್ರ, ಈಗ ಪಿಪಿಇ ಕಿಟ್ ತಯಾರಿಕೆ

ಒಂದನೇ ಪುಟದಿಂದ

ವಿಜಯಪುರ, ದಾವಣಗೆರೆ, ಬಳ್ಳಾರಿ, ಬೀದರ್, ಬೆಳಗಾವಿ ಮುಂತಾದ ಜಿಲ್ಲೆಗಳಿಗಳಿಂದಲೂ ಬೇಡಿಕೆ ಇದೆ.

'ನಿತ್ಯ 500 ರಿಂದ 600 ಪಿಪಿಇ ಕಿಟ್, 500 ವೈದ್ಯರ ಗೌನ್, 300 ರೋಗಿಗಳ ಗೌನ್ ಹಾಗೂ 100 ಪಾರ್ಥಿವ ಶರೀರ ಪ್ಯಾಕ್ ಮಾಡುವ ಬ್ಯಾಗ್ ಸಿದ್ಧಪಡಿಸಲಾಗುತ್ತಿದೆ. ಡಿಸ್‌ಪೋಸೇಬಲ್ ಬೆಡ್‌ಶೀಟ್‌ಗಳನ್ನು ಬೇಡಿಕೆ ಆಧಾರದ ಮೇಲೆ ಉತ್ಪಾದಿಸಲಾಗುತ್ತಿದೆ' ಎನ್ನುತ್ತಾರೆ ಪ್ರವೀಣ ಬುರಟ್.

ಲಾಕ್‌ಡೌನ್ ಕಾರಣ ಕಚ್ಚಾ ಸಾಮಗ್ರಿಗಳನ್ನು ತರಿಸಲು ಸ್ವಲ್ಪ ವಿಳಂಬವಾಗುತ್ತಿದೆ. ಬೇಡಿಕೆ ಕುಗ್ಗಿಲ್ಲ. ಮೊದಲು ಎಲ್ಲದಕ್ಕೂ ಚೀನಾ ಕಡೆಗೆ ಮುಖ ಮಾಡಬೇಕಿತ್ತು. ಈಗ ದೇಶೀಯವಾಗಿಯೇ ತಯಾರಾಗುತ್ತಿವೆ. 45 ಮಹಿಳಾ ಹಾಗೂ 15 ಪುರುಷ ಕೆಲಸಗಾರರಿಗೆ ಉದ್ಯೋಗ ಸಿಕ್ಕಿದೆ ಎನ್ನುತ್ತಾರೆ ಅವರು.

'ಮೇಷ್ಟ್ರು' ಕೆ.ಆರ್. ಪೇಟೆ ಕೃಷ್ಣ ಇನ್ನಿಲ್ಲ

ಒಂದನೇ ಪುಟದಿಂದ

ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು ಚೆನ್ನೈನ ಅಪೊಲೊ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಇತ್ತೀಚೆಗಷ್ಟೇ ಮೈಸೂರಿಗೆ ಮರಳಿದ್ದರು. ಅವರ ಹುಟ್ಟೂರು, ಕೆ.ಆರ್.ಪೇಟೆ ತಾಲ್ಲೂಕಿನ ಕೊತ್ತಮಾರನಹಳ್ಳಿ ಗ್ರಾಮದಲ್ಲಿ ಶನಿವಾರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಆರ್.ಪೇಟೆ ಕ್ಷೇತ್ರದಿಂದ 1985 (ಜನತಾ ಪಕ್ಷ), 1994 (ಜನತಾ ದಳ), 2004 (ಜೆಡಿಎಸ್) ರಲ್ಲಿ ಶಾಸಕರಾಗಿದ್ದರು. 1988ರಲ್ಲಿ ಎಸ್.ಆರ್.ಬೊಮ್ಮಾಯಿ ಸಂಪುಟದಲ್ಲಿ ಪಶು ಸಂಗೋಪನೆ ಹಾಗೂ ರೇಷ್ಮೆ ಇಲಾಖೆ ಸಚಿವರಾಗಿ ಕೆಲಸ ಮಾಡಿದ್ದರು. 1996ರಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಸಂಸದರಾಗಿದ್ದರು.

2004–2008ವರೆಗೆ ವಿಧಾನಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. 2008ರ ವಿಧಾನಸಭಾ ಚುನಾವಣೆಯಲ್ಲಿ ಸೋಲು ಕಂಡಿದ್ದರು. 2013ರಲ್ಲಿ ಜೆಡಿಎಸ್ ಟಿಕೆಟ್ ನೀಡದ ಕಾರಣ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದು ಸೋಲು ಕಂಡಿದ್ದರು. ನಂತರ ಕಾಂಗ್ರೆಸ್ ಸೇರಿ ಅಲ್ಲೂ ಇರದೆ ಸಕ್ರಿಯ ರಾಜಕಾರಣದಿಂದ ದೂರ ಸರಿದಿದ್ದರು.

ವಕೀಲರಾಗಿದ್ದ ಅವರು ಜನತಾ ಪಕ್ಷದ ಮೂಲಕ ತಾಲ್ಲೂಕು ಬೋರ್ಡ್ ಸದಸ್ಯರಾಗಿ ರಾಜಕಾರಣ ಪ್ರವೇಶ ಮಾಡಿದ್ದರು. ಅವರು ಮೊದಲ ಬಾರಿಗೆ ಚುನಾವಣೆಗೆ ಸ್ಪರ್ಧಿಸಿದ ಸಂದರ್ಭದಲ್ಲಿ ಜನರು ಕೆ.ಆರ್.ಪೇಟೆ ತಾಲ್ಲೂಕು ಕಚೇರಿಯಲ್ಲಿ ಟವೆಲ್ ಹಾಸಿ ಹಣ ಸಂಗ್ರಹ ಮಾಡಿ ಕೊಟ್ಟಿದ್ದರು.


ಶಾಸಕರಾಗಿದ್ದಾಗಲೂ ಸಾರಿಗೆ ಸಂಸ್ಥೆ ಬಸ್‌ನಲ್ಲಿ ಓಡಾಡುವ ಮೂಲಕ ಸರಳತೆಗೆ, ಸಜ್ಜನಿಕೆಗೆ ಹೆಸರಾಗಿದ್ದರು.

ನಿಧನವಾರ್ತೆ

ಛಾಯಾಗ್ರಾಹಕ ನೇತ್ರರಾಜು

ಮೈಸೂರು: ಪತ್ರಿಕಾ ಛಾಯಾಗ್ರಾಹಕ ನೇತ್ರರಾಜು (62) ಅವರು ಶುಕ್ರವಾರ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಪುತ್ರಿ ಇದ್ದಾರೆ.

ಎದೆನೋವು ಕಾಣಿಸಿಕೊಂಡಿದ್ದರಿಂದ ಜಯದೇವ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಸಂಜೆ ನಿಧನರಾದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅಂತ್ಯಕ್ರಿಯೆ ಶನಿವಾರ ಬೆಳಿಗ್ಗೆ ಹರಿಶ್ಚಂದ್ರಘಾಟ್‌ನಲ್ಲಿ ನಡೆಯಲಿದೆ.



ನೇತ್ರರಾಜು ಎಂದೇ ಹೆಸರಾಗಿದ್ದ ಎಸ್. ನಾಗೇಂದ್ರ, ಹಲವು ಕನ್ನಡ ಮತ್ತು ಆಂಗ್ಲ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸಿದ್ದರು. ಅವರ ಛಾಯಾಚಿತ್ರಗಳು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮನ್ನಣೆಗೆ ಪಾತ್ರವಾಗಿದ್ದವು. 2014ರಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿದ್ದರು.

2019ರ ದಸರಾ ಸಮಯದಲ್ಲಿ ತಾಯಿ ಮತ್ತು ಮಗು ಬೆಳಕಿನಿಂದ ಕಂಗೊಳಿಸುತ್ತಿರುವ ಅರಮನೆಯ ಸೌಂದರ್ಯವನ್ನು ಕಣ್ತುಂಬಿಕೊಳ್ಳುತ್ತಿದ್ದ ದೃಶ್ಯವನ್ನು ಕ್ಲಿಕ್ಕಿಸಿದ್ದರು. ಈ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು.

ಮಕ್ಕಳ ದತ್ತು ಸ್ವೀಕಾರ ಆಗದಿರಲಿ ಭವಿಷ್ಯಕ್ಕೆ ಸಂಚಕಾರ

ವಿನೋದಾ ಪ್ರಭಾಕರ್



ಕಳೆದ ವಾರ ದೃಶ್ಯ ಮಾಧ್ಯಮದಲ್ಲೊಂದು ವರದಿ ಬಿತ್ತರವಾಯಿತು. ಅಪ್ಪ- ಅಮ್ಮ ಇಬ್ಬರನ್ನೂ ಕೋವಿಡ್‌ನಿಂದಾಗಿ ಕಳೆದುಕೊಂಡ ಪುಟ್ಟ ಮಗು ಇದ್ಯಾವುದರ ಅರಿವಿಲ್ಲದೇ ಸಂಬಂಧಿಕರ ತೋಳಿನಲ್ಲಿ ಮುಗ್ಧ ನಗೆ ಚೆಲ್ಲುತ್ತಿತ್ತು. ನೆರೆದವರ ಕಂಗಳಲ್ಲಿ ಅಶ್ರುಧಾರೆ; ಆ ಮಗುವಿನ ಭವಿಷ್ಯವೇನು ಎಂಬ ದುಃಖಭರಿತ ಮಾತುಗಳು.

ಇನ್ನೊಂದು ಮಗುವಂತೂ ಹುಟ್ಟುವ ಕೆಲವೇ ದಿನಗಳ ಮೊದಲು ಅಪ್ಪನನ್ನು, ಹುಟ್ಟಿದ 6-8 ದಿನಗಳಿಗೆ ಅಮ್ಮನನ್ನೂ ಕಳೆದುಕೊಂಡಿತು. ಕಾರಣ ಇದೇ ಕೋವಿಡ್. ಹೌದು, ಕೋವಿಡ್- 19ರ ಎರಡನೇ ಅಲೆಯಲ್ಲಿ ಮನಕಲಕುವ ಅಂಶವೇನೆಂದರೆ ವಯಸ್ಸಿನ ಭೇದವಿಲ್ಲದೆ ಏರುತ್ತಿರುವ ಸಾವಿನ ಸಂಖ್ಯೆ. ಚಿಕ್ಕ ವಯಸ್ಸಿನ ಜನರ ಜೀವಕ್ಕೂ ಎರವಾಗುತ್ತಿದೆ. ಸಾಯಬೇಕಾದ ವಯಸ್ಸೇ ಅಲ್ಲ ಎಂದುಕೊಂಡವರು ಜೀವ ಕಳೆದುಕೊಳ್ಳುತ್ತಿರುವುದು ಮನುಕುಲದ ಬಲವನ್ನು ಉಡುಗಿಸುತ್ತಿದೆ.

ಮುಂದೇನು ಎಂದು ನಾವು ಯೋಚಿಸುತ್ತಿರುವ ಈ ಗಳಿಗೆಯಲ್ಲಿ ಇನ್ನಷ್ಟು ಚಿಂತೆಗೀಡು ಮಾಡುತ್ತಿರುವುದು ಪುಟ್ಟ ಮಕ್ಕಳ ಹೆತ್ತವರು ಸಾವನ್ನಪ್ಪುತ್ತಿರುವ ದೃಶ್ಯಗಳನ್ನು ನೋಡಿದಾಗ. ಇನ್ನೂ ಸುತ್ತಲಿನ ಪ್ರಪಂಚದ ಅರಿವಿರದ ಚಿಕ್ಕ ಮಕ್ಕಳ ಹೆತ್ತವರು ಕೊರೊನಾಗೆ ಬಲಿಯಾದಾಗ ಆ ಮಗುವಿನ ಭವಿಷ್ಯದ ಬಗ್ಗೆ ಆತಂಕ ಮಾತ್ರವಲ್ಲ, ಭಯವೂ ಆಗುತ್ತದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ರೀತಿ ಅನಾಥರಾಗಿರುವ ಮಕ್ಕಳ ಸ್ಥಿತಿ ಏನು? ಅವರ ಲಾಲನೆ-ಪಾಲನೆ ಮಾಡುವವರಾರು? ಇದರಲ್ಲಿ ಸರ್ಕಾರದ ಪಾತ್ರವೇನು? ಸಂಘ- ಸಂಸ್ಥೆಗಳ ಪಾತ್ರವೇನು? ಸಮಾಜದ ಪಾತ್ರವೇನು ಎನ್ನುವುದು ಬಹಳ ಮುಖ್ಯವಾಗಿ ಚರ್ಚೆಯಾಗಬೇಕಾದ ವಿಷಯ, ಕಾರಣ ಜಗತ್ತಿನಲ್ಲಿ ಯಾವ ಮಗುವೂ ಅನಾಥವಾಗಬಾರದು, ಯಾರೂ ಬದುಕನ್ನು ಕಳೆದುಕೊಳ್ಳಬಾರದು.

> ಕೋವಿಡ್ ಎಂಬುದು ಪುಟ್ಟ ಮಗುವಿನ ಅಪ್ಪ- ಅಮ್ಮನನ್ನೂ, ಆ ಮಗುವಿನ ಭವಿಷ್ಯವನ್ನೂ ಕಸಿದುಕೊಂಡಂತಹ ಬಹಳಷ್ಟು ಪ್ರಕರಣಗಳು ಸಂಭವಿಸಿವೆ. ಅಂತಹ ಮಕ್ಕಳನ್ನು ದತ್ತು ಸ್ವೀಕರಿಸಲು ಸಾಕಷ್ಟು ಜನ ಮುಂದೆ ಬರುತ್ತಿದ್ದಾರೆ. ಆದರೆ ಈ ದತ್ತು ಸ್ವೀಕಾರ ಕಾನೂನಾತ್ಮಕವಾಗಿರಬೇಕಾಗುತ್ತದೆ.

ಬೇಕಿದೆ ಮಗುವಿನ ಭವಿಷ್ಯಕ್ಕೆ ಭದ್ರ ಬುನಾದಿ

ಈ ರೀತಿಯ ಒಂದು ಘಟನೆ ಜರುಗಿದಾಗ 'ನಾನು ಮಗುವನ್ನು ನೋಡಿಕೊಳ್ಳುತ್ತೇನೆ' ಎಂದು ಮುಂದೆ ಬರುವವರು ಹಲವರಿರಬಹುದು. ಆದರೆ ಬೇಕಿರುವುದು ಆ ಕ್ಷಣದ ಕರುಣೆ ಮಾತ್ರವಲ್ಲ, ಮಗುವಿನ ಬದುಕಿನ ಭವಿಷ್ಯಕ್ಕೆ ಭದ್ರ ಬುನಾದಿ. ಏಕೆಂದರೆ ಕೆಲವರು ಕಾನೂನುಬಾಹಿರವಾಗಿ ಮಕ್ಕಳನ್ನು ಸಾಕಲು ತೆಗೆದುಕೊಂಡ ಘಟನೆಗಳು ವರದಿಯಾಗಿವೆ. ಈ ರೀತಿಯ ಕಾನೂನುಬಾಹಿರ ವಿಧಾನದಿಂದ ಪುಟ್ಟ ಮಕ್ಕಳಿಗೆ ತಕ್ಷಣದ ಆಸರೆ ಸಿಗಬಹುದಾದರೂ ಮುಂದೆ ಇನ್ನಷ್ಟು ಘೋರ ಪರಿಸ್ಥಿತಿಗೆ ಅವರನ್ನು ದೂಡಬಹುದಾದ ಸಾಧ್ಯತೆಗಳು ಸಾಕಷ್ಟಿರಬಹುದು.

ಈ ನಿಟ್ಟಿನಲ್ಲಿ ತಂದೆ- ತಾಯಿಯನ್ನು ಕಳೆದುಕೊಂಡ ಆ ಮಕ್ಕಳ ಭವಿಷ್ಯದ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನವೇ ಈಗ ತುರ್ತಾಗಿ ಆಗಬೇಕಿರುವುದು. ಈ ಸಂದರ್ಭದಲ್ಲಿ 30 ಜಿಲ್ಲೆಗಳಲ್ಲಿ ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳಲ್ಲಿ ಇಂತಹ ಮಕ್ಕಳಿಗಾಗಿ ಕೋವಿಡ್ ಕೇರ್ ಸೆಂಟರ್ ತೆರೆಯುವ ಸರ್ಕಾರದ ತೀರ್ಮಾನ ಸ್ತುತ್ಯರ್ಹ.

ಯಾವ ಮಗುವೂ ಅನಾಥವಲ್ಲ...!

ಅಪ್ಪ- ಅಮ್ಮನನ್ನು ಕಳೆದುಕೊಂಡ ಮಗುವನ್ನು ಅನಾಥ ಎನ್ನುವ ಪರಿಪಾಠವೂ ಕೂಡ ಸರಿಯಲ್ಲ, ಕಾರಣ ಇದು ಮಕ್ಕಳನ್ನು ನಾವು ಮಾನಸಿಕವಾಗಿ ಹಿಂಸಿಸಿದಂತೆ ಆಗುತ್ತದೆ. ಪ್ರತಿಯೊಂದು ಸೃಷ್ಟಿಗೂ ಈ ಜಗತ್ತಿನಲ್ಲಿ ಕಾರಣವಿದೆ. ಹಾಗಾಗಿ ಅನಾಥ ಎನ್ನುವ ಪದವನ್ನು ಉಪಯೋಗಿಸದಿದ್ದರೆ ಅದು ಆ ಮಕ್ಕಳಿಗೆ ನಾವು ಮಾಡುವ ಉಪಕಾರ ಎನ್ನಬಹುದು. ಹುಟ್ಟಿದ ಪ್ರತಿ ಮಗುವಿಗೂ ಈ ಭೂಮಿಯ ಮೇಲೆ ಬದುಕುವ ಹಕ್ಕಿದೆ ಎನ್ನುವುದನ್ನು ನಾವು ನೆನಪಿಡಬೇಕು.

ದತ್ತು ಪಡೆಯುವುದು ಕಾನೂನು ರೀತಿಯಲ್ಲಿರಲಿ

ಒಂದು ಮಗು ತನ್ನ ತಂದೆ- ತಾಯಿಯನ್ನು ಕಳೆದುಕೊಂಡಿದೆ ಎಂದರೆ ಅವರ ಸಂಬಂಧಿಕರೋ, ಆ ಊರಿನವರೋ ಮುಂದೆ ಬಂದು 'ಮಗುವನ್ನು ನಾವು ಸಾಕುತ್ತೇವೆ, ಜೋಪಾನ ಮಾಡುತ್ತೇವೆ' ಎಂದು ಹೇಳಿದರೂ ಸಹ ಅದು ಆ ಕ್ಷಣದ ಅವರ ಮಾನವೀಯ ಗುಣವೆಂದು ನಾವು ಯೋಚಿಸಬೇಕೇ ಹೊರತು ಮಗುವಿನ ಭವಿಷ್ಯದ ದೃಷ್ಟಿಯಿಂದಲ್ಲ! ಎಷ್ಟೋ ಸಾರಿ ಈ ರೀತಿಯ ಪ್ರಕರಣಗಳಲ್ಲಿ ಆ ಮಗು ಭವಿಷ್ಯ ಕಳೆದುಕೊಂಡು ಮತ್ತೆ ಅನಾಥ ಪ್ರಜ್ಞೆಯಿಂದ ನರಳುವ ಸ್ಥಿತಿ ಎದುರಾಗಬಹುದು. ಕಾನೂನು ಪರಿಧಿಯಲ್ಲಿ ಅಂತಹ ಮಕ್ಕಳನ್ನು ದತ್ತು ಪಡೆದರೆ ಅವರಿಗೆ ಸಿಗಬೇಕಾದ ಬದುಕಿನ ಭದ್ರತೆ, ಶಿಕ್ಷಣ, ಮೂಲಭೂತ ಹಕ್ಕುಗಳು ಸಿಗುತ್ತವೆ. ಇಲ್ಲವಾದರೆ ಇಂದಲ್ಲ ನಾಳೆ ದತ್ತು ಪಡೆದ ದಂಪತಿ ಆ ಮಗುವನ್ನು ಕಡೆಗಣಿಸಿ ಬೀದಿಪಾಲು ಮಾಡಬಹುದು. ಈ ನಿಟ್ಟಿನಲ್ಲಿ ನೇರವಾಗಿ ಯಾರಾದರೂ ಮಕ್ಕಳನ್ನು ದತ್ತು ಪಡೆಯಲು ಪ್ರಯತ್ನಿಸಿದರೆ ಅದು ಕಾನೂನು ಬಾಹಿರ ಮತ್ತು ಅಂತಹವರ ವಿರುದ್ಧ ಬಾಲ ನ್ಯಾಯ ಕಾಯ್ದೆ 2015 ಮತ್ತು ಅಡಾಪ್ಷನ್ ರೆಗ್ಯುಲೇಷನ್ 2017 ರಂತೆ ಕ್ರಮ ಜರುಗಿಸಬಹುದು.

ಮಕ್ಕಳ ದುರುಪಯೋಗ

ಮಗುವಿನ ತಂದೆ- ತಾಯಿಗಿರುವ ಆಸ್ತಿ ಆಕರ್ಷಣೆ ಹಿನ್ನೆಲೆಯಲ್ಲಿ ಮಗುವನ್ನು ಸಾಕುವುದು, ಮಕ್ಕಳ ದುರುಪಯೋಗ, ಭಿಕ್ಷಾಟನೆಗೆ ನೂಕುವುದು, ವೇಶ್ಯಾವಾಟಿಕೆಗೆ ತಳ್ಳುವುದು, ವಿದೇಶಗಳಿಗೆ ಮಾರಾಟ ಮಾಡುವ ಜಾಲ.. ಹೀಗೆ ಮಕ್ಕಳ ಹಕ್ಕುಗಳನ್ನು ಕಸಿದು ಅವರ ಭವಿಷ್ಯಕ್ಕೆ ಕೊಳ್ಳಿ ಇಡುವ ಪ್ರಕರಣಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಾವು ವರ್ತಿಸುವುದು ಈ ಕ್ಷಣದ ತುರ್ತು. ಈ ನಿಟ್ಟಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಣ್ಗಾವಲು ಸದಾ ಜಾಗೃತವಾಗಿರುವುದು ಅಷ್ಟೇ ಮುಖ್ಯ!

(ಲೇಖಕಿ: ವಕೀಲರು, ಬೆಂಗಳೂರು)

ದತ್ತು ಸ್ವೀಕಾರದ ನಿಯಮಗಳು



- ಸೆಂಟ್ರಲ್ ಅಡಾಪ್ಷನ್ ರಿಸೋರ್ಸ್ ಅಥಾರಿಟಿ - ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಜಾಲತಾಣದಲ್ಲಿ ನೋಂದಾಯಿಸಿಕೊಳ್ಳಬೇಕು. cara.NIC.in
- ನಂತರ ಸಂಬಂಧಿಸಿದ ದತ್ತು ಆಕಾಂಕ್ಷಿ ಪೋಷಕರಿಗೆ ನೋಂದಣಿ ಸಂಖ್ಯೆ ದೊರೆಯುತ್ತದೆ. ಸಂಬಂಧಿಸಿದ ನೋಡಲ್ ಏಜೆನ್ಸಿ ಅಧಿಕಾರಿಗಳು ಸಾಮಾಜಿಕ, ಆರ್ಥಿಕ, ಕೌಟುಂಬಿಕ ಸಾಮರ್ಥ್ಯವನ್ನು ಸಮಗ್ರವಾಗಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವರು.
- ಅರ್ಜಿದಾರ ಪೋಷಕರು ಫ್ಯಾಮಿಲಿ ಫೋಟೊ, ಆಧಾರ್ ಮುಂತಾದ ದಾಖಲೆಗಳನ್ನು ನೀಡಬೇಕು.
- ದಾಖಲೆಯ ಪರಿಶೀಲನೆಯ ನಂತರ ವಕೀಲರ ಸಹಾಯದಿಂದ ಕೋರ್ಟ್ ಮೂಲಕ ಮಗುವನ್ನು ದತ್ತು ಪಡೆಯಬಹುದು
- ದತ್ತು ಮಗುವಿಗೆ ಪೋಷಕರ ಆಸ್ತಿಯ ಹಕ್ಕಿನ ಜೊತೆಗೆ ಕಾನೂನು ಸಂರಕ್ಷಣೆ ಕೂಡ ಇರುತ್ತದೆ.

ಈ ಸುಂದರಿ ಕನ್ನಡತಿ



ಆ್ಯಡ್ಲಿನ್ ಕ್ಯಾಸ್ಟಲಿನೊ
ಚಿತ್ರಕೃಪೆ: ಇನ್‌ಸ್ಟಾಗ್ರಾಂ

ನೀಳಕಾಯ, ಮುದ್ದಾದ ಮುಖ, ಹೊಳೆವ ಕಂಗಳು, ದಟ್ಟ ಕೂದಲಿನ ಬೆಡಗಿ ಆ್ಯಡ್ಲಿನ್ ಕ್ಯಾಸ್ಟಲಿನೊ. ಈ ಬಾರಿ ಅಮೆರಿಕದ ಫ್ಲೋರಿಡಾದಲ್ಲಿ ನಡೆದ 69ನೇ ಭುವನ ಸುಂದರಿ ಸ್ಪರ್ಧೆಯಲ್ಲಿ ಮೂರನೇ ರನ್ನರ್ ಅಪ್ ಆಗಿರುವ ಇವರು ಕನ್ನಡತಿ, ಉಡುಪಿಯ ಉದ್ಯಾವರದವರು. 5 ಅಡಿ 6 ಇಂಚಿನ ಈ ಸುಂದರಿ ಮಾಡೆಲಿಂಗ್ ಕ್ಷೇತ್ರದಲ್ಲಿ ಮಿಂಚಿದವರು. ಭಾರತ ಹಾಗೂ ವಿವಿಧ ದೇಶಗಳಲ್ಲಿ ನಡೆದ ಮಾಡೆಲಿಂಗ್ ಸ್ಪರ್ಧೆಗಳಲ್ಲಿ ಭಾಗವಹಿಸಿದ ಅನುಭವವೂ ಇವರಿಗಿದೆ.

ಹಿನ್ನೆಲೆ

1998, ಜುಲೈ 24 ರಂದು ಕುವೈತ್‌ನಲ್ಲಿ ಆ್ಯಡ್ಲಿನ್ ಜನಿಸಿದರು. 15ನೇ ವಯಸ್ಸಿನಲ್ಲಿ ಭಾರತಕ್ಕೆ ಮರಳಿದ ಇವರು ಸದ್ಯ ತಂದೆ-ತಾಯಿಯ ಜೊತೆ ಮುಂಬೈನಲ್ಲಿ ನೆಲೆಸಿದ್ದಾರೆ. ಮುಂಬೈನ ಸೇಂಟ್ ಕ್ಸೇವಿಯರ್ ಹೈಸ್ಕೂಲ್‌ನಲ್ಲಿ ಪ್ರೌಢ ಶಿಕ್ಷಣ ಹಾಗೂ ವಿಲನ್ಸ್ ಕಾಲೇಜಿನಲ್ಲಿ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ ಪದವಿ ಪಡೆದಿದ್ದಾರೆ.

'ಮಿಸ್ ಯೂನಿವರ್ಸ್ 2020' ಕಾರ್ಯಕ್ರಮವು ಮೇ 16 2021 ರಂದು ನಡೆದಿತ್ತು. ಈ ಬಾರಿಯ ಕಾರ್ಯಕ್ರಮದಲ್ಲಿ ಒಟ್ಟು 73 ದೇಶಗಳ ಸುಂದರಿಯರು ಭಾಗವಹಿಸಿದ್ದರು.

'ಕುವೈತ್‌ನಲ್ಲಿ ಬೆಳೆದ ನನಗೆ ಮೊದಲು ಮಾಡೆಲಿಂಗ್‌ನಲ್ಲಿ ಅಂತಹ ಮಾನ್ಯತೆ ಸಿಕ್ಕಿರಲಿಲ್ಲ. ನನ್ನಂತಹ ಸಾಮಾನ್ಯ ಹುಡುಗಿಯೊಬ್ಬಳು ಪ್ರತಿಷ್ಠಿತ ವೇದಿಕೆಯಲ್ಲಿ ದೇಶವನ್ನು(ಭಾರತ) ಪ್ರತಿನಿಧಿಸುವುದು ನಿಜಕ್ಕೂ ಖುಷಿಯ ಸಂಗತಿ' ಎಂದು ಖುಷಿ ಹಂಚಿಕೊಂಡಿದ್ದಾರೆ ಆ್ಯಡ್ಲಿನ್.

'ಮಿಸ್ ದಿವಾ ಯೂನಿವರ್ಸ್'ನಲ್ಲೂ ಭಾಗವಹಿಸಿ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದರು ಈ ಬೆಡಗಿ.

ಸಾಮಾಜಿಕ ಕಾರ್ಯಗಳು

ಮಾಡೆಲಿಂಗ್‌ನಲ್ಲಿ ರ್‍ಯಾಂಪ್ ಮೇಲೆ ಹೆಜ್ಜೆ ಹಾಕುವುದು ಮಾತ್ರವಲ್ಲ ಸಾಮಾಜಿಕ ಕಳಕಳಿಯನ್ನೂ ಹೊಂದಿರುವ ಇವರು ಹಲವು ಬಗೆಯ ಸಾಮಾಜಿಕ ಸೇವೆಯಲ್ಲೂ ತೊಡಗಿದ್ದಾರೆ. ರೈತರ ಆತ್ಮಹತ್ಯೆ ವಿರುದ್ಧದ ಹೋರಾಟ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಣ ಸಂಗ್ರಹ, ಮಹಿಳೆಯರ ಸಬಲೀಕರಣ, ಅಕ್ಷಯಪಾತ್ರ ಫೌಂಡೇಶನ್, ಕೊರೊನಾ ಜಾಗೃತಿ ಸೇರಿದಂತೆ ಹತ್ತು ಹಲವು ಸಾಮಾಜಿಕ ಕಾರ್ಯಕ್ರಮಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ನಟನೆ

'ಕಿಂಗ್‌ಫಿಷರ್ ಕ್ಯಾಲೆಂಡರ್: ದಿ ಮೇಕಿಂಗ್' ಎಂಬ ಡಾಕ್ಯುಮೆಂಟರಿ ಸಿರೀಸ್‌ನಲ್ಲಿ ನಟಿಸಿರುವ ಇವರು 'ಮೇರೆ ದಿಲ್ ವಿಚ್', 'ತೇರೆ ಬಿನಾ' ಮ್ಯೂಸಿಕ್ ಅಲ್ಬಂಗಳಲ್ಲೂ ನಟಿಸಿದ್ದಾರೆ. ❖

ಬಾಣಂತಿಗೆ ಕೋವಿಡ್ ನಿರ್ವಹಣೆ ಹೇಗೆ?

ಸ್ಪಂದನ



ಡಾ. ವೀಣಾ ಎಸ್. ಭಟ್

- **ನನಗೆ 25 ವರ್ಷ. ಒಂದು ತಿಂಗಳ ಗಂಡು ಮಗುವಿನ ಬಾಣಂತಿ. ನನಗೆ ಕೋವಿಡ್ ಪಾಸಿಟಿವ್ ಬಂದಿದೆ. ಮನೆಯಲ್ಲಿಯೇ ಇದ್ದು ಚಿಕಿತ್ಸೆ ಪಡೆಯಲು ನಿರ್ಧರಿಸಿರುವ ನಾನು ಈ ಪರಿಸ್ಥಿತಿಯನ್ನು ಹೇಗೆ ನಿರ್ವಹಿಸಬೇಕೆಂಬ ಗೊಂದಲದಲ್ಲಿದ್ದೇನೆ. ನನ್ನ ಮಗುವಿಗೆ ಸೋಂಕು ತಗುಲದ ಹಾಗೆ ಹೇಗಿರಬೇಕು ಮತ್ತು ನನ್ನ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ನಾನು ಏನೇನು ತಿನ್ನಬೇಕು ಎಂಬುದನ್ನು ತಿಳಿಸಿ.**

ಹೆಸರು, ಊರು ತಿಳಿಸಿಲ್ಲ

ನಿಮಗೆ ಕೋವಿಡ್ ಪಾಸಿಟಿವ್ ಆಗಿದ್ದರೂ ನೀವು ಇದನ್ನು ಧೈರ್ಯವಾಗಿ ಎದುರಿಸಿ. ಗರ್ಭಧಾರಣೆ, ಬಾಣಂತನದಿಂದ ರೋಗ ನಿರೋಧಕ ಶಕ್ತಿ ಸ್ವಲ್ಪ ಕಡಿಮೆ ಆಗಿರುತ್ತದೆಯಾದರೂ ಹೆದರಿಕೆ, ಗೊಂದಲ ಬೇಡ. ನೀವು ನಿಮ್ಮ ಮನೆಯಲ್ಲೇ ಪ್ರತ್ಯೇಕ ಒಂದು ಕೊಠಡಿಯಲ್ಲಿರಿ ಮತ್ತು ಯಾವುದಾದರೊಂದು ತಜ್ಞವೈದ್ಯರ ಮೇಲ್ವಿಚಾರಣೆಯಲ್ಲಿ ದೂರವಾಣಿ ಮೂಲಕವಾದರೂ ಸಂಪರ್ಕದಲ್ಲಿರಿ. ನಿಮ್ಮ ಮಗುವಿಗೂ ಕೂಡ ಆರ್.ಟಿ.ಪಿ.ಸಿ.ಆರ್ ಟೆಸ್ಟ್ ಮಾಡಿಸಿ. ತಾಯಿ ಮಗು ಒಟ್ಟಿಗೆ ಇರಬೇಕು. ಮೊದಲ ಆರು ತಿಂಗಳು ನೀವದಕ್ಕೆ ಕೇವಲ ಎದೆಹಾಲು ಮಾತ್ರ ಉಣಿಸುವುದು ಅತ್ಯಂತ ಸುರಕ್ಷಿತ ಹಾಗೂ ಅತಿ ಅಗತ್ಯ. ಎದೆಹಾಲಿನಿಂದ ಮಗುವಿಗೆ ವೈರಸ್ ವರ್ಗಾವಣೆ ಆಗುವ ಸಂಭವ ಕಡಿಮೆ. ಒಮ್ಮೆ ಆದರೂ ವೈರಸ್ ಸೋಂಕು ತೀವ್ರವಾಗಿ ಏನೂ ಇರುವುದಿಲ್ಲ. ಮೊದಲನೆಯ ಸೀಮಿತ ಅಧ್ಯಯನದಲ್ಲಿ ತಾಯಿಗೆ ಸೋಂಕಿದ್ದು ತಾಯಿ-ಮಗುವನ್ನು ಬೇರೆ ಮಾಡಿದಾಗ ಆದ ಅನುಕೂಲಕ್ಕಿಂತ ಅನಾನುಕೂಲಗಳೇ ಹೆಚ್ಚಾಗಿದೆ ಎನ್ನುವುದು ತಿಳಿದುಬಂದಿದೆ. ಶೇ.80 ರಿಂದ 90ರಷ್ಟು ಜನರಲ್ಲಿ ಕೋವಿಡ್ ಸೋಂಕು ಅತ್ಯಂತ ಸೌಮ್ಯವಾಗಿ ಕೇವಲ ಶೀತ-ನೆಗಡಿ, ಜ್ವರ, ಸ್ವಲ್ಪ ಕೆಮ್ಮು ಬಂದು ಹಾಗೆಯೇ ವಾಸಿಯಾಗಿ ಬಿಡುತ್ತದೆ. ಸೋಂಕು ಉಂಟಾಗಿ ಏಳೆಂಟು ದಿನದಿಂದ 14 ದಿನದವರೆಗೆ ಅತ್ಯಂತ ಕಾಳಜಿಯಿಂದಿರಿ. ಎಂಟನೆಯ ದಿನದ ನಂತರ ಎಲ್ಲಾ ಕೋವಿಡ್ ಸೋಂಕಿತರು ಅತಿ ಜಾಗ್ರತೆಯಿಂದಿರಬೇಕು. ಸ್ವಯಂ ಚಿಕಿತ್ಸೆ ಮಾಡಬಾರದು.

ಮಗುವನ್ನು ನೀವಿರುವ ರೂಮ್‌ನಲ್ಲೇ 6 ಅಡಿ ಅಂತರದಲ್ಲಿ ಮಲಗಿಸಿ. ನೀವು ಸರ್ಜಿಕಲ್ ಮಾಸ್ಕ್ ಧರಿಸಿ ಹಾಲುಣಿಸುವಾಗ ಕೆಮ್ಮು, ಸೀನು ಬರದ ಹಾಗೇ ನೋಡಿಕೊಳ್ಳಿ. ಮಾಸ್ಕ್ ಧರಿಸಿದ್ದರೂ ಅಂತಹ ಸಂದರ್ಭದಲ್ಲಿ ಮುಖವನ್ನು ಅಡ್ಡ ತಿರುಗಿಸಿ. ಕೈಗಳನ್ನು ಸೋಪಿನಿಂದ ಆಗಾಗ್ಗೆ ತೊಳೆದುಕೊಳ್ಳಿ. ಮುಖ, ಮೂಗನ್ನು ಅನಗತ್ಯವಾಗಿ ಮುಟ್ಟಿಕೊಳ್ಳಬೇಡಿ. ಬಾಣಂತನದಲ್ಲಿ ನೀವು ಸರಿಯಾಗಿ ನೀರು ಸೇವಿಸದಿದ್ದರೆ ಮೂತ್ರ ಸೋಂಕಾಗಿ, ಜ್ವರ ಬಂದರೆ, ಕೋವಿಡ್ ಸೋಂಕು ಜ್ವರವೇ ಅಥವಾ ಯು.ಟಿ.ಐ ಜ್ವರವೋ ಗೊಂದಲವಾಗಿಬಹುದು. ಆದ್ದರಿಂದ 3-4 ಲೀಟರ್ ನೀರು ಪ್ರತಿದಿನ ಕುಡಿಯಬೇಕು.

ನಿಮ್ಮ ಆಹಾರದಲ್ಲಿ ದಿನಾ ಸೇಬು, ಮೂಸಂಬಿ, ಪಪ್ಪಾಯ ಇತ್ಯಾದಿ ಹಣ್ಣುಗಳನ್ನು ಸೇವಿಸಬಹುದು. ಬೀನ್ಸ್, ಕ್ಯಾರೆಟ್, ಬೀಟ್‌ರೂಟ್ ಇನ್ನಿತರ ತರಕಾರಿ, ಹಸಿರು ಸೊಪ್ಪುಗಳನ್ನು ಸಾಕಷ್ಟು ಬಳಸಿ, ಹೆಸರುಕಾಳು ಮೊಳಕೆ ಬರಿಸಿ ಬೇಯಿಸಿ ದಿನಾಲೂ ಸೇವಿಸಬೇಕು. ಸಹಜವಾಗಿ ರೋಗನಿರೋಧಕ ಶಕ್ತಿ ಹೆಚ್ಚಿಸಿ ಆಹಾರದಲ್ಲೇ ಶುಂಠಿ, ಅರಿಸಿನಗಳನ್ನು ಬಳಸಿ. ಪುದಿನ, ತುಳಸಿ, ಬ್ರಾಹ್ಮಿ, ನೆಲನೆಲ್ಲಿ ಇತ್ಯಾದಿಗಳ ಕಷಾಯ ಮಾಡಿಕೊಂಡು ಕುಡಿಯಬಹುದು. ಬಿಸಿನೀರಿನಲ್ಲಿ ಉಪ್ಪು ಹಾಕಿ ಆಗಾಗ್ಗೆ ಗಾರ್ಗಲ್ ಮಾಡುತ್ತಿರಿ. ಸಣ್ಣ-ಪುಟ್ಟ ವ್ಯಾಯಾಮಗಳನ್ನು ಮಾಡಿ. ದೀರ್ಘ ಉಸಿರಾಟ ಅಥವಾ ಪ್ರಾಣಾಯಾಮವನ್ನು ನಿಯಮಿತವಾಗಿ ಮಾಡಿ. ದೀರ್ಘ ಉಸಿರಾಟದಿಂದ ಒತ್ತಡ ಕಡಿಮೆ ಮಾಡಿಕೊಳ್ಳುವುದರಿಂದಲೂ ರೋಗನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಮಧ್ಯಾಹ್ನ 11 ರಿಂದ 3 ಗಂಟೆ ಬಿಸಿಲಿನಲ್ಲಿ 15 ರಿಂದ 20 ನಿಮಿಷ ಓಡಾಡಿ. ಸಕಾರಾತ್ಮಕವಾಗಿರಿ. ನೀವು ಕೋವಿಡ್ ಅನ್ನು ಧೈರ್ಯವಾಗಿ ಎದುರಿಸಬಹುದು.

ಸಾಕಷ್ಟು ನಿದ್ದೆ ಮಾಡುವುದೂ ರೋಗನಿರೋಧಕ ಶಕ್ತಿ ಹೆಚ್ಚಿಸುತ್ತದೆ. ಮಗು ಮಲಗಿದಾಗೆಲ್ಲಾ ನೀವೂ ಮಲಗಿ ವಿಶ್ರಾಂತಿ ಪಡೆಯಿರಿ. ಎಚ್ಚರವಿದ್ದಾಗ ಮಧ್ಯೆ ಮಧ್ಯೆ ನಡೆದಾಡುತ್ತಾ ಇರುವುದು, ಕೈ ಕಾಲುಗಳ ವ್ಯಾಯಾಮ ಆಗಾಗ ಮಾಡುತ್ತಿದ್ದರೆ ಕಾಲುಗಳಲ್ಲಿ ರಕ್ತ ಹೆಪ್ಪುಗಟ್ಟುವಿಕೆ (ಡಿ.ವಿ.ಟಿ.) ತಡೆಗಟ್ಟಬಹುದು. ಮದ್ಯಪಾನ, ಧೂಮಪಾನ ದೂರವಿಡಿ. ಉಪ್ಪು, ಸಕ್ಕರೆ, ಮೈದಾ ಬಳಕೆ ಮಿತಗೊಳಿಸಿ.

- **ನನಗೆ 19 ವರ್ಷಕ್ಕೆ ಮದುವೆ, 21ಕ್ಕೆ ಮಗು ಆಗಿದೆ. ಈಗ ನನಗೆ 27 ವರ್ಷ. ಆದರೆ ತೂಕ ಹೆಚ್ಚಳ ಮತ್ತು ಮುಟ್ಟಿನ ಸಮಸ್ಯೆ ಆಗುತ್ತಿದೆ. ನಾನು 158 ಸೆಂ.ಮೀ. ಎತ್ತರ ಇದ್ದು, ತೂಕ 55ರಿಂದ 68 ಕೆಜಿಗೆ ಹೆಚ್ಚಿದೆ. ಒಂದೇ ಮಗು ಇರುವುದರಿಂದ ಫ್ಯಾಮಿಲಿ ಪ್ಲಾನಿಂಗ್ ಅಲ್ಲಿ ಇದ್ದೇವೆ. ತೂಕ ಹೆಚ್ಚಳಕ್ಕೆ ಅದು ಏನಾದರೂ ಕಾರಣವೇ? ಪ್ರತಿದಿನ ಬೆಳಿಗ್ಗೆ 4 ಕಿ.ಮೀ ರನ್ನಿಂಗ್, 4 ಕಿ.ಮೀ ಸೈಕ್ಲಿಂಗ್ ಹೋಗುತ್ತೇನೆ. 6 ತಿಂಗಳಿಂದ ಋತುಚಕ್ರದ ಸಮಯದಲ್ಲಿ ಜ್ವರ ಬರುತ್ತದೆ. ಸ್ರಾವ ಸರಿಯಾಗಿ ಆಗುವುದಿಲ್ಲ. ಈ ಸಮಸ್ಯೆಗೆ ಪರಿಹಾರ ಇದೆಯೇ?**

ಚೈತ್ರ ಸತೀಶ್, ತುಮಕೂರು

ಚೈತ್ರಾರವರೇ, ಕುಟುಂಬ ಯೋಜನೆ ವಿಧಾನವಾಗಿ ಸಂತಾನ ನಿಯಂತ್ರಣ ಗುಳಿಗೆಗಳನ್ನು ತೆಗೆದುಕೊಳ್ಳುತ್ತಿದ್ದರೆ ಆ ಕಾರಣವಾಗಿಯೂ ನಿಮ್ಮ ತೂಕ ಹೆಚ್ಚುತ್ತಿರಬಹುದು. ವ್ಯಾಯಾಮದ ಜೊತೆ ತೂಕ ನಿಯಂತ್ರಣದಲ್ಲಿ ಆಹಾರ ಸೇವನೆಯೂ ಬಹಳ ಮುಖ್ಯ. ಅಧಿಕ ತೂಕವನ್ನು ನಿರ್ಣಯಿಸುವುದು ಶೇ 70ರಷ್ಟು ಸಂದರ್ಭದಲ್ಲಿ ಆಹಾರ ಸೇವನೆಯೇ. ಹಿತಮಿತ ಆಹಾರ ಸೇವನೆ ಇರಲಿ. ಹಸಿವೆ ಇಂಗಿಸುವಷ್ಟೇ ಮಾತ್ರ ತಿನ್ನಿ, ಹೊಟ್ಟೆ ಬಿರಿಯುವಷ್ಟಲ್ಲ. ಥೈರಾಯಿಡ್ ಹಾರ್ಮೋನ್‌ಗಳ ಬಗ್ಗೆ ಪರೀಕ್ಷಿಸಿಕೊಳ್ಳಿ. ಥೈರಾಯಿಡ್ ಗ್ರಂಥಿಯ ಸ್ರಾವದ ಏರುಪೇರಿನಿಂದಲೂ ಸ್ರಾವ ಕಡಿಮೆಯಾಗಬಹುದು ಅಥವಾ ನಿಮಗೆ ಪಿಸಿಓಡಿ ಸಮಸ್ಯೆಯೂ ಇರಬಹುದು. ಋತುಚಕ್ರ ಸಮಯದಲ್ಲಿ ಕೆಲವು ಸ್ಥಳೀಯ ರಾಸಾಯನಿಕಗಳು ಬಿಡುಗಡೆಯಾಗಿ ಜ್ವರ ಬಂದ ಹಾಗೆ ಅನಿಸಬಹುದು. ಯಾವುದಕ್ಕೂ ತಜ್ಞ ವೈದ್ಯರ ಹತ್ತಿರ ಪರೀಕ್ಷಿಸಿಕೊಳ್ಳಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ...

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಪಿಎಂಎಸ್: ಅರಿವಿದ್ದರೆ ನಿಭಾಯಿಸುವುದು ಸುಲಭ

ಡಾ. ಅರುಣ ಮುರಳೀಧರ



ಋತುಸ್ರಾವಕ್ಕಿಂತ ಮುಂಚಿನ ಕೆಲವು ಲಕ್ಷಣ (ಪ್ರೀಮೆನುಸ್ಟ್ರುಯೆಲ್ ಸಿಂಡ್ರೋಮ್- ಪಿಎಂಎಸ್)ಗಳು ಬಹುತೇಕ ಮಹಿಳೆಯರು ಅನುಭವಿಸುವ ಸಮಸ್ಯೆ ಎನ್ನಬಹುದು. ಇದು ಕೆಲವೊಮ್ಮೆ ಮಹಿಳೆಯರ ಗುಣಮಟ್ಟದ ಬದುಕಿನ ಮೇಲೆ ಪರಿಣಾಮ ಬೀರಬಹುದು. ಮಾನಸಿಕ ಆರೋಗ್ಯದ ಏರುಪೇರಿಗೆ ಕಾರಣವಾಗುವ ಇದನ್ನು ಸರಿಯಾಗಿ ಅರಿತುಕೊಂಡರೆ ಸಮರ್ಥವಾಗಿ ನಿಭಾಯಿಸಬಹುದು; ಯಾವಾಗ ತಜ್ಞರ ನೆರವು ಪಡೆಯಬಹುದು ಎಂಬುದೂ ಇದರಿಂದ ಸುಲಭ.

ಶೇ 75ರಷ್ಟು ಮಹಿಳೆಯರಲ್ಲಿ ಮಕ್ಕಳಾಗುವಂತಹ ವಯಸ್ಸಿನಲ್ಲಿ ಅಂದರೆ ಮೊದಲ ಋತುಸ್ರಾವದಿಂದ ಹಿಡಿದು 40-45 ವರ್ಷದವರೆಗೂ ಈ ಪಿಎಂಎಸ್ ಎಂಬುದು ಕಾಡುತ್ತಿರುತ್ತದೆ. ಪ್ರತಿ 20 ಮಹಿಳೆಯರಲ್ಲಿ ಒಬ್ಬರಿಗೆ ಇದು ಗುಣಮಟ್ಟದ ಬದುಕನ್ನೇ ಕಸಿದುಕೊಂಡುಬಿಡುತ್ತದೆ. ಹಾಗೆಯೇ ಕುಟುಂಬದ ಇತರ ಸದಸ್ಯರಲ್ಲೂ ಆತಂಕ ಸೃಷ್ಟಿಸಿಬಿಡುತ್ತದೆ.

ಕೋವಿಡ್‌ನಿಂದ ಜಾಸ್ತಿಯೇ?: ಈ ಕೋವಿಡ್ ಸಂದರ್ಭದಲ್ಲಿ ಬಹಳಷ್ಟು ಮಹಿಳೆಯರು ತಮ್ಮ ಮುಟ್ಟಿನಲ್ಲಿ ಏರುಪೇರಾಗಿರುವ ಬಗ್ಗೆ ಹೇಳಿಕೊಂಡಿದ್ದಾರೆ. ಅನಿಯಮಿತ ಮುಟ್ಟು, ಅಧಿಕ ಸ್ರಾವ ಅಥವಾ ಕಡಿಮೆ ಸ್ರಾವ, ದೀರ್ಘಕಾಲದವರೆಗೆ ಸ್ರಾವ ಕಾಣಿಸಿಕೊಳ್ಳುವುದು ಅಥವಾ ಮುಟ್ಟೇ ಆಗದಿರುವಂತಹ ಸಮಸ್ಯೆಗಳು ಕಾಣಿಸಿಕೊಂಡಿವೆ. ಒತ್ತಡ ಜಾಸ್ತಿಯಾಗಿರುವುದು, ಕಾರ್ಟಿಸಾಲ್ ಎಂಬ ಹಾರ್ಮೋನ್ ಮಟ್ಟದಲ್ಲಿ ಬದಲಾವಣೆ ಇದಕ್ಕೆ ಕಾರಣಗಳು. ಕೋವಿಡ್‌ನಿಂದಾಗಿ ಅಥವಾ ಲಸಿಕೆಯಿಂದಾಗಿ ಈ ಪಿಎಂಎಸ್ ಲಕ್ಷಣಗಳು ಜಾಸ್ತಿಯಾಗಿವೆ ಎಂದು ಹೇಳಲು ಸಾಧ್ಯವಿಲ್ಲದಿದ್ದರೂ ಈಗಾಗಲೇ ಇರುವ ಮಾನಸಿಕ ಆರೋಗ್ಯದ ಸಮಸ್ಯೆಗಳು ಈ ದುರಿತ ಕಾಲದಲ್ಲಿ ಜಾಸ್ತಿಯಾಗಿರಬಹುದು.

ಲಕ್ಷಣಗಳು: ಪಿಎಂಎಸ್ ಪತ್ತೆ ಮಾಡುವಂತಹ ಯಾವುದೇ ಪರೀಕ್ಷೆಗಳಿಲ್ಲ. ವಿವರಗಳನ್ನು ಸಂಪೂರ್ಣ ಪರಿಶೀಲಿಸಿ ಇದನ್ನು ಪತ್ತೆ ಮಾಡಬಹುದಷ್ಟೆ. ಕೆಲವು ಲಕ್ಷಣಗಳು ಪ್ರತಿ ಬಾರಿ ಋತುಸ್ರಾವಕ್ಕಿಂತ 10-15 ದಿನಗಳ ಮುಂಚೆ ಕಾಣಿಸಿಕೊಂಡರೆ, ಕನಿಷ್ಠ 6 ತಿಂಗಳ ಕಾಲ ಇದು ಮುಂದುವರಿದರೆ ಪಿಎಂಎಸ್ ಇದೆ ಎನ್ನಬಹುದು. ಇಂತಹ ಲಕ್ಷಣಗಳು ಋತುಸ್ರಾವದ ನಂತರ ಕಡಿಮೆಯಾಗುತ್ತವೆ.



ಮಾನಸಿಕ ಲಕ್ಷಣಗಳಲ್ಲಿ ಉದ್ವೇಗ, ಕಿರಿಕಿರಿ, ಆಯಾಸ, ಆತಂಕ, ಆತ್ಮವಿಶ್ವಾಸ ಕಡಿಮೆಯಾಗುವುದು, ಸಣ್ಣ ಸಣ್ಣ ವಿಷಯಕ್ಕೂ ಹೆಚ್ಚು ಭಾವನಾತ್ಮಕವಾಗಿ ಪ್ರತಿಕ್ರಿಯಿಸುವುದು ಸೇರಿವೆ. ನಿದ್ರೆಯ ಸಮಸ್ಯೆ, ಲೈಂಗಿಕ ಆಸಕ್ತಿಯಲ್ಲಿ ಬದಲಾವಣೆ ಕಾಣಿಸಿಕೊಳ್ಳಬಹುದು. ಸ್ತನದಲ್ಲಿ ಊತ, ಬಿಗಿತ, ನೋವು, ಹೊಟ್ಟೆಯುಬ್ಬರ, ಕೈ- ಕಾಲುಗಳಲ್ಲಿ ಊತ, ತೂಕದಲ್ಲಿ ಹೆಚ್ಚಳ ಮೊದಲಾದವು ದೈಹಿಕ ಲಕ್ಷಣಗಳು. ಅಸ್ತಮ, ಮೂರ್ಛೆ ರೋಗ ಮೊದಲಾದ ಸಮಸ್ಯೆಗಳಿದ್ದರೆ ತೀವ್ರವಾಗಬಹುದು. ಪಿಎಂಎಸ್‌ಗೆ ಕಾರಣಗಳು ಸಂಪೂರ್ಣವಾಗಿ ಇನ್ನೂ ಗೊತ್ತಾಗಿಲ್ಲ. ಆದರೆ ಹಾರ್ಮೋನ್ ಅಸಮತೋಲನ ಅಥವಾ ಪ್ರೊಜೆಸ್ಟಿರಾನ್ ಹಾರ್ಮೋನ್‌ಗೆ ದೇಹ ಹೆಚ್ಚು ಸ್ಪಂದಿಸಿದರೆ ಕಾಣಿಸಿಕೊಳ್ಳಬಹುದು.

(ಲೇಖಕಿ: ಸೀನಿಯರ್ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ, ಫೋರ್ಟಿಸ್ ಲಾ ಫೆಮ್ಮೆ ಆಸ್ಪತ್ರೆ, ಬೆಂಗಳೂರು)

ಪರಿಹಾರ ಇದೆಯೇ?

ಪಿಎಂಎಸ್ ಬಗ್ಗೆ ಅರಿವಿದ್ದರೆ ಲಕ್ಷಣಗಳ ಜೊತೆ ಹೊಂದಿಕೊಂಡು ಆರಾಮವಾಗಿರಬಹುದು. ಋತುಚಕ್ರ ಮತ್ತು ಪಿಎಂಎಸ್ ಲಕ್ಷಣಗಳ ಬಗ್ಗೆ ಡೈರಿ ಅಥವಾ ಆ್ಯಪ್‌ನಲ್ಲಿ ವಿವರ ದಾಖಲಿಸಿಕೊಂಡರೆ ಬೇರೆ ದಿನಗಳಲ್ಲಿ ಮಹತ್ವದ ಸಭೆ- ಸಮಾರಂಭಗಳನ್ನು ನಿಗದಿಪಡಿಸಿಕೊಳ್ಳಲು ನೆರವಾಗುತ್ತದೆ. ಸಂಗಾತಿ/ ಪತಿ, ಸ್ನೇಹಿತರು ಮತ್ತು ವೈದ್ಯರ ಜೊತೆ ಈ ಬಗ್ಗೆ ಮಾತನಾಡಿದರೆ ಅವರು ಕೂಡ ಅರ್ಥ ಮಾಡಿಕೊಳ್ಳಬಲ್ಲರು. ನಿಯಮಿತವಾದ ವ್ಯಾಯಾಮ, ಯೋಗ ಮೊದಲಾದವುಗಳಿಂದ ಇದನ್ನು ಕಡಿಮೆ ಮಾಡಿಕೊಳ್ಳಬಹುದು. ಹೆಚ್ಚು ಸಕ್ಕರೆ ಇರುವ ತಿನಿಸು, ಸಂಸ್ಕರಿಸಿದ ಕಾರ್ಬೋಹೈಡ್ರೇಟ್, ಹೆಚ್ಚು ಕೊಬ್ಬಿರುವ ತಿನಿಸು, ಕೆಫೈನ್, ಪಾನೀಯಗಳನ್ನು ಈ ಸಂದರ್ಭದಲ್ಲಿ ಸೇವಿಸದಿರುವುದು ಸೂಕ್ತ.

ವೈದ್ಯರ ಬಳಿ ಈ ಬಗ್ಗೆ ಮಾತನಾಡಿ. ಎಲ್ಲರಿಗೂ ಒಂದೇ ರೀತಿಯ ಚಿಕಿತ್ಸೆಯಿಲ್ಲ. ಅವರವರ ಸಮಸ್ಯೆಗಳನ್ನು ನೋಡಿಕೊಂಡು ಚಿಕಿತ್ಸೆ ನೀಡಬೇಕಾಗುತ್ತದೆ.

ಎಗ್ ಮಸಾಲ ಫ್ರೈ, ಡಾಬಾ ಶೈಲಿಯ ಎಗ್ ಬುರ್ಜಿ

ನಳಪಾಕ

ರಂಜಿನಿ

ಎಗ್ ಮಸಾಲೆ ಫ್ರೈ

ಬೇಕಾಗುವ ಸಾಮಗ್ರಿಗಳು: ಮೊಟ್ಟೆ - 4 (ಬೇಯಿಸಿದ್ದು), ಕರಿಬೇವು - 6 ಎಸಳು, ಉಪ್ಪು - ರುಚಿಗೆ, ಕಾಳುಮೆಣಸಿನ ಪುಡಿ - ಕಾಲು ಚಮಚ, ಖಾರದಪುಡಿ - ಅರ್ಧ ಚಮಚ, ಅರಿಸಿನ - ಚಿಟಿಕೆ, ಗರಂ ಮಸಾಲೆ - ಬೇಕಾದರೆ, ಎಣ್ಣೆ - ಕರಿಯಲು



ತಯಾರಿಸುವ ವಿಧಾನ: ಪ್ಯಾನ್ ಬಿಸಿಗಿಟ್ಟು ಬಿಸಿಯಾದ ಮೇಲೆ ಎಣ್ಣೆ ಹಾಕಿ. ಅದಕ್ಕೆ ಒಂದು ಚಮಚ ಎಣ್ಣೆ, ಅರಿಸಿನ, ಖಾರದಪುಡಿ, ಉಪ್ಪು ಸೇರಿಸಿ ಸಣ್ಣ ಉರಿಯಲ್ಲಿ ಚೆನ್ನಾಗಿ ಮಿಶ್ರಣ ಮಾಡುತ್ತಿರಬೇಕು. ಈಗ ಬೇಯಿಸಿ ಅರ್ಧಕ್ಕೆ ಕತ್ತರಿಸಿ ಇರಿಸಿಕೊಂಡಿದ್ದ ಮೊಟ್ಟೆಯನ್ನು ಖಾರದ ಮಿಶ್ರಣಕ್ಕೆ ಸೇರಿಸಿ. ಅದನ್ನು ಸಣ್ಣ ಉರಿಯಲ್ಲಿ 1 ನಿಮಿಷ ಹುರಿದುಕೊಳ್ಳಬೇಕು. ನಂತರ ತಿರುವಿ ಹಾಕಿ ಮೊಟ್ಟೆಯ ಮೇಲೆ ಗರಂ ಮಸಾಲ ಉದುರಿಸಬೇಕು. ಮತ್ತೆ ಮೊಟ್ಟೆಯನ್ನು ತಿರುವಿ ಹಾಕಿ ಮಧ್ಯಮ ಉರಿಯಲ್ಲಿ ಪುನಃ ಒಂದು ನಿಮಿಷ ಬೇಯಿಸಿ ತೆಗೆದಿರಿಸಿ. ಒಂದು ಚಿಕ್ಕ ಪಾತ್ರೆಯಲ್ಲಿ ಎಣ್ಣೆ ಹಾಕಿ ಅದಕ್ಕೆ ಸಾಸಿವೆ, ಕರಿಬೇವು ಹಾಕಿ ಮೊಟ್ಟೆಯ ಮೇಲೆ ಉದುರಿಸಿ.

ಡಾಬಾ ಶೈಲಿಯ ಎಗ್ ಬುರ್ಜಿ



ಬೇಕಾಗುವ ಸಾಮಗ್ರಿಗಳು: ಎಣ್ಣೆ - 3 ಚಮಚ, ಹಸಿಮೆಣಸು - 3, ಈರುಳ್ಳಿ - 4 ದೊಡ್ಡದು, ಟೊಮೆಟೊ - 1, ಉಪ್ಪು - ರುಚಿಗೆ, ಅರಿಸಿನ - ಚಿಟಿಕೆ, ಕೊತ್ತಂಬರಿ ಪುಡಿ - 1 ಚಮಚ, ಖಾರದಪುಡಿ - 2 ಚಮಚ, ಗರಂ ಮಸಾಲೆ - ಅವಶ್ಯಕತೆ ಇದ್ದರೆ, ಮೊಟ್ಟೆ - 8

ತಯಾರಿಸುವ ವಿಧಾನ: ದಪ್ಪ ತಳದ ಪಾತ್ರೆಯೊಂದಕ್ಕೆ ಎಣ್ಣೆ ಹಾಕಿ ಬಿಸಿಯಾದ ಮೇಲೆ ಹಸಿಮೆಣಸು ಹಾಕಿ ಕೈಯಾಡಿಸಿ. ಅದಕ್ಕೆ ಹೆಚ್ಚಿಕೊಂಡ ಈರುಳ್ಳಿ ಹಾಕಿ ಈರುಳ್ಳಿ ಬಣ್ಣ ಬದಲಾಗುವವರೆಗೂ ಹುರಿದುಕೊಳ್ಳಿ. ಅದಕ್ಕೆ ಹೆಚ್ಚಿದ ಟೊಮೆಟೊ ಹಾಗೂ ರುಚಿಗೆ ತಕ್ಕಷ್ಟು ಉಪ್ಪು, ಖಾರದ ಪುಡಿ, ಕೊತ್ತಂಬರಿ ಪುಡಿ ಹಾಗೂ ಅರಿಸಿನ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಬೇಕಾದರೆ ಗರಂ ಮಸಾಲ ಸೇರಿಸಿ ಮಿಶ್ರಣ ಮಾಡಿ ಸಣ್ಣ ಉರಿಯಲ್ಲಿ ಟೊಮೆಟೊ ಬೇಯುವವರೆಗೂ ಬೇಯಿಸಿಕೊಳ್ಳಿ. ಅಷ್ಟರಲ್ಲಿ ಮೊಟ್ಟೆಯನ್ನು ಚೆನ್ನಾಗಿ ಕಲೆಸಿಕೊಳ್ಳಿ. ಅದನ್ನು ಒಲೆಯ ಮೇಲಿರುವ ಮಿಶ್ರಣಕ್ಕೆ ಸೇರಿಸಿ ಕೊತ್ತಂಬರಿ ಸೊಪ್ಪು ಹಾಕಿ ಒಂದು ನಿಮಿಷ ಹಾಗೇ ಬಿಡಿ. ನಂತರ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿ. ಮೊಟ್ಟೆ ಸ್ವಲ್ಪ ಗಟ್ಟಿಯಾದ ಮೇಲೆ ಉದುರುದುರಾಗಿ ಎಗ್ ಬುರ್ಜಿ ತಯಾರಾಗುತ್ತದೆ.

ಮೊಟ್ಟೆ ದೋಸೆ



ಬೇಕಾಗುವ ಸಾಮಗ್ರಿಗಳು: ಮೊಟ್ಟೆ - 2, ಉಪ್ಪು - ರುಚಿಗೆ ತಕ್ಕಷ್ಟು, ಖಾರದಪುಡಿ - ಕಾಲು ಚಮಚ, ಕಾಳುಮೆಣಸಿನ ಪುಡಿ - ಕಾಲು ಚಮಚ, ಈರುಳ್ಳಿ - 1 ಸಣ್ಣಗೆ ಹೆಚ್ಚಿದ್ದು, ಬೆಣ್ಣೆ - ಸ್ವಲ್ಪ, ಕೊತ್ತಂಬರಿ ಸೊಪ್ಪು - ಸ್ವಲ್ಪ, ದೋಸೆ ಹಿಟ್ಟು - 2 ಕಪ್

ತಯಾರಿಸುವ ವಿಧಾನ: ಕಪ್‌ನಲ್ಲಿ ಮೊಟ್ಟೆ ಒಡೆದು ಹಾಕಿ, ಉಪ್ಪು ಹಾಗೂ ಕಾಳುಮೆಣಸಿನ ಪುಡಿ ಸೇರಿಸಿ ಚೆನ್ನಾಗಿ ನೊರೆ ಬರುವವರೆಗೂ ಕಲೆಸಿ. ನಂತರ ಒಂದು ತವಾವನ್ನು ಬಿಸಿ ಮಾಡಿ ಮಧ್ಯಮ ಉರಿಯಲ್ಲಿ ಇರಿಸಿಕೊಂಡು ಅಗಲವಾದ ದೋಸೆ ಹಾಕಿ. ದೋಸೆ ದಪ್ಪವಾಗಿರಲಿ, ದೋಸೆ ಹಾಕಿದ ಕೂಡಲೇ ಅದರ ಮೇಲೆ ತುಪ್ಪ ಚಿಮುಕಿಸಿ. ದೋಸೆ ಮೇಲೆ ಮೊಟ್ಟೆ ಹಾಕಿ ಅದರ ಮೇಲೆ ಖಾರದ ಪುಡಿ ಚಿಮುಕಿಸಿ, ಮುಚ್ಚಿ ಅರ್ಧ ನಿಮಿಷ ಬೇಯಿಸಿ. ನಂತರ ಮೇಲೆ ಬೆಣ್ಣೆಯ ತುಂಡುಗಳನ್ನು ಇರಿಸಿ. ಕರಗಿದ ಮೇಲೆ ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪು ಹಾಗೂ ಈರುಳ್ಳಿ ಹಾಕಿ. ಒಂದು ನಿಮಿಷ ಹಾಗೇ ಇರಿಸಿ, ನಂತರ ತೆಗೆದು ಸಾಂಬಾರ್ ಅಥವಾ ಚಟ್ನಿ ಜೊತೆ ತಿನ್ನಲು ಕೊಡಿ.

ಪ್ರಜಾವಾಣಿ ನೋಡಿಯೊ

ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ರೂಪಾಂತರ ವೈರಾಣು ಪ್ರಕರಣ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸ ಮಾದರಿಯ ಕೊರೊನಾ ವೈರಾಣು (ಡಬಲ್ ಮ್ಯುಟೆಂಟ್ ಬಿ.1.617) ಹೊಂದಿರುವವರ ಸಂಖ್ಯೆ ಕೂಡ ಏರಿಕೆ ಕಂಡಿದ್ದು, ಶುಕ್ರವಾರ 96 ಮಂದಿಯಲ್ಲಿ ಈ ಮಾದರಿಯ ವೈರಾಣು ದೃಢಪಟ್ಟಿದೆ.

ನೂತನ ಮಾದರಿಯ ವೈರಾಣು ಹೊಂದಿರುವವರ ಸಂಖ್ಯೆ ರಾಜ್ಯದಲ್ಲಿ 244ಕ್ಕೆ ತಲುಪಿದೆ. ಬ್ರಿಟನ್ ಮಾದರಿಯ ವೈರಾಣು ಮತ್ತೆ 23 ಮಂದಿಯಲ್ಲಿ ಕಾಣಿಸಿಕೊಂಡಿದೆ. ಈವರೆಗೆ ಒಟ್ಟು 109 ಕೋವಿಡ್ ಪೀಡಿತರಲ್ಲಿ ಬ್ರಿಟನ್ ಮಾದರಿಯ ವೈರಾಣು ದೃಢಪಟ್ಟಿದೆ.

ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 32,218 ಮಂದಿ ಕೋವಿಡ್ ಪೀಡಿತರಾಗಿರುವುದು ಖಚಿತಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 23.67 ಲಕ್ಷ ದಾಟಿದೆ.

500ರ ಗಡಿ ದಾಟಿದ್ದ ಕೋವಿಡ್ ಮರಣ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದೆ. ಬೆಂಗಳೂರಿನಲ್ಲಿ 129 ಮಂದಿ ಸೇರಿದಂತೆ ರಾಜ್ಯದಲ್ಲಿ 353 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಬೆಳಗಾವಿ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬೆಂಗಳೂರು ಗ್ರಾಮಾಂತರದಲ್ಲಿ 30 ಮಂದಿ, ಬಳ್ಳಾರಿಯಲ್ಲಿ 23 ಮಂದಿ, ಉತ್ತರ ಕನ್ನಡದಲ್ಲಿ 22 ಮಂದಿ, ಶಿವಮೊಗ್ಗದಲ್ಲಿ 20 ಮಂದಿ, ತುಮಕೂರಿನಲ್ಲಿ 16 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 24,207ಕ್ಕೆ ತಲುಪಿದೆ.


ಒಂದು ದಿನದ ಅವಧಿಯಲ್ಲಿ 1.33 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 24.22ರಷ್ಟಿದೆ. ಕೋವಿಡ್‌ನಿಂದ ಚೇತರಿಸಿಕೊಳ್ಳುವವರ ಸಂಖ್ಯೆ ಏರಿಕೆ ಕಂಡಿದ್ದು, ಮತ್ತೆ 52,581 ಮಂದಿ ಗುಣಮುಖರಾದ್ದಾರೆ. ಇದರಿಂದಾಗಿ 48 ಗಂಟೆಗಳಲ್ಲಿ 1.04ಲಕ್ಷಕ್ಕೂ ಅಧಿಕ ಮಂದಿ ಕಾಯಿಲೆ ವಾಸಿಯಾಗಿದೆ. ಕೊರೊನಾ ಸೋಂಕಿತರಲ್ಲಿ ಒಟ್ಟು 18.29 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 5.14 ಲಕ್ಷಕ್ಕೆ ಇಳಿಕೆಯಾಗಿದೆ.

ಬೆಂಗಳೂರಿನಲ್ಲಿ 9,591 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಮೈಸೂರು (2,355), ಹಾಸನ (2,071), ತುಮಕೂರು (1,773), ಬಳ್ಳಾರಿ (1,650), ಬೆಳಗಾವಿ (1,138) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ಹೊಸದಾಗಿ ವರದಿಯಾಗಿವೆ.

ಕಪ್ಪು ಶಿಲೀಂಧ್ರವೂ ಸಾಂಕ್ರಾಮಿಕ ರೋಗ: ಘೋಷಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಪ್ಪು ಶಿಲೀಂಧ್ರ (ಮ್ಯೂಕಮೈಕೋಸಿಸ್) ರೋಗವನ್ನು ರಾಜ್ಯದಲ್ಲೂ ಸಾಂಕ್ರಾಮಿಕ ಎಂದು ಘೋಷಿಸಬೇಕು. ಚಿಕಿತ್ಸೆಗಾಗಿ ತಜ್ಞ ವೈದ್ಯರ ಉನ್ನತಮಟ್ಟದ ತಂಡವನ್ನು ರಚಿಸಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.



ಎಚ್.ಡಿ. ಕುಮಾರಸ್ವಾಮಿ

ಈ ಕುರಿತು ಶುಕ್ರವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಕಪ್ಪು ಶಿಲೀಂಧ್ರ ರೋಗವನ್ನು ಸಾಂಕ್ರಾಮಿಕ ಎಂದು ಘೋಷಿಸುವಂತೆ ಕೇಂದ್ರ ಸರ್ಕಾರವು ಸೂಚಿಸಿದೆ. ತೆಲಂಗಾಣ, ತಮಿಳುನಾಡು, ಒಡಿಶಾ, ರಾಜಸ್ಥಾನ, ಗುಜರಾತ್ ಮತ್ತು ಚಂಡೀಗಢದಲ್ಲಿ ಸಾಂಕ್ರಾಮಿಕ ಎಂದು ಈಗಾಗಲೇ ಘೋಷಿಸಲಾಗಿದೆ. ರಾಜ್ಯದಲ್ಲೂ ಘೋಷಣೆ ಮಾಡಬೇಕು' ಎಂದು ಒತ್ತಾಯಿಸಿದ್ದಾರೆ.

ಈ ರೋಗದಿಂದ ಸಾವಿನ ಸಾಧ್ಯತೆಗಳು ಹೆಚ್ಚಾಗಿವೆ. ಸಾಂಕ್ರಾಮಿಕ ರೋಗಗಳ ನಿರ್ವಹಣೆ ವಿಚಾರದಲ್ಲಿ ರಾಜ್ಯ ಸರ್ಕಾರದ ಅಲಕ್ಷ್ಯ ಸರಿಯಲ್ಲ. ಕಪ್ಪು ಶಿಲೀಂಧ್ರ ರೋಗದ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ಪದೇ ಪದೇ ಎಡವುತ್ತಿರುವುದು ಕಾಣಿಸುತ್ತಿದೆ. ಅಗತ್ಯ ಔಷಧಿ ಪ್ರಮಾಣದಷ್ಟು ದಾಸ್ತಾನು ಮಾಡದೇ ಇರುವುದು ಮತ್ತು ಅಗತ್ಯ ಪ್ರಮಾಣದ ಔಷಧಿಯನ್ನು ಬೇಡಿಕೆ ಸಲ್ಲಿಸಿ ಪಡೆಯದೇ ಇರುವುದು ಇದಕ್ಕೆ ಸಾಕ್ಷಿ ಎಂದು ಕುಮಾರಸ್ವಾಮಿ ಟೀಕಿಸಿದ್ದಾರೆ.

ಕೋವಿಡ್‌ನಿಂದ ಗುಣ ಹೊಂದಿದವರಿಗೆ ಕಪ್ಪು ಶಿಲೀಂಧ್ರಕ್ಕೆ ತುತ್ತಾಗುತ್ತಾರೆ ಎಂದು ತಜ್ಞರು ಹೇಳಿದ್ದಾರೆ. ಹಾಗಿದ್ದಲ್ಲಿ, ಕರ್ನಾಟಕದಲ್ಲಿ ಈ ರೋಗದಿಂದ ಅಪಾಯ ಹೆಚ್ಚಾಗುವ ಸಾಧ್ಯತೆ ಇದೆ.

ತಕ್ಷಣವೇ ಪರಿಸ್ಥಿತಿ ಎದುರಿಸಲು ಸರ್ಕಾರ ಮುಂದಾಗಬೇಕು. ಔಷಧಿ ದಾಸ್ತಾನು ಮತ್ತು ತಜ್ಞ ವೈದ್ಯರನ್ನು ಸನ್ನದ್ಧ ಸ್ಥಿತಿಯಲ್ಲಿ ಇಡಬೇಕು ಎಂದು ಆಗ್ರಹಿಸಿದ್ದಾರೆ.

ಮಹಾರಾಷ್ಟ್ರ: ಎನ್‌ಕೌಂಟರ್, 13 ನಕ್ಸಲರು ಹತ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ವಿದರ್ಭ ಪ್ರದೇಶದ ಗಡ್‌ಚಿರೋಲಿ ಜಿಲ್ಲೆಯಲ್ಲಿ ಶುಕ್ರವಾರ ಪೊಲೀಸ್ ಪಡೆಯ ಸಿ-60ರ ಕಮಾಂಡೊಗಳು ಮತ್ತು ನಕ್ಸಲರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಏಳು ಮಹಿಳೆಯರೂ ಸೇರಿದಂತೆ 13 ನಕ್ಸಲರು ಹತರಾಗಿದ್ದಾರೆ.

ಎಟಪಲ್ಲಿಯ ಪೈಡಿ ಅರಣ್ಯ ಪ್ರದೇಶದಲ್ಲಿ ಸುಮಾರು 60ರಿಂದ 70 ನಕ್ಸಲರು ಸಭೆ ಸೇರಿ, ದಾಳಿಯ ಸಂಚು ರೂಪಿಸುತ್ತಿರುವ ಕುರಿತು ಬಂದ ಖಚಿತ ಮಾಹಿತಿ ಆಧರಿಸಿ, ಬೆಳಿಗ್ಗೆ 6ರಿಂದ 7.30ರವರೆಗೆ ಈ ಕಾರ್ಯಾಚರಣೆ ನಡೆಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಏಳು ಎಕೆ -47, ಎಸ್‌ಎಲ್‌ಆರ್‌ಗಳು, ಕಾರ್ಬೈನ್‌ಗಳು, 303 ರೈಫಲ್‌ಗಳು, 12 ಬೋರ್ ರೈಫಲ್‌ಗಳು ಮತ್ತು ಬೃಹತ್ ಪ್ರಮಾಣದ ಮದ್ದುಗುಂಡುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಡಿಐಜಿ ಸಂದೀಪ್ ಪಾಟೀಲ್ ಮತ್ತು ಗಡ್‌ಚಿರೋಲಿಯ ಪೊಲೀಸ್ ವರಿಷ್ಠಾಧಿಕಾರಿ ಅಂಕಿತ್ ಗೋಯಲ್ ಅವರು ಈ ಕಾರ್ಯಾಚರಣೆಯನ್ನು ನಿರ್ವಹಿಸಿದರು.

ಈ ಕಾರ್ಯಾಚರಣೆ ಯಶಸ್ವಿಗಾಗಿ ಮಹಾರಾಷ್ಟ್ರ ಗೃಹ ಸಚಿವ ದಿಲೀಪ್ ವಾಲ್ಸೆ ಪಾಟೀಲ್ ಅವರು ಗಡ್‌ಚಿರೋಲಿ ಪೊಲೀಸರನ್ನು ಅಭಿನಂದಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ನಕ್ಸಲರ ವಿರುದ್ಧದ ಕಾರ್ಯಾಚರಣೆಯಲ್ಲಿ ಪೊಲೀಸರಿಗೆ ದೊರೆತ ದೊಡ್ಡ ಯಶಸ್ಸು ಇದು ಎನ್ನಲಾಗಿದೆ. 2020ರ ಅಕ್ಟೋಬರ್ 11ರಂದು ಮಹಾರಾಷ್ಟ್ರ- ಛತ್ತೀಸಗಡ ಗಡಿಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಐವರು ನಕ್ಸಲರು ಹತರಾಗಿದ್ದರು.

2018ರ ಏಪ್ರಿಲ್ 22-23ರಂದು ಗಡ್‌ಚಿರೋಲಿಯಲ್ಲಿ ನಡೆದ ಎರಡು ಕಾರ್ಯಾಚರಣೆಯಲ್ಲಿ 40 ನಕ್ಸಲರು ಹತರಾಗಿದ್ದರು.

12 ಪತ್ರಗಳಿಗೆ ಉತ್ತರಿಸದ ಯಡಿಯೂರಪ್ಪ: ಟೀಕೆ

'ಸರ್ಕಾರದ ವಿರುದ್ಧ ಹಕ್ಕುಚ್ಯುತಿ ಮಂಡನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ರಾಜ್ಯದಲ್ಲಿ ಉಂಟಾಗಿರುವ ಪರಿಸ್ಥಿತಿ ಹಾಗೂ ಸೋಂಕಿತರ ಚಿಕಿತ್ಸೆಗೆ ಕೈಗೊಂಡಿರುವ ಕ್ರಮಗಳ ಕುರಿತು ಜಿಲ್ಲಾಧಿಕಾರಿಗಳಿಂದ ಮಾಹಿತಿ ಸಂಗ್ರಹಿಸದಂತೆ ತಡೆಯೊಡ್ಡಿರುವ ರಾಜ್ಯ ಸರ್ಕಾರದ ವಿರುದ್ಧ ಹಕ್ಕುಚ್ಯುತಿ ನಿರ್ಣಯ ಮಂಡಿಸಲಾಗುವುದು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ನಡೆದ ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಪುಣ್ಯಸ್ಮರಣೆ ಕಾರ್ಯಕ್ರಮದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ಕೋವಿಡ್ ರೋಗಿಗಳು ಚಿಕಿತ್ಸೆ ಸಿಗದೆ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಈ ಸಂದರ್ಭದಲ್ಲಿ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾಹಿತಿ ಪಡೆಯಲು ಬಯಸಿದ್ದೆ. ಆದರೆ, ಮಾಹಿತಿ ಸಂಗ್ರಹಕ್ಕೆ ಸರ್ಕಾರ ಅನುಮತಿ ನಿರಾಕರಿಸಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯೇ' ಎಂದು ಪ್ರಶ್ನಿಸಿದರು.



ಸಿದ್ದರಾಮಯ್ಯ

'ವಿರೋಧ ಪಕ್ಷದ ನಾಯಕನ ಸ್ಥಾನವು ಸಾಂವಿಧಾನಿಕ ಹುದ್ದೆ. ಮಾಹಿತಿ ಸಂಗ್ರಹಿಸಲು ಅನುಮತಿ ನಿರಾಕರಿಸಿರುವುದು ಹಕ್ಕುಚ್ಯುತಿ ಆಗುತ್ತದೆ. ಆದ್ದರಿಂದ ವಿಧಾನಮಂಡಲದ ಮುಂಬರುವ ಅಧಿವೇಶನದಲ್ಲಿ ಸರ್ಕಾರದ ವಿರುದ್ಧ ಹಕ್ಕುಚ್ಯುತಿ ನಿರ್ಣಯ ಮಂಡಿಸಲು ನಿರ್ಧರಿಸಿದ್ದೇನೆ' ಎಂದರು.

2009ರಲ್ಲೂ ಬಿಜೆಪಿ ಸರ್ಕಾರ ಇದೇ ರೀತಿ ನಡೆದುಕೊಂಡಿತ್ತು. ಸರ್ಕಾರದ ಹುಳುಕುಗಳು ಹೊರಬರುತ್ತವೆ ಎಂಬ ಕಾರಣಕ್ಕೆ ಮಾಹಿತಿ ಸಂಗ್ರಹಕ್ಕೆ ಅಡ್ಡಿಪಡಿಸಲಾಗಿದೆ. ಕೋವಿಡ್ ನಿಯಂತ್ರಣ, ಜನರಿಗೆ ಚಿಕಿತ್ಸೆ ನೀಡುವುದಕ್ಕೆ ಸಂಬಂಧಿಸಿದಂತೆ ತಾವು ಬರೆದಿರುವ 12 ಪತ್ರಗಳಿಗೂ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಈವರೆಗೆ ಉತ್ತರ ನೀಡಿಲ್ಲ. ಪ್ರಧಾನಿ ನರೇಂದ್ರ ಮೋದಿ ಕೂಡ ಇದೇ ರೀತಿ ವರ್ತಿಸುತ್ತಾರೆ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಲೋಪಗಳನ್ನು ಪ್ರಶ್ನಿಸುವವರು ಮತ್ತು ವೈಫಲ್ಯಗಳ ಕುರಿತು ಸತ್ಯ ಹೇಳುವವರ ವಿರುದ್ಧ ಪ್ರಕರಣ ದಾಖಲಿಸಿ, ಬಂಧಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಕಾಂಗ್ರೆಸ್ ಕಾರ್ಯಕರ್ತರು ಇದಕ್ಕೆ ಹೆದರಬಾರದು ಎಂದರು.

ಕೇಂದ್ರದಿಂದ ತಾರತಮ್ಯ: ಚಂಡಮಾರುತದಿಂದ ಹಾನಿಗೊಳಗಾದ ರಾಜ್ಯಗಳಿಗೆ ಪರಿಹಾರ ನೀಡುವುದರಲ್ಲೂ ಕೇಂದ್ರ ಸರ್ಕಾರ ತಾರತಮ್ಯ ಮಾಡುತ್ತಿದೆ. ಪ್ರಧಾನಿಯವರು ಗುಜರಾತ್ ರಾಜ್ಯಕ್ಕೆ ₹ 1,000 ಕೋಟಿ ಪರಿಹಾರ ಘೋಷಿಸಿದ್ದಾರೆ. ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲೂ ಚಂಡಮಾರುತದಿಂದ ಹಾನಿಯಾಗಿದೆ. ಆದರೆ, ಪರಿಹಾರ ನೀಡಿಲ್ಲ ಎಂದು ದೂರಿದರು.

'ಕೋವಿಡ್ ಲಸಿಕೆಯನ್ನು ಕಾಂಗ್ರೆಸ್ ವಿರೋಧಿಸಿಲ್ಲ. ದೇಶದ ಎಲ್ಲರಿಗೂ ಲಸಿಕೆ ದೊರೆಯಬೇಕು ಎಂಬುದು ನಮ್ಮ ಆಗ್ರಹ. ಲಸಿಕೆಯೇ ಇಲ್ಲದೆ ಆಂದೋಲನಕ್ಕೆ ಚಾಲನೆ ನೀಡಿದವರು ಯಾರು' ಎಂದು ಪ್ರಶ್ನಿಸಿದರು.

'ರಾಜೀವ್ ಗಾಂಧಿ ಶ್ರೇಷ್ಠ ರಾಜಕಾರಣಿ'

'ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರು ಭಾರತ ಕಂಡ ಶ್ರೇಷ್ಠ ಜನಪರ ರಾಜಕಾರಣಿ. ಅವರ ಪ್ರಯತ್ನದ ಫಲವಾಗಿಯೇ ದೇಶವು ದೂರಸಂಪರ್ಕ, ವಿಜ್ಞಾನ, ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಾಧನೆ ಮಾಡಿದೆ' ಎಂದು ಸಿದ್ದರಾಮಯ್ಯ ಸ್ಮರಿಸಿದರು.

ಗೋವಾ: ಮೇ 31 ರವರೆಗೆ ಲಾಕ್‌ಡೌನ್ ವಿಸ್ತರಣೆ

ಪಣಜಿ: ಗೋವಾದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣಕ್ಕೆ ಮೇ 31 ರವರೆಗೆ ಲಾಕ್‌ಡೌನ್ ವಿಸ್ತರಿಸಲಾಗಿದೆ ಎಂದು ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹೇಳಿದ್ದಾರೆ.

ಶುಕ್ರವಾರ ಸಚಿವ ಸಂಪುಟ ಸಭೆ ಬಳಿಕ ಮಾತನಾಡಿದ ಅವರು, 'ರಾಜ್ಯದಲ್ಲಿ ಕಠಿಣ ನಿಯಮಗಳು ಮುಂದುವರಿಯಲಿವೆ' ಎಂದು ತಿಳಿಸಿದ್ದಾರೆ.

ಗೋವಾದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಿದ ಹಿನ್ನೆಲೆಯಲ್ಲಿ ಮೇ 3 ರಿಂದ ಮೇ 23 ರವರೆಗೆ ಲಾಕ್‌ಡೌನ್ ಘೋಷಿಸಲಾಗಿತ್ತು. ಅಗತ್ಯ ವಸ್ತುಗಳು ಖರೀದಿ ಹಾಗೂ ಮದ್ಯ ಮಾರಾಟಕ್ಕೆ ಬೆಳಿಗ್ಗೆ 7ರಿಂದ ಮಧ್ಯಾಹ್ನ 1 ರವರೆಗೆ ಅನುಮತಿ ನೀಡಲಾಗಿದೆ.



ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ವಿಕ್ಟೋರಿಯಾ ಆಸ್ಪತ್ರೆ ಮುಂದೆ ಶುಕ್ರವಾರ ಸೇರಿದ ಜನ. ಪ್ರಜಾವಾಣಿ ಚಿತ್ರ : ಅನೂಪ್ ರಾಘ.ಟಿ.

'ಕಲಾವಿದರಿಗೆ ₹ 15 ಸಾವಿರ ಗೌರವಧನ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದಾಗಿ ಸಾಂಸ್ಕೃತಿಕ ಜಗತ್ತು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡಿದೆ. ಈ ಸಂಕಟದ ಸಮಯ ಕಳೆದು, ರಂಗಭೂಮಿ ಮತ್ತೆ ಚೈತನ್ಯ ಪಡೆಯುವವರೆಗೆ ಆರ್ಥಿಕವಾಗಿ ದುರ್ಬಲರಾಗಿರುವ ಕಲಾವಿದರಿಗೆ ಪ್ರತಿ ತಿಂಗಳು ಕನಿಷ್ಠ ₹ 15 ಸಾವಿರ ಗೌರವಧನ ನೀಡಬೇಕು' ಎಂದು ಕರ್ನಾಟಕ ರಾಜ್ಯ ಸಾಂಸ್ಕೃತಿಕ ಸಂಘ ಸಂಸ್ಥೆಗಳ ಒಕ್ಕೂಟವು ಸರ್ಕಾರಕ್ಕೆ ಆಗ್ರಹಿಸಿದೆ.

ಈ ಸಂಬಂಧ ಒಕ್ಕೂಟವು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದೆ.

'ಕೋವಿಡ್ ಕಾಣಿಸಿಕೊಂಡ ಬಳಿಕ ಸರ್ಕಾರ ಹೇರಿದ ನಿರ್ಬಂಧಗಳು ಕಲಾವಿದರು ದುಡಿದು ತಿನ್ನದಂತೆ ಮಾಡಿವೆ. ಕಳೆದ ಏ.20ರಿಂದಲೇ ಅಘೋಷಿತವಾಗಿ ಜಾರಿಯಾಗಿದ್ದ ಲಾಕ್‌ಡೌನ್, ಮೇ 10ರಿಂದ ಅಧಿಕೃತಗೊಂಡಿದೆ. ರಾಷ್ಟ್ರೀಯ ವಿಪತ್ತು ಕಾಲ, ತುರ್ತು ಪರಿಸ್ಥಿತಿಗಳಂತಹ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕುವ ಜನರ ಜೀವನೋಪಾಯಕ್ಕೆ ಕೈಗೊಳ್ಳಲೇಬೇಕಾದ ಪರಿಹಾರೋಪಾಯ ಮಾರ್ಗಗಳ ಬಗ್ಗೆ ಸರ್ಕಾರ ದಿವ್ಯ ಮೌನವಹಿಸಿದೆ. ಇದರಿಂದಾಗಿ ದಿನದ ದುಡಿಮೆಯಲ್ಲೇ ಬದುಕುತ್ತಿದ್ದ ಶ್ರಮಿಕ ವರ್ಗ, ಸಣ್ಣ ಸಣ್ಣ ರೈತರು, ವ್ಯಾಪಾರಿಗಳು, ಕೂಲಿ ಕಾರ್ಮಿಕರು, ಕಲಾವಿದರು ಸೇರಿದಂತೆ ವಿವಿಧ ವರ್ಗದವರ ಬದುಕು ಮೂರಾಬಟ್ಟೆಯಾಗಿದೆ' ಎಂದು ಒಕ್ಕೂಟ ಬೇಸರ ವ್ಯಕ್ತಪಡಿಸಿದೆ.

'ಕಲೆಯನ್ನೇ ನಂಬಿಕೊಂಡು ಜೀವನ ನಡೆಸುತ್ತಿದ್ದವರ ಪಾಡು ಹೇಳಲಾಗದ ಸ್ಥಿತಿಯಲ್ಲಿದೆ. ಇದೇ ಪರಿಸ್ಥಿತಿ ಮುಂದುವರೆದರೆ ಆತ್ಮಹತ್ಯೆಯೊಂದೆ ದಾರಿ ಎನ್ನುವಂತಾಗಲಿದೆ. ದೈನಂದಿನ ದುಡಿಮೆಯನ್ನು ಅವಲಂಬಿಸಿದವರಿಗೆ ಇಂಥ ಸಂದರ್ಭದಲ್ಲಿ ನೆರವಿಗೆ ನಿಲ್ಲಬೇಕಾದದ್ದು ಸರ್ಕಾರದ ಹೊಣೆಗಾರಿಕೆ. ಅಸಂಘಟಿತರಾದ ಬಡ ಕಲಾವಿದರು ಯಾರ ಲೆಕ್ಕಕ್ಕೂ ಸಿಗದೆ ಅನಾಥರಾಗಿದ್ದಾರೆ. ಕಳೆದ ವರ್ಷ ಘೋಷಿಸಿದ್ದ ₹ 2 ಸಾವಿರ ಕೂಡ ಎಲ್ಲ ಕಲಾವಿದರಿಗೆ ತಲುಪಿಲ್ಲ. ಕೋವಿಡ್ ನಿಯಂತ್ರಣಕ್ಕೆ ಬಂದರೂ ಕಲಾ ಚಟುವಟಿಕೆಗಳು ಮೊದಲಿನಂತೆ ನಡೆಯಲು ಇನ್ನೂ ಎರಡು ವರ್ಷಗಳು ಬೇಕಾಗುತ್ತವೆ. ಹಾಗಾಗಿ, ಬಡ ಕಲಾವಿದರಿಗೆ ಜೀವನ ನಿರ್ವಹಣೆ ಸಂಬಂಧ ಗೌರವಧನ ಒದಗಿಸಬೇಕು' ಎಂದು ಪ್ರಕಟಣೆಯಲ್ಲಿ ಆಗ್ರಹಿಸಲಾಗಿದೆ.

ಶೇ 40ರಷ್ಟು ಆನ್‌ಲೈನ್ ಬೋಧನೆಗೆ ಅವಕಾಶ: ಯುಜಿಸಿ

ನವದೆಹಲಿ (ಪಿಟಿಐ): 'ಸಂಯೋಜಿತ ಬೋಧನೆ-ಕಲಿಕೆ' ಪರಿಕಲ್ಪನೆಯಲ್ಲಿ ಇನ್ನು ಮುಂದೆ ಉನ್ನತ ಶಿಕ್ಷಣ ಸಂಸ್ಥೆಗಳು ಯಾವುದೇ ಕೋರ್ಸಿನ ಶೇ 40ರಷ್ಟು ಭಾಗವನ್ನು ಆನ್‌ಲೈನ್ ಮೂಲಕ ಬೋಧಿಸುವ ಅವಕಾಶ ಪಡೆಯುವ ಸಾಧ್ಯತೆ ಇದೆ.

ಈ ಕುರಿತು ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ರಚಿಸಿರುವ ತಜ್ಞರ ಸಮಿತಿಯು ಕರಡು ಪರಿಕಲ್ಪನಾ ಟಿಪ್ಪಣಿಯನ್ನು ಸಿದ್ಧಪಡಿಸುತ್ತಿದ್ದು, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಅನುಗುಣವಾಗಿ ಈ ಟಿಪ್ಪಣಿಯನ್ನು ರೂಪುಗೊಳಿಸಲಾಗಿದೆ. ಈ ಸಂಬಂಧ ವಿವಿಧ ತಜ್ಞರು ಜೂನ್ 6ರೊಳಗೆ ಪ್ರತಿಕ್ರಿಯೆ ನೀಡುವಂತೆ ಯುಜಿಸಿ ಕೋರಿದೆ.

'ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮ ಕೋರ್ಸ್‌ನ ಶೇ 40ರಷ್ಟು ಭಾಗವನ್ನು ಆನ್‌ಲೈನ್ ಮೂಲಕ ಹಾಗೂ ಉಳಿದ ಶೇ 60ರಷ್ಟು ಭಾಗವನ್ನು ಆಫ್‌ಲೈನ್ ಮೂಲಕ ಕಲಿಸಲು ಅವಕಾಶ ನೀಡಬೇಕು ಎಂದು ಯುಜಿಸಿ ನಿರ್ಧರಿಸಿದೆ. ಈ ಎರಡೂ ವಿಧಾನಗಳ ಅಡಿಯಲ್ಲಿ ಕಲಿತ ವಿಷಯಗಳ ಪರೀಕ್ಷೆಗಳನ್ನು ಆನ್‌ಲೈನ್‌ನಲ್ಲಿ ನಡೆಸಬಹುದು' ಎಂದು ಯುಜಿಸಿ ಕಾರ್ಯದರ್ಶಿ ರಜನೀಶ್ ಜೈನ್ ಹೇಳಿದ್ದಾರೆ.

ಅಳಿಯ ರಿಯಾಸ್‌ಗೆ ಲೋಕೋಪಯೋಗಿ ಖಾತೆ

ಕೇರಳ: ಗೃಹ, ಐಟಿ ತಮ್ಮ ಬಳಿ ಉಳಿಸಿಕೊಂಡ ವಿಜಯನ್

ತಿರುವನಂತಪುರ: ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಗೃಹ ಹಾಗೂ ಐಟಿ ಖಾತೆಗಳನ್ನು ತಮ್ಮ ಬಳಿ ಇಟ್ಟುಕೊಂಡಿದ್ದಾರೆ.

ಮೊದಲ ಬಾರಿಗೆ ಸಚಿವರಾಗಿರುವ ಡಿವೈಎಫ್‌ಐ ಅಧ್ಯಕ್ಷ ಪಿ.ಎ. ಮೊಹಮ್ಮದ್ ರಿಯಾಸ್‌ಗೆ ಲೋಕೋಪಯೋಗಿ ಖಾತೆ ನೀಡಲಾಗಿದೆ. ಇವರು ಪಿಣರಾಯಿ ವಿಜಯನ್ ಅವರ ಅಳಿಯ.

ವೀಣಾ ಜಾರ್ಜ್ ಅವರಿಗೆ ಆರೋಗ್ಯ ಖಾತೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಯ ಜವಾಬ್ದಾರಿಯನ್ನೂ ನೀಡಲಾಗಿದೆ.

ನೂತನ ಮುಖ್ಯಮಂತ್ರಿಯಾಗಿ ಗುರುವಾರ ಪ್ರಮಾಣ ಸ್ವೀಕರಿಸಿದ ವಿಜಯನ್ ಅವರು ಸಚಿವರಿಗೆ ಖಾತೆ ಹಂಚಿಕೆ ಮಾಡಿದ ಪಟ್ಟಿಯನ್ನು ಅದೇ ದಿನ ರಾತ್ರಿ ರಾಜ್ಯಪಾಲ ಆರೀಫ್ ಮೊಹಮ್ಮದ್ ಖಾನ್ ಅವರಿಗೆ ಸಲ್ಲಿಸಿದರು. ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಲಾಗಿದೆ.

ತಮ್ಮ ಆಪ್ತ ಹಾಗೂ ಮೊದಲ ಬಾರಿಗೆ ಶಾಸಕರಾಗಿರುವ ಕೆ.ಎನ್.ಬಾಲಗೋಪಾಲ್ ಅವರಿಗೆ ಹಣಕಾಸು ಖಾತೆ ನೀಡಿದ್ದಾರೆ.

ಪಿ.ರಾಜೀವ್ ಅವರಿಗೆ ಕಾನೂನು ಮತ್ತು ಕೈಗಾರಿಕೆ, ವಿ.ಶಿವನ್‌ಕುಟ್ಟಿ ಅವರಿಗೆ ಸಾರ್ವತ್ರಿಕ ಶಿಕ್ಷಣ ಹಾಗೂ ಕಾರ್ಮಿಕ ಖಾತೆ ನೀಡಲಾಗಿದೆ. ರಾಜೀವ್ ಅವರು ರಾಜ್ಯಸಭಾ ಸದಸ್ಯರಾಗಿದ್ದ ವೇಳೆ 'ಸಂಸದ ರತ್ನ' ಪ್ರಶಸ್ತಿಗೆ ಭಾಜನರಾಗಿದ್ದರು.



ಪಿಣರಾಯಿ ವಿಜಯನ್

ಎಂ.ವಿ.ಗೋವಿಂದನ್ ಅವರಿಗೆ ಸ್ಥಳೀಯ ಸಂಸ್ಥೆಗಳು ಹಾಗೂ ಅಬಕಾರಿ, ಆರ್. ಬಿಂದು ಅವರಿಗೆ ಉನ್ನತ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ, ಜೆ.ಚಿಂಚುರಾಣಿ ಅವರಿಗೆ ಪಶು ಸಂಗೋಪನೆ ಹಾಗೂ ಡೇರಿ ಅಭಿವೃದ್ಧಿ ಖಾತೆಗಳನ್ನು ನೀಡಲಾಗಿದೆ. ಐದು ಬಾರಿ ಶಾಸಕ ಹಾಗೂ ಮಾಜಿ ಸ್ಪೀಕರ್ ಕೆ.ರಾಧಾಕೃಷ್ಣನ್ ಅವರಿಗೆ ದೇವಸ್ವಂ ಖಾತೆ ನೀಡಲಾಗಿದೆ.

21 ಸಚಿವರನ್ನು ಒಳಗೊಂಡ ಸಂಪುಟದಲ್ಲಿ ಸಿಪಿಎಂನ 11 ಸಚಿವರು ಹೊಸಬರೇ ಆಗಿರುವುದು ವಿಶೇಷ. ಸಿಪಿಐನ ನಾಲ್ವರು, ಕೇರಳ ಕಾಂಗ್ರೆಸ್ (ಎಂ), ಜೆಡಿಎಸ್ ಹಾಗೂ ಎನ್‌ಸಿಪಿಯ ತಲಾ ಒಬ್ಬರು ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ಒಬ್ಬರೇ ಶಾಸಕರನ್ನು ಹೊಂದಿರುವ ಮೈತ್ರಿಕೂಟದ ಇತರ ನಾಲ್ಕು ಪಕ್ಷಗಳಿಗೆ ಅವಧಿ ಆಧಾರದ ಮೇಲೆ ಸಚಿವ ಸ್ಥಾನ ನೀಡಲು ಎಲ್‌ಡಿಎಫ್ ನಿರ್ಧರಿಸಿದೆ ಎಂದು ಮೂಲಗಳು ಹೇಳಿವೆ.

'ಬಡವರ ಮೇಲೆ ಲಸಿಕೆ ಪ್ರಯೋಗ ಪ್ರಶ್ನಿಸಿದ್ದಷ್ಟೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆಯನ್ನು ಕಾಂಗ್ರೆಸ್ ವಿರೋಧಿಸಿರಲಿಲ್ಲ. ಆಶಾ ಕಾರ್ಯಕರ್ತೆಯರು ಸೇರಿದಂತೆ ಬಡವರ ಮೇಲೆ ಲಸಿಕೆ ಪ್ರಯೋಗ ಮಾಡುವುದನ್ನು ತಮ್ಮ ಪಕ್ಷ ಪ್ರಶ್ನಿಸಿತ್ತು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಆರಂಭದಲ್ಲಿ ಬಿಜೆಪಿಯವರಿಗೇ ಲಸಿಕೆ ಮೇಲೆ ನಂಬಿಕೆ ಇರಲಿಲ್ಲ. ಈ ಕಾರಣಕ್ಕಾಗಿಯೇ ಪ್ರಧಾನಿ ನರೇಂದ್ರ ಮೋದಿಯವರು ಮೊದಲು ಲಸಿಕೆ ತೆಗೆದುಕೊಳ್ಳದೇ ಬಡವರ ಮೇಲೆ ಅದನ್ನು ಪ್ರಯೋಗಿಸಿದ್ದರು' ಎಂದರು.

'ಲಸಿಕೆಯನ್ನು ವಿರೋಧಿಸಿದ್ದರೆ ಸಿದ್ದರಾಮಯ್ಯ, ನಾನು ಮತ್ತು ನಮ್ಮ ಪಕ್ಷದ ನಾಯಕರು ತೆಗೆದುಕೊಳ್ಳುತ್ತಿದ್ದೆವಾ? ನಾವು ಕೊಟ್ಟ ಸಹಕಾರವನ್ನು ಸರ್ಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ. ಸುಮ್ಮನೆ ಕಾಂಗ್ರೆಸ್ ವಿರುದ್ಧ ಆರೋಪ ಮಾಡುತ್ತಿದೆ' ಎಂದು ದೂರಿದರು.

ಕೋವಿಡ್ ಸಂಕಷ್ಟದ ಸಮಯದಲ್ಲಿ ಕಾಂಗ್ರೆಸ್ ಪಕ್ಷ ಜನರ ನೆರವಿಗೆ ನಿಂತಿದೆ. ಸಹಾಯವಾಣಿ, ಆಂಬುಲೆನ್ಸ್, ಔಷಧಿ ಕಿಟ್, ಆಹಾರದ ಕಿಟ್ ವಿತರಣೆ, ಉಚಿತವಾಗಿ ಲಸಿಕೆ ಅಭಿಯಾನ ಸೇರಿದಂತೆ ₹ 100 ಕೋಟಿಯವರೆಗೂ ಯೋಜನೆ ಹಮ್ಮಿಕೊಂಡಿದೆ. ಯುವ ಕಾಂಗ್ರೆಸ್ ಸದಸ್ಯರು ರಾಜ್ಯದ ಉದ್ದಗಲಕ್ಕೂ ಜನರ ಸೇವೆಗೆ ನಿಂತಿದ್ದಾರೆ ಎಂದು ಶಿವಕುಮಾರ್ ಹೇಳಿದರು.

160 ಕ್ಷೇತ್ರಗಳಲ್ಲಿ ಕೋವಿಡ್ ಆರೈಕೆ ಕೇಂದ್ರ, ಸಹಾಯವಾಣಿ ಆರಂಭಿಸಲಾಗಿದೆ. ರಾಜ್ಯದಲ್ಲಿ 150 ಆಂಬುಲೆನ್ಸ್‌ಗಳನ್ನು ಒದಗಿಸಲಾಗಿದೆ. ಗ್ರಾಮೀಣ ಪ್ರದೇಶದ ಜನರು ಲಸಿಕೆಗಾಗಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಸಿಕೊಳ್ಳುವುದಕ್ಕೆ ಕಾಂಗ್ರೆಸ್ ಕಾರ್ಯಕರ್ತರು ನೆರವಾಗುತ್ತಿದ್ದಾರೆ ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ, ಶಾಸಕ ವಿ. ಮುನಿಯಪ್ಪ, ಪ್ರದೇಶ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಮಂಜುನಾಥ ಗೌಡ, ಎನ್‌ಎಸ್‌ಯುಐ ರಾಜ್ಯ ಘಟಕದ ಉಪಾಧ್ಯಕ್ಷ ಜಯಂದರ್ ಸಾಹಿ ಉಪಸ್ಥಿತರಿದ್ದರು.

ಅರುಣಾಚಲ ಪ್ರದೇಶ: 5.8ರಷ್ಟು ಭೂಕಂಪನ

ಪ್ರಜಾವಾಣಿ ವಾರ್ತೆ

ಚಾಂಗ್ಲಾಂಗ್: ಅರುಣಾಚಲ ಪ್ರದೇಶದ ಚಾಂಗ್ಲಾಂಗ್ ಬಳಿ ಶುಕ್ರವಾರ ಸಂಜೆಯ 5.8 ತೀವ್ರತೆಯಷ್ಟು ಭೂಕಂಪನ ಆಗಿದೆ ಎಂದು ಭಾರತೀಯ ಭೂಕಂಪನ ಮಾಪನ ಕೇಂದ್ರ ತಿಳಿಸಿದೆ.


ಚಾಂಗ್ಲಾಂಗ್‌ನ ಆಗ್ನೇಯ ಪ್ರದೇಶವು ಭೂಕಂಪನದ ಕೇಂದ್ರಬಿಂದುವಾಗಿದೆ ಎಂದೂ ಕೇಂದ್ರ ಮಾಹಿತಿ ನೀಡಿದೆ. ಯಾವುದೇ ಸಾವು-ನೋವಿನ ವರದಿಯಾಗಿಲ್ಲ ಎಂದೂ ಮೂಲಗಳು ತಿಳಿಸಿವೆ.

ಆರೋಗ್ಯ ಸಚಿವೆ ಪದವಿಗೇರಿದ ಪತ್ರಕರ್ತೆ ವೀಣಾ ಜಾರ್ಜ್

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಕೋವಿಡ್-19 ಪಿಡುಗಿನ ನಿರ್ವಹಣೆ ಮೂಲಕ ಗಮನ ಸೆಳೆದಿದ್ದ ಕೆ.ಕೆ.ಶೈಲಜಾ ಅವರು ನಿಭಾಯಿಸಿದ್ದ ಆರೋಗ್ಯ ಖಾತೆಯ ಜವಾಬ್ದಾರಿಯನ್ನು ಮಾಜಿ ಪತ್ರಕರ್ತೆ ವೀಣಾ ಜಾರ್ಜ್ ಅವರಿಗೆ ನೀಡಲಾಗಿದೆ.

ಶಾಸಕಿಯಾಗಿ ಎರಡನೇ ಬಾರಿಗೆ ಆಯ್ಕೆಯಾಗಿರುವ ವೀಣಾ ಜಾರ್ಜ್, ಅರಣ್‌ಮುಲ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ದಕ್ಷಿಣ ಭಾರತದಲ್ಲಿ ಈ ಉನ್ನತ ಹುದ್ದೆಗೇರಿದ ಮೊದಲ ಪತ್ರಕರ್ತೆ ಎಂಬ ಹೆಗ್ಗಳಿಕೆಗೂ ವೀಣಾ ಪಾತ್ರರಾಗಿದ್ದಾರೆ.

ನಾಯಕತ್ವ ಗುಣಗಳು, ಪ್ರಬುದ್ಧತೆಯಿಂದ ಕೂಡಿದ ಸಂವಾದ ಶಕ್ತಿಯಿಂದ ಗಮನ ಸೆಳೆದಿರುವ ವೀಣಾ ಉತ್ತಮ ವಾಗ್ಮಿಯೂ ಆಗಿದ್ದಾರೆ. ಸಂಪುಟದಲ್ಲಿ ಯಾರಿಗೆ ಸ್ಥಾನ ನೀಡಬೇಕು ಎಂಬ ಸಮಾಲೋಚನೆ ನಡೆದಿದ್ದ ಸಂದರ್ಭದಲ್ಲಿ, ಭಾರಿ ಸವಾಲಿನ ಆರೋಗ್ಯ ಖಾತೆಯನ್ನೇ ಇವರಿಗೆ ನೀಡಲಾಗುತ್ತದೆ ಎಂಬ ಚರ್ಚೆಗಳೂ ನಡೆದಿದ್ದವು.



ವೀಣಾ ಜಾರ್ಜ್ ಅವರು ಆರೋಗ್ಯ ಸಚಿವೆಯಾಗಿ ಪ್ರಮಾಣ ವಚನ ಸ್ವೀಕರಿಸಿದರು –ಪಿಟಿಐ ಚಿತ್ರ

ಶೈಲಜಾ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳದೇ, ವೀಣಾ ಅವರಿಗೆ ಆರೋಗ್ಯ ಖಾತೆಯನ್ನು ನೀಡಿರುವುದು ಕೆಲವರಲ್ಲಿ ಅಸಮಾಧಾನಕ್ಕೂ ಕಾರಣವಾಗಿದೆ. ಶೈಲಜಾ ಅವರ ಕಾರ್ಯಕ್ಕೆ ಭೇಷ್ ಎಂದಿದ್ದ ಹಲವು ವಿದೇಶಿ ಮಾಧ್ಯಮಗಳು ಅವರನ್ನು 'ರಾಕ್‌ಸ್ಟಾರ್' ಎಂದೇ ಬಣ್ಣಿಸಿದ್ದವು. ಹೀಗಾಗಿ, ಈಗ ವೀಣಾ ಅವರ ಮೇಲೆ ನಿರೀಕ್ಷೆಯ ಭಾರವೂ ಹೆಚ್ಚಿದೆ.

ಶೈಲಜಾ ಅವರು ಕೋವಿಡ್-19 ಪಿಡುಗನ್ನು ಉತ್ತಮವಾಗಿ ನಿಭಾಯಿಸಿದ್ದರು. ಅವರನ್ನು ಪುನಃ ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂಬ ಒತ್ತಾಯ ಕೇಳಿಬಂದಿತ್ತು. ಸಮಾಜದ ವಿವಿಧ ಸ್ತರಗಳ ಜನರ ಜೊತೆಗೆ ಸೆಲೆಬ್ರಿಟಿಗಳು ಸಹ ಈ ಒತ್ತಾಯಕ್ಕೆ ದನಿಗೂಡಿಸಿದ್ದರು.

'ಕೋವಿಡ್-19 ವಿರುದ್ಧದ ಹೋರಾಟ ಸರ್ಕಾರದ ಸಾಂಘಿಕ ಪ್ರಯತ್ನವಾಗಿದೆ' ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ವೀಣಾ ಜಾರ್ಜ್ ಅವರ ಸೇರ್ಪಡೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಟಿವಿ ಚಾನೆಲ್‌ವೊಂದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವೀಣಾ, ಜನಪ್ರಿಯ ಕಾರ್ಯಕ್ರಮ 'ನಮ್ ಮುನ್ನೋಟ್ಟು' ನಡೆಸಿ ಕೊಡುತ್ತಿದ್ದರು. ಈ ಕಾರ್ಯಕ್ರಮದಲ್ಲಿ ವಿಜಯನ್ ಅವರು ಆಯ್ದ ಪ್ರೇಕ್ಷಕರೊಂದಿಗೆ ಸಂವಾದ ನಡೆಸುತ್ತಿದ್ದರು.

ಅವರು ಮನೋರಮಾ ನ್ಯೂಸ್ ಹಾಗೂ ರಿಪೋರ್ಟರ್ ಟಿವಿ ಸೇರಿದಂತೆ ಪ್ರಮುಖ ಚಾನೆಲ್‌ಗಳಲ್ಲಿಯೂ ಕಾರ್ಯನಿರ್ವಹಿಸಿದ್ದಾರೆ. ಭೌತವಿಜ್ಞಾನದಲ್ಲಿ ಸ್ನಾತಕೋತ್ತರ, ಬಿ.ಇಡಿ ಪದವಿ ಪಡೆದಿರುವ ಅವರು, ಎಸ್‌ಎಫ್‌ಐ ಮೂಲಕ ತಮ್ಮ ಸಾಮಾಜಿಕ-ರಾಜಕೀಯ ಹೋರಾಟ ಆರಂಭಿಸಿದರು.

ಅವರಿಗೆ ಇಬ್ಬರು ಮಕ್ಕಳಿದ್ದಾರೆ. ಪತಿ ಡಾ.ಜಾರ್ಜ್ ಜೋಸೆಫ್ ಅವರು ಪ್ರೌಢಶಾಲಾ ಶಿಕ್ಷಕ. ಅವರು ಮಲಂಕರ ಆರ್ಥೋಡಾಕ್ಸ್ ಸಿರಿಯನ್ ಚರ್ಚ್‌ನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

ವಿಡಿಎ ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಅಧೀನದ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕುಶಲ ಕಾರ್ಮಿಕರು ಮತ್ತು ಕೌಶಲರಹಿತ ಕಾರ್ಮಿಕರ ವಿಡಿಎ (ವ್ಯತ್ಯಾಸವಾಗುವ ತುಟ್ಟಿಭತ್ಯೆ) ಮೊತ್ತವನ್ನು ಹೆಚ್ಚಳ ಮಾಡುವುದಾಗಿ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಶುಕ್ರವಾರ ಪ್ರಕಟಿಸಿದೆ. ಈ ಹೆಚ್ಚಳವು ಪ್ರತಿ ತಿಂಗಳಿಗೆ ₹ 105ರಿಂದ ₹ 210ರವರೆಗೆ ಇರಲಿದೆ.

ಇದರಿಂದ ಒಂದೂವರೆ ಕೋಟಿಗೂ ಹೆಚ್ಚಿನ ನೌಕರರಿಗೆ ಪ್ರಯೋಜನ ಆಗಲಿದೆ. ಈ ಹೆಚ್ಚಳವು ಏಪ್ರಿಲ್ 1ರಿಂದ ಅನ್ವಯ ಆಗಲಿದೆ. ಕೇಂದ್ರ ಸರ್ಕಾರದ ಅಧೀನದ ಸಂಸ್ಥೆಗಳು, ರೈಲ್ವೆ, ಗಣಿ, ಪ್ರಮುಖ ಬಂದರುಗಳಲ್ಲಿ ಕೆಲಸ ಮಾಡುವವರಿಗೆ ಇದರ ಪ್ರಯೋಜನ ದೊರೆಯಲಿದೆ.

ಯುನೆಸ್ಕೊ ಪಾರಂಪರಿಕ ತಾಣ ತಾತ್ಕಾಲಿಕ ಪಟ್ಟಿಗೆ ಹಿರೇಬೆಣಕಲ್ ಗೋರಿಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರ್ಪಡೆಗೆ ಪರಿಶೀಲಿಸಲು ಭಾರತವು ಸಲ್ಲಿಸಿರುವ ಪಟ್ಟಿಯಲ್ಲಿ ಕೊಪ್ಪಳ ಜಿಲ್ಲೆಯ ಶಿಲಾಯುಗದ ಹಿರೇಬೆಣಕಲ್‌ನ ಗೋರಿಗಳು ಮತ್ತು ಗುಹಾಚಿತ್ರಗಳು ಸ್ಥಾನ ಪಡೆದಿವೆ. ತಮಿಳುನಾಡಿನ ಕಾಂಚೀಪುರಂ ದೇವಾಲಯ ಕೂಡ ಈ ಪಟ್ಟಿಯಲ್ಲಿ ಸೇರಿದೆ.

ಪುರಾತತ್ವ ಇಲಾಖೆ 9 ಪಾರಂಪರಿಕ ಸ್ಥಳಗಳನ್ನು ನಾಮನಿರ್ದೇಶನ ಮಾಡಿತ್ತು. ಅವುಗಳಲ್ಲಿ 6 ಸ್ಥಳಗಳು ತಾತ್ಕಾಲಿಕ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಮಹಾರಾಷ್ಟ್ರದಲ್ಲಿ ಮರಾಠಾ ದೊರೆಗಳು ನಿರ್ಮಿಸಿರುವ ಸಾಲುಸಾಲು ಕೋಟೆಗಳು, ಮಧ್ಯಪ್ರದೇಶದ ಬೇದಘಾಟ್–ಲಾಮೆತಘಾಟ್, ಸತುಪುರದ ಹುಲಿ ಅಭಯಾರಣ್ಯ ಮತ್ತು ವಾರಾಣಸಿಯ ಗಂಗಾ ನದಿಯ ಮುಂಭಾಗ ಈ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಇತರ ಪಾರಂಪರಿಕ ತಾಣಗಳು.


ಗಂಗಾವತಿ ತಾಲ್ಲೂಕುಬೆಣಕಲ್ ಗ್ರಾಮದ ಬಳಿಯ ಪ್ರಾಗೈತಿಹಾಸಿಕ ಕಾಲದ ಮೋರೇರ ಬೆಟ್ಟದ ಮೇಲಿನ ಶಿಲಾ ಸಮಾಧಿಗಳು.

ಈ 6 ಸ್ಥಳಗಳನ್ನು ಏ.14ರಂದು ಸೇರಿಸಲಾಗಿದೆ. ಈ ಮೂಲಕ ತಾತ್ಕಾಲಿಕ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಭಾರತೀಯ ಸ್ಮಾರಕಗಳ ಸಂಖ್ಯೆ 48 ತಲುಪಿದೆ. ಯುನೆಸ್ಕೊ ಮಾರ್ಗಸೂಚಿ ಪ್ರಕಾರ ವಿಶ್ವ ಪಾರಂಪರಿಕ ತಾಣದ ಅಂತಿಮ ಪಟ್ಟಿ ಮಾಡುವ ಮೊದಲು, ಹಲವು ಸ್ಥಳಗಳು ಅಥವಾ ಸ್ಮಾರಕಗಳ ಹೆಸರನ್ನು ತಾತ್ಕಾಲಿಕ ಪಟ್ಟಿಯಲ್ಲಿ ಸೇರಿಸುವುದು ಕಡ್ಡಾಯ. ಈ ಪಟ್ಟಿ ಸುಮಾರು ಒಂದು ವರ್ಷದ ಕಾಲ ಇರುತ್ತದೆ. ಬಳಿಕ ಯುನೆಸ್ಕೊ ಅಂತಿಮ ಪಟ್ಟಿಯನ್ನು ಪ್ರಕಟಿಸುತ್ತದೆ.

ಹಿರೇಬೆಣಕಲ್ ಅನ್ನು ಪಟ್ಟಿಗೆ ಸೇರಿಸಿರುವ ಕುರಿತು ಸರ್ಕಾರ ಈ ರೀತಿ ಸಮರ್ಥನೆ ನೀಡಿದೆ: ‘2500 ವರ್ಷಗಳಿಂದಲೂ ಈ ಶಿಲಾ ವಿನ್ಯಾಸಗಳು ಮಣ್ಣಿನ ದಿಬ್ಬದ ಮೇಲೆ ನಿಂತಿವೆ. ಈ ವಿನ್ಯಾಸಗಳು ಇತಿಹಾಸಪೂರ್ವ ಕಾಲದಲ್ಲಿ ಅಂತಿಮ ಸಂಸ್ಕಾರ ಮತ್ತು ಧಾರ್ಮಿಕ ಆಚರಣೆಗಳನ್ನು ಹೇಗೆ ನಡೆಸಲಾಗುತ್ತಿತ್ತು ಎಂಬುದರ ಕುರಿತು ಒಳನೋಟಗಳನ್ನು ಒದಗಿಸುತ್ತವೆ’. ‘ಇತಿಹಾಸಪೂರ್ವದಲ್ಲಿ ಕೆತ್ತಿರುವ ಗುಹಾ ಚಿತ್ರಗಳೂ ಇಲ್ಲಿ ಇವೆ. ಮಾನವಾಕೃತಿಗಳು, ಕತ್ತಿ ಹಿಡಿದು ಕುದುರೆ ಮೇಲೆ ಕುಳಿತಿರುವ ಮಾನವ, ಜಿಂಕೆ ಹಿಂಡು, ನವಿಲುಗಳ ಚಿತ್ರಗಳನ್ನು ಕೆತ್ತಲಾಗಿದೆ. ಈ ಚಿತ್ರಗಳು ಆ ಕಾಲಘಟ್ಟದಲ್ಲಿ ಆಯುಧಗಳ ಬಳಕೆ ಇತ್ತು ಮತ್ತು ಶಿಕಾರಿ ನಡೆಸಲಾಗುತ್ತಿತ್ತು ಎಂಬ ಕುರುಹುಗಳನ್ನು ನೀಡುತ್ತವೆ’ ಎಂದಿದೆ.

ಪಶ್ಚಿಮ–ಪೂರ್ವ ಘಟ್ಟ ಸಂರಕ್ಷಣೆ: ಕೇಂದ್ರ ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ಘಟ್ಟ ಮತ್ತು ಪೂರ್ವ ಘಟ್ಟಗಳ ಸಂರಕ್ಷಣೆಯ ನಿಟ್ಟಿನಲ್ಲಿ ಕೈಗೊಳ್ಳಲಾಗಿರುವ ಕ್ರಮಗಳ ಕುರಿತು ಪ್ರತಿಕ್ರಿಯೆ ನೀಡುವಂತೆ ಸೂಚಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಕಸ್ತೂರಿರಂಗನ್ ಹಾಗೂ ಮಾಧವ್ ಗಾಡ್ಗಿಳ್ ನೇತೃತ್ವದ ಸಮಿತಿಗಳ ಶಿಫಾರಸಿನ ಅನ್ವಯ ಶಾಶ್ವತ ಕ್ರಮಕ್ಕೆ ಸೂಚಿಸುವಂತೆ ಕೋರಿ ವಕೀಲ ಕೆ.ಎಸ್. ರಾಧಾಕೃಷ್ಣನ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿರುವ ನ್ಯಾಯಮೂರ್ತಿ ಆದರ್ಶಕುಮಾರ್ ಗೋಯೆಲ್ ನೇತೃತ್ವದ ಹಸಿರು ಪೀಠ ಈ ನೋಟಿಸ್ ನೀಡಿದೆ.

ಸಂಬಂಧಿಸಿದ ಸರ್ಕಾರಗಳು ಅರಣ್ಯ ಸಂಪತ್ತಿನ ಸಂರಕ್ಷಣೆ ಹಾಗೂ ಜಲಮೂಲಗಳ ಅತಿಕ್ರಮಣ ತಡೆಗಟ್ಟಲು ಕೈಗೊಳ್ಳಲಾದ ಪರಿಣಾಮಕಾರಿ ಯೋಜನೆಗಳ ಕುರಿತ ವರದಿಯನ್ನು ಹಸಿರು ಪೀಠಕ್ಕೆ ಸಲ್ಲಿಸಲು ನಿರ್ದೇಶನ ನೀಡುವಂತೆ ಕೋರಿ ಅರ್ಜಿ ಸಲ್ಲಿಸಲಾಗಿದೆ.

ತಮಿಳುನಾಡಿನ ವ್ಯಾಪ್ತಿಯಲ್ಲಿರುವ ಪಶ್ಚಿಮ ಮತ್ತು ಪೂರ್ವ ಘಟ್ಟಗಳಲ್ಲಿರುವ ಮೀಸಲು ಅರಣ್ಯ ಪ್ರದೇಶಗಳನ್ನು ತಮಿಳುನಾಡು ಅರಣ್ಯ ಕಾಯ್ದೆ–1882 ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆ–1972 ಅಡಿ ಸಂರಕ್ಷಿಸಲಾಗಿದೆ. ತಮಿಳುನಾಡು ಬೆಟ್ಟಗುಡ್ಡ ಪ್ರದೇಶಗಳ (ಮರಗಳ ಸಂರಕ್ಷಣೆ) ಕಾಯ್ದೆ–1955 ಜಾರಿಯಲ್ಲಿದ್ದರೂ ಉಲ್ಲಂಘನೆಯ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿಲ್ಲ ಎಂದು ಅರ್ಜಿದಾರರು ದೂರಿದ್ದಾರೆ.

ಖಾಸಗಿ ಹಿಡುವಳಿಗಳಲ್ಲಿ ಮರಗಳ ರಕ್ಷಣೆ ಸವಾಲಾಗಿ ಪರಿಣಮಿಸಿದೆ. ಕಾನೂನಿನಲ್ಲಿರುವ ಕೆಲವು ಲೋಪ ದೋಷಗಳ ಲಾಭ ಪಡೆಯುವ ಮೂಲಕ, ಶ್ರೀಗಂಧದಂತಹ ಅಮೂಲ್ಯ ಮರಗಳನ್ನು ಕಡಿದು ರಹಸ್ಯವಾಗಿ ಸಾಗಿಸಲಾಗುತ್ತಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ ಜಾರಿಯಲ್ಲಿದ್ದರೂ ಕೆಲವೆಡೆ ಪ್ರಾಣಿಗಳ ಬೇಟೆ ಅವ್ಯಾಹತವಾಗಿ ನಡೆಯುತ್ತಿದೆ. ಇಂತಹ ಅಕ್ರಮ ಚಟುವಟಿಕೆಗಳಿಂದಾಗಿ ಪೂರ್ವ ಘಟ್ಟದ ಬೆಟ್ಟಗಳು ಬಂಜರಾಗಿವೆ. ಅಲ್ಲಿನ ನದಿ, ತೊರೆಗಳು ಒಣಗಿದ್ದು, ಜೀವವೈವಿಧ್ಯವು ಕ್ರಮೇಣ ಕಣ್ಮರೆಯಾಗುತ್ತಿದೆ ಎಂದೂ ಆರೋಪಿಸಲಾಗಿದೆ.

ಪರಿಸರ ಅಸಮತೋಲನಕ್ಕೆ ಕಾರಣವಾದ ಅಕ್ರಮಗಳ ನಿಯಂತ್ರಣದ ಹಿನ್ನೆಲೆಯಲ್ಲಿ ಕಸ್ತೂರಿರಂಗನ್ ಹಾಗೂ ಗಾಡ್ಗಿಳ್ ಸಮಿತಿಗಳು ಸಲ್ಲಿಸಿರುವ ವರದಿಯ ಶಿಫಾರಸಿನ ಅನ್ವಯ ಪ್ರತ್ಯೇಕ, ಶಾಶ್ವತ ಕ್ರಮ ಕೈಗೊಳ್ಳುವಂತೆ ಕೇಂದ್ರ, ಆಯಾ ರಾಜ್ಯ ಸರ್ಕಾರಗಳಿಗೆ ಸೂಚಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಈ ಘಟ್ಟಗಳ ವ್ಯಾಪ್ತಿ ಒಳಗೊಂಡಿರುವ ಆಯಾ ರಾಜ್ಯ ಸರ್ಕಾರಗಳು ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಗಳಿಂದಲೂ ಪ್ರತಿಕ್ರಿಯೆ ಕೋರಿ ನ್ಯಾಯಪೀಠವು ನೋಟಿಸ್ ನೀಡಿದೆ.

ಇಸ್ರೇಲ್–ಪ್ಯಾಲೆಸ್ಟೀನ್ ಕದನವಿರಾಮ ಘೋಷಣೆ

ಅಂತರರಾಷ್ಟ್ರೀಯ ಒತ್ತಡಕ್ಕೆ ಮನ್ನಣೆ • ಉಭಯ ಕಡೆ ಜನತೆಯ ನಿಟ್ಟುಸಿರು

ಗಾಜಾ, ಪ್ಯಾಲೆಸ್ಟೀನ್ ವಲಯ (ಎಎಫ್‌ಪಿ): ಇಸ್ರೇಲ್ ಮತ್ತು ಇಸ್ಲಾಮಿಸ್ಟ್ ಸಮೂಹ ಹಮಾಸ್ ನಿಯಂತ್ರಣದಲ್ಲಿ ಇರುವ ಗಾಜಾ ಪಟ್ಟಿಯ ನಡುವೆ 11 ದಿನದ ತೀವ್ರ ಹೋರಾಟದ ನಂತರ ಕದನವಿರಾಮ ಏರ್ಪಟ್ಟಿದೆ.

11 ದಿನಗಳ ಯುದ್ಧದಲ್ಲಿ ಸುಮಾರು 240 ಜನರು ಸತ್ತಿದ್ದು, ಹಲವರು ಗಾಯಗೊಂಡಿದ್ದರು. ಉಭಯ ಕಡೆಯಿಂದ ರಾಕೆಟ್‌ಗಳ ದಾಳಿ ನಡೆದು ಕಟ್ಟಡಗಳು ನೆಲಸಮಗೊಂಡಿದ್ದು, ಹಲವರು ಅತಂತ್ರಗೊಂಡಿದ್ದರು. ಕದನ ವಿರಾಮ ಘೋಷಿಸಲು ಅಮೆರಿಕ, ಈಜಿಪ್ಟ್ ಒಳಗೊಂಡು ಅಂತರರಾಷ್ಟ್ರೀಯ ಸಮುದಾಯ ಒತ್ತಡ ಹೇರಿದ್ದವು.

ಇಸ್ರೇಲ್‌ನ ದಾಳಿ ನಿಂತ ಹಿಂದೆಯೇ ಗಾಜಾ ನಗರವನ್ನು ದಟ್ಟ ಹೊಗೆ ಆವರಿಸಿದ್ದು, ಅಲ್ಲಲ್ಲಿ ಕಪ್ಪು ಹೊಗೆ ವಾತಾವರಣವನ್ನು ಸೇರುತ್ತಿತ್ತು ಎಂದು ಎಎಫ್‌ಪಿ ಪ್ರತಿನಿಧಿ ವರದಿ ಮಾಡಿದ್ದಾರೆ.

ಕದನ ವಿರಾಮ ಏರ್ಪಟ್ಟ ಹಿಂದೆಯೇ ಗಾಜಾ ನಗರದ ರಸ್ತೆಗಳಲ್ಲಿ ಸಂತಸ ಕಂಡುಬಂದಿದ್ದು, ಇದರ ಕುರುಹಾಗಿ ಕೆಲವರು ದೊಡ್ಡದಾಗಿ ಕಾರಿನ ಹಾರ್ನ್ ಹೊಮ್ಮಿಸುತ್ತಾ ತೆರಳಿದ್ದರೆ,ಕೆಲವರು ಗಾಳಿಯಲ್ಲಿ ಗುಂಡು ಹಾರಿಸಿದರು.

ಹಮಾಮ್‌ನಿಂದಲೂ ಯಾವುದೇ ರಾಕೆಟ್ ದಾಳಿ ಸಾಧ್ಯತೆ ಇಲ್ಲ. ಹೀಗಾಗಿ, ಇಸ್ರೇಲ್‌ನಲ್ಲಿಯೂ ಎಚ್ಚರಿಕೆಯ ಗಂಟೆ ಮೊಳಗಲಿಲ್ಲ. ಇಸ್ರೇಲ್‌ನಾದ್ಯಂತ ದಟ್ಟ ಮೌನ ಆವರಿಸಿತ್ತು. ಕದನ ವಿರಾಮದ ಕಾರಣ ಎರಡೂ ಕಡೆ ಸಂಘರ್ಷದ ಮಾತುಗಳನ್ನು ಹೊರಡಿಸುತ್ತಿದ್ದ ನಿವಾಸಿಗಳು ನಿಟ್ಟುಸಿರುಬಿಟ್ಟರು.


ಇಸ್ರೇಲ್–ಪ್ಯಾಲೆಸ್ಟೀನ್ ನಡುವೆ ಕದನವಿರಾಮ ಏರ್ಪಟ್ಟ ಹಿಂದೆಯೇ ಪ್ಯಾಲೆಸ್ಟೀನ್ ಮುಸಲ್ಮಾನರು ಜೆರುಸಲೆಂನ ಅಲ್ ಅಗ್ಸಾ ಮಸೀದಿಯಲ್ಲಿ ಸೇರಿ ಶುಕ್ರವಾರ ಸಂಭ್ರಮ ಆಚರಿಸಿದರು —ಎಎಫ್‌ಪಿ ಚಿತ್ರ

ಇದೊಂದು ಉತ್ತಮ ನಿರ್ಧಾರ. ಎರಡು ಕಡೆಯ ಜನರಿಗೆ ಏನಾಗುತ್ತಿದೆ ಎಂಬುದೇ ತಿಳಿಯುತ್ತಿರಲಿಲ್ಲ ಎಂದು ಜೆರುಸಲೆಂನ ನಿವಾಸಿಯಾಗಿರುವ ಪ್ಯಾಲೆಸ್ಟೀನಿ ನಿವಾಸಿ ಅಮ್ವಾರಾ ದಾನಾ ಪ್ರತಿಕ್ರಿಯಿಸಿದರು.

ಟೆಲ್ ಅವಿವ್‌ನಲ್ಲಿ ಅಲ್ಲಿನ ನಿವಾಸಿ ಅವಿತಾಲ್ ಫಾಸ್ಟ್ ಅವರು, ನಾನು ಈಗ ಘೋಷಿಸಿರುವ ಕದನವಿರಾಮ ಕುರಿತು ಆಶಾವಾದದಿಂದ ಇದ್ದೇನೆ. ಇದು ದೀರ್ಘಕಾಲ ಉಳಿಯಲಿದೆ ಎಂಬ ಭರವಸೆ ನನ್ನದು. ಬೆಂಕಿಯ ಭೀತಿ ಇಲ್ಲದೆಯೇ ಜೀವನವನ್ನು ಕಳೆಯಲು ನಾವು ಬಯಸುತ್ತೇವೆ ಎಂದು ಹೇಳಿದರು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಉಂಟಾದ ಒತ್ತಡ ಹಿನ್ನೆಲೆಯಲ್ಲಿ ಗಾಜಾದ ಎರಡನೇ ಪ್ರಭಾವಿ ಶಸ್ತ್ರಸಜ್ಜಿತ ತಂಡವಾದ ಇಸ್ಲಾಮಿಕ್ ಜಿಹಾದ್ ಕದನವಿರಾಮಕ್ಕೆ ಒಪ್ಪಿಕೊಂಡಿತ್ತು.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಈ ತೀರ್ಮಾನವನ್ನು ಸ್ವಾಗತಿಸಿದ್ದು, ಇಲ್ಲಿ ಅಭಿವೃದ್ಧಿಗೆ ಉತ್ತಮ ಅವಕಾಶ ಇದೆ ಎಂದು ನಾನು ಭಾವಿಸಿದ್ದೇನೆ. ಅದಕ್ಕೆ ನಾವು ಬದ್ಧರಾಗಿದ್ದೇವೆ ಎಂದು ಬೈಡನ್ ಪ್ರತಿಕ್ರಿಯಿಸಿದ್ದಾರೆ.

ಇಸ್ರೇಲ್‌ನ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಕಚೇರಿಯು ಹೇಳಿಕೆ ಬಿಡುಗೆ ಮಾಡಿದ್ದು, ಕದನ ವಿರಾಮ ಕುರಿತಂತೆ ಭದ್ರತಾ ಪಡೆಯ ಅಧಿಕಾರಿಗಳ ಶಿಫಾರಸನ್ನು ಸಂಪುಟ ಒಪ್ಪಿಕೊಂಡಿದೆ ಎಂದು ತಿಳಿಸಿದೆ. ಹಮಾಮ್ಸ್ ಮತ್ತು ಇಸ್ಲಾಮಿಸ್ಟ್ ಜಿಹಾದ್ ಕೂಡಾ ಕದನವಿರಾಮ ಏರ್ಪಟ್ಟಿರುವುದನ್ನು ದೃಢಪಡಿಸಿವೆ.

ಡಿಆರ್‌ಡಿಒದಿಂದ ಕೋವಿಡ್–19 ಪ್ರತಿಕಾಯ ಪತ್ತೆ ಕಿಟ್

ನವದೆಹಲಿ (ಪಿಟಿಐ): ‘ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಕೋವಿಡ್–19 ಪ್ರತಿಕಾಯಗಳನ್ನು (ಆ್ಯಂಟಿಬಾಡಿ) ಪತ್ತೆ ಹಚ್ಚುವ ಕಿಟ್ ಅನ್ನು ಅಭಿವೃದ್ಧಿಪಡಿಸಿದ್ದು, ಈ ಕಿಟ್ ಕೇವಲ 75 ನಿಮಿಷಗಳಲ್ಲಿ ಫಲಿತಾಂಶ ನೀಡುತ್ತದೆ’ ಎಂದು ಕೇಂದ್ರ ರಕ್ಷಣಾ ಸಚಿವಾಲಯವು ಶುಕ್ರವಾರ ತಿಳಿಸಿದೆ.

‘ಡಿಪ್‌ಕೋವ್ಯಾನ್’ ಹೆಸರಿನಲ್ಲಿ ಕರೆಯಲಾಗುವ ಈ ಕಿಟ್, ಕೇವಲ 75 ನಿಮಿಷಗಳಲ್ಲಿ ಫಲಿತಾಂಶ ತೆಗೆದುಕೊಳ್ಳುವುದರಿಂದ ಇತರ ರೋಗಗಳೊಂದಿಗೆ ಯಾವುದೇ ಅಡ್ಡ ಪರಿಣಾಮ ಬೀರದು’ ಎಂದು ಸಚಿವಾಲಯವು ವಿಶ್ವಾಸ ವ್ಯಕ್ತಪಡಿಸಿದೆ.

‘ಈ ಕಿಟ್‌ನ ಶೆಲ್ಫ್ ಲೈಫ್ (ನಿಗದಿತ ಅವಧಿ) 18 ತಿಂಗಳುಗಳಾಗಿದ್ದು, ನ್ಯೂಕ್ಲಿಯೊಕ್ಯಾಪ್ಸಿಡ್ (ಎನ್ ಅಂಡ್ ಎನ್), ಸಾರ್ಸ್–ಕೋವಿನ್–2 ಪ್ರೊಟೀನ್‌ಗಳನ್ನು ಪತ್ತೆ ಮಾಡುತ್ತದೆ. ನವದೆಹಲಿ ಮೂಲದ ವ್ಯಾನ್‌ಗಾರ್ಡ್ ಡಯಾಗ್ನೋಸ್ಟಿಕ್ಸ್ ಪ್ರೈ ಲಿ. ಜತೆಗೂಡಿ ಈ ಕಿಟ್ ಅನ್ನು ಅಭಿವೃದ್ಧಿ ಪಡಿಸಲಾಗಿದ್ದು, ಜೂನ್ ಮೊದಲ ವಾರದಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು’ ಎಂದೂ ರಕ್ಷಣಾ ಸಚಿವಾಲಯವು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಕೋವಿಡ್‌ನಿಂದ ಮೃತಪಟ್ಟವರನ್ನು ನೆನೆದು ಭಾವುಕರಾದ ಪ್ರಧಾನಿ ಮೋದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್-19 ಸಾಂಕ್ರಾಮಿಕದಿಂದ ಮೃತಪಟ್ಟವರಿಗೆ ಸಂತಾಪ ಸೂಚಿಸುವ ವೇಳೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶುಕ್ರವಾರ ಭಾವುಕರಾದರು.

ಲೋಕಸಭೆಯಲ್ಲಿ ತಾವು ಪ್ರತಿನಿಧಿಸುವ ವಾರಾಣಸಿ ಕ್ಷೇತ್ರದ ವೈದ್ಯರು, ಅರೆವೈದ್ಯಕೀಯ ಸಿಬ್ಬಂದಿ, ಮುಂಚೂಣಿ ಕಾರ್ಯಕರ್ತರೊಂದಿಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಸಂವಾದ ನಡೆಸಿದ ಮೋದಿ, ‘ಕೋವಿಡ್-19 ನಮ್ಮ ಹಲವು ಪ್ರೀತಿಪಾತ್ರರನ್ನು ನಮ್ಮಿಂದ ಕಸಿದುಕೊಂಡಿದೆ. ಕೋವಿಡ್‌ನಿಂದ ನಿಧನರಾದವರಿಗೆ ಗೌರವ ಸಲ್ಲಿಸುತ್ತೇನೆ ಮತ್ತು ಅವರ ಕುಟುಂಬದವರಿಗೆ ನನ್ನ ಸಂತಾಪಗಳನ್ನೂ ಸೂಚಿಸುತ್ತೇನೆ ಎಂದು ಹೇಳಿದ್ದಾರೆ.


ನರೇಂದ್ರ ಮೋದಿ

ಮಾತುಕತೆ ವೇಳೆ ಸಾಕಷ್ಟು ಸಲ ವಿರಾಮ ತೆಗೆದುಕೊಂಡ ಅವರು, ಭಾವುಕರಾದಂತೆ ಮತ್ತು ಕಣ್ಣೀರನ್ನು ತಡೆಯಲು ಪ್ರಯತ್ನಿಸುತ್ತಿರುವಂತೆ ಕಂಡುಬಂದರು. ಬಳಿಕ ಮಾತು ಮುಂದುವರಿಸಿದ ಪ್ರಧಾನಿ, ಕೋವಿಡ್ ವಿರುದ್ಧ ಲಸಿಕೆಯನ್ನು ಸುರಕ್ಷತಾ ಕವಚ ಎಂದು ಬಣ್ಣಿಸಿದರು ಮತ್ತು ಎಲ್ಲರೂ ಲಸಿಕೆ ಹಾಕಿಸಿಕೊಳ್ಳಬೇಕು. ಜನರನ್ನು ಕಾಪಾಡಲು ಸೇವೆ ಮಾಡುತ್ತಿರುವ ನಮ್ಮ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆಯು ರಕ್ಷಣೆ ಯನ್ನು ಒದಗಿಸಿದೆ. ಮುಂಬರುವ ದಿನ ಗಳಲ್ಲಿ ಲಸಿಕೆ ಸುರಕ್ಷತೆಯನ್ನು ಪ್ರತಿಯೊಬ್ಬರಿಗೂ ವಿಸ್ತರಿಸಲಿದ್ದೇವೆ ಎಂದರು.

‘ಕೋವಿಡ್-19 ವಿರುದ್ಧ ಹೋರಾಟದ ನಡೆಸುತ್ತಿರುವಾಗಲೇ, ಕಪ್ಪು ಶಿಲೀಂಧ್ರ ಸೋಂಕು ಹೊಸ ಸವಾಲಾಗಿ ಎದುರಾಗಿದೆ. ನಾವು ಅದನ್ನು ಮೀರಿ ನಿಲ್ಲಲು ಮುಂಜಾಗ್ರತೆ ಮತ್ತು ಸಿದ್ಧತೆ ಕೈಗೊಳ್ಳುವತ್ತ ಗಮನ ಹರಿಸಬೇಕಿದೆ ಎಂದಿದ್ದಾರೆ.

ಬಾಯಿ ಮುಕ್ಕಳಿಸಿ ಕೋವಿಡ್ ಪರೀಕ್ಷೆ ಮಾಡಿಕೊಳ್ಳಿ!

ಪ್ರಜಾವಾಣಿ ವಾರ್ತೆ

ಮುಂಬೈ: ಕೋವಿಡ್ ಪರೀಕ್ಷೆಗಾಗಿ ಗಂಟಲು ಮತ್ತು ಮೂಗಿನ ದ್ರವದ ಮಾದರಿಯನ್ನು ಕೊಡುತ್ತಿದ್ದ ವಿಧಾನಕ್ಕೆ ಗುಡ್ ಬೈ ಹೇಳಿ. ಬಾಯಿ ಮುಕ್ಕಳಿಸಿ ಸಾಕು! (ಗಾರ್ಗಲ್)

ಆಶ್ಚರ್ಯವೆನಿಸಿದರೂ ನಿಜ. ಲವಣ ಯುಕ್ತ ನೀರನ್ನು (ಸಲೈನ್ ವಾಟರ್-ಸೋಡಿಯಂ ಕ್ಲೋರೈಡ್ ಮತ್ತು ನೀರು) ಬಾಯಿಯಲ್ಲಿ ಮುಕ್ಕಳಿಸಿ. ನಂತರ ಆ ನೀರನ್ನು ಪ್ರಯೋಗಾಲಯಕ್ಕೆ ಕಳಿಸಿದರೆ ಕೋವಿಡ್ ಇದೆಯೇ ಇಲ್ಲವೇ ಎಂಬುದನ್ನು ಸುಲಭವಾಗಿ ಪತ್ತೆ ಮಾಡುವ ಹೊಸ ವಿಧಾನವನ್ನು ಅಭಿವೃದ್ಧಿ ಪಡಿಸಲಾಗಿದೆ.

ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ (ಸಿಎಸ್ಐಆರ್)ನ ಭಾಗವಾಗಿರುವ ನಾಗ್ಪುರದ ರಾಷ್ಟ್ರೀಯ ಪರಿಸರ ಎಂಜಿನಿಯರಿಂಗ್ ಸಂಶೋಧನಾ ಕೇಂದ್ರವು (ನೀರಿ) ಇದೇ ಮೊದಲ ಬಾರಿಗೆ ‘ಸಲೈನ್ ಗಾರ್ಗಲ್’ ಆರ್‌ಟಿ–ಪಿಸಿಆರ್ ಪರೀಕ್ಷಾ ಕಿಟ್ ಅಭಿವೃದ್ಧಿಪಡಿಸಿದೆ.

ಹಿರಿಯ ವಿಜ್ಞಾನಿ ಡಾ.ಕೃಷ್ಣ ಖೈರ್ನರ್ ಮತ್ತು ತಂಡ ಈ ಹೊಸ ವಿಧಾನವನ್ನು ಅಭಿವೃದ್ಧಿಪಡಿಸಿದೆ. ‘ಪಾತ್ರೆಯಲ್ಲಿರುವ (ಕಂಟೇನರ್) ಸಲೈನ್ ವಾಟರ್ ಅನ್ನು ನಿಮ್ಮ ಬಾಯಿಯಲ್ಲಿ ಹಾಕಿ 15 ಸೆಕೆಂಡ್‌ಗಳ ಕಾಲ ಮುಕ್ಕಳಿಸಿ. ನಂತರ 15 ಸೆಕೆಂಡ್‌ಗಳಲ್ಲಿ ಅದೇ ದ್ರಾವಣದಿಂದ ನಿಮ್ಮ ಬಾಯಿಯನ್ನು ತೊಳೆದುಕೊಂಡು ಪಾತ್ರೆಯಲ್ಲಿ ದ್ರಾವಣವನ್ನು ಹಾಕಬೇಕು. ಈ ಸ್ಯಾಂಪಲ್ ಅನ್ನು ಪ್ರಯೋಗಾಲಯಕ್ಕೆ ಕಳುಹಿಸಬೇಕು’ ಎಂದು ತಂಡವು ಹೇಳಿದೆ.

ಪಿಡುಗು ಕೊನೆಗಾಣಿಸಲು ತಮಿಳುನಾಡಿನಲ್ಲಿ ದೇಗುಲ ನಿರ್ಮಾಣ

‘ಕೊರೊನಾ ದೇವಿ’ ದೇವಾಲಯ

ಕೊಯಮತ್ತೂರು (ಪಿಟಿಐ): ದೇಶವನ್ನು ಕಾಡುತ್ತಿರುವ ಕೋವಿಡ್–19 ಸಾಂಕ್ರಾಮಿಕ ಪಿಡುಗನ್ನು ಕೊನೆಗಾಣಿಸಲು ದೈವಿಕ ಹಸ್ತಕ್ಷೇಪದ ಅಗತ್ಯವಿದೆ ಎಂದು ಮನಗಂಡು ಇಲ್ಲಿನ ಮಠವೊಂದು ‘ಕೊರೊನಾ ದೇವಿ’ ದೇವಾಲಯ ನಿರ್ಮಿಸಿ, ನಿತ್ಯ ಪೂಜಾ ವಿಧಿಗಳನ್ನು ನೆರವೇರಿಸುತ್ತಿದೆ.

ಕಮಾಚಿಪುರಿ ಅಧೀನಂ ಮಠವು ನಗರದ ಹೊರವಲಯ ಇರುಗೂರಿನಲ್ಲಿ ಇತ್ತೀಚೆಗೆ ದೇವಾಲಯ ನಿರ್ಮಿಸಿ, 1.5 ಅಡಿ ಎತ್ತರದ ಕಪ್ಪು ಕಲ್ಲಿನ ದೇವಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ‘ಕೊರೊನಾ ದೇವಿ’ ಎಂದು ನಾಮಕರಣ ಮಾಡಿದೆ.

150 ವರ್ಷಗಳ ಹಿಂದೆ ಪ್ಲೇಗ್ ಕಾಯಿಲೆಯಿಂದ ಸಾಕಷ್ಟು ಜನರ ಪ್ರಾಣ ಹಾನಿಗಳು ಆದಾಗ ಕೊಯಮತ್ತೂರಿನಲ್ಲಿ ‘ಪ್ಲೇಗ್ ಮಾರಿಯಮ್ಮ ದೇವಾಲಯ’ ನಿರ್ಮಿಸಲಾಗಿತ್ತು. ಈಗ ಇದೇ ಹಾದಿಯಲ್ಲಿ ಕೊರೊನಾ ದೇವಿ ದೇವಾಲಯವನ್ನು ನಿರ್ಮಿಸಲಾಗಿದೆ.

‘ಕೊಯಮತ್ತೂರು ಸೇರಿದಂತೆ ಇಡೀ ದೇಶದ ಜನರನ್ನು ಕೋವಿಡ್ ಸಾಂಕ್ರಾಮಿಕ ರೋಗ ಕಾಡುತ್ತಿದೆ. ಹೀಗಾಗಿ ಮಠದ ಆವರಣದಲ್ಲಿ ಕೊರೊನಾ ದೇವಿ ದೇವಾಲಯ ನಿರ್ಮಿಸಲಾಗಿದೆ. ಈ ವೈರಾಣುವಿನಿಂದ ಜನರನ್ನು ಕಾಪಾಡುವಂತೆ ದೇವಿಯನ್ನು ನಿತ್ಯ ಪ್ರಾರ್ಥಿಸಿ, ಪೂಜೆಗಳನ್ನು ನೆರವೇರಿಸಲಾಗುತ್ತದೆ. 48 ದಿನಗಳು ವಿಶೇಷ ಪೂಜೆಗಳು ನಡೆಯಲಿವೆ’ ಎಂದು ಮಠದ ಮೂಲಗಳು ತಿಳಿಸಿವೆ.

‘ಸಾಂಕ್ರಾಮಿಕದ ಕಾರಣ ಅರ್ಚಕರು ಮತ್ತು ಮಠದ ಅಧಿಕಾರಿಗಳಿಗೆ ಮಾತ್ರ ಕೊರೊನಾ ದೇವಿ ದೇವಾಲಯ ಪ್ರವೇಶಕ್ಕೆ ಅವಕಾಶ ನೀಡಲಾಗಿದ್ದು, ವೈಯಕ್ತಿಕ ಅಂತರವನ್ನು ಕಾಯ್ದುಕೊಳ್ಳಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.


ಕೊಯಮತ್ತೂರಿನ ಇರುಗೂರಿನಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ‘ಕೊರೊನಾ ದೇವಿ’ ದೇವಾಲಯದಲ್ಲಿ ಶುಕ್ರವಾರ ಪೂಜಾ ಕಾರ್ಯ ನೆರವೇರಿಸಿದ ಅರ್ಚಕರು —ಪಿಟಿಐ ಚಿತ್ರ

ಮಿಗ್-21 ವಿಮಾನ ಪತನ; ಪೈಲಟ್ ಸಾವು

ಮೊಗ (ಪಂಜಾಬ್, ಪಿಟಿಐ) : ಪಂಜಾಬ್‌ನ ಮೊಗ ಜಿಲ್ಲೆಯಲ್ಲಿ ಗುರುವಾರ ತಡರಾತ್ರಿ ಮಿಗ್-21 ಬಾಯಿಸನ್ ವಿಮಾನವು ಪತನಗೊಂಡಿದ್ದು, ಭಾರತೀಯ ವಾಯುಪಡೆಯ ಪೈಲಟ್ ಮೃತಪಟ್ಟಿದ್ದಾರೆ.

ಸೂರತ್‌ಗಡದಲ್ಲಿ ಎಂದಿನಂತೆ ತರಬೇತಿ ನಡೆಸುತ್ತಿದ್ದಾಗ ಗುರುವಾರ ತಡರಾತ್ರಿ ವಿಮಾನವು ಮೊಗ ಜಿಲ್ಲೆಯ ಗ್ರಾಮವೊಂದರಲ್ಲಿ ಪತನಗೊಂಡಿದೆ. ಈ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಭಾರತೀಯ ವಾಯುಪಡೆ(ಐಎಎಫ್), ‘ಪಶ್ಚಿಮ ವಲಯದಲ್ಲಿ ಗುರುವಾರ ತಡರಾತ್ರಿ ಐಎಎಫ್‌ನ ಮಿಗ್-21 ಯುದ್ಧವಿಮಾನವು ಪತನಗೊಂಡಿದೆ. ಈ ವೇಳೆ ಪೈಲಟ್ ಸ್ಕ್ವಾಡ್ರನ್ ಲೀಡರ್ ಅಭಿನವ್ ಚೌಧರಿ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಅವರ ಕುಟುಂಬದವರಿಗೆ ಸದಾ ನಮ್ಮ ಬೆಂಬಲ ಇರುತ್ತದೆ’ ಎಂದು ಐಎಎಫ್ ಹೇಳಿದೆ.



ಸುಭಾಷಿತ

ಪ್ರಶಾಂತ ಸಮುದ್ರಗಳು ಎಂದಿಗೂ ಉತ್ತಮ ನಾವಿಕನನ್ನು ರೂಪಿಸುವುದಿಲ್ಲ.

–ಫ್ರ್ಯಾಂಕ್ಲಿನ್ ಡಿ. ರೂಸ್‌ವೆಲ್ಟ್

ಕೋವಿಡ್ ನಿರ್ವಹಣೆ: ಕೇಂದ್ರ, ರಾಜ್ಯಗಳ ನಾಯಕರು ಪ್ರಬುದ್ಧತೆ ತೋರಬೇಕಿದೆ

ಕೋವಿಡ್–19 ಸಾಂಕ್ರಾಮಿಕವು ದೇಶಕ್ಕೆ ಬಹುದೊಡ್ಡ ಸವಾಲು ಒಡ್ಡಿದೆ. ಸಾವು–ನೋವು ಮತ್ತು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಆಗಿರುವ ನಷ್ಟವು ದಿಗಿಲು ಹುಟ್ಟಿಸಿದೆ. ಕೋವಿಡ್ ಪಿಡುಗು ಈ ಶತಮಾನದ ಅತ್ಯಂತ ಗಂಭೀರ ಬಿಕ್ಕಟ್ಟು ಎಂದೇ ಬಿಂಬಿಸಲಾಗುತ್ತಿದೆ. ಅಸಾಧಾರಣವಾದ ಈ ಸಂದರ್ಭವನ್ನು ಎದುರಿಸಲು ಅಸಾಮಾನ್ಯವಾದ ಸಿದ್ಧತೆ, ಕ್ರಮಗಳು, ಮನಸ್ಥಿತಿ ಮತ್ತು ಇಚ್ಛಾಶಕ್ತಿ ಬೇಕು. ನಿತ್ಯದ ರಾಜಕಾರಣವನ್ನು ಬದಿಗಿಟ್ಟು ಹೊಸ ರೀತಿಯಲ್ಲಿ ಚಿಂತಿಸಬೇಕು. ಆದರೆ, ನಮ್ಮ ರಾಜಕೀಯ ನಾಯಕರ ವರ್ತನೆ, ಧೋರಣೆ ಗಮನಿಸಿದರೆ ಇದೆಲ್ಲವೂ ಕಾರ್ಯರೂಪಕ್ಕೆ ಬಂದಿವೆ ಎಂದು ಅನ್ನಿಸುತ್ತಿಲ್ಲ. ಕೋವಿಡ್‌ನಿಂದಾಗಿ ಜನರು ಅನುಭವಿಸುತ್ತಿರುವ ಘೋರ ಸಂಕಷ್ಟವು ಕೂಡ ಈ ಮಾತಿಗೆ ಪುಷ್ಟಿ ನೀಡುವಂತೆಯೇ ಇದೆ. ದೇಶದ ಪರಿಸ್ಥಿತಿಯನ್ನು ತಿಳಿಯುವುದಕ್ಕಾಗಿ, ಮಾರ್ಗದರ್ಶನ ಮಾಡುವುದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ರೀತಿಯ ಸಭೆಗಳನ್ನು ನಡೆಸುತ್ತಿದ್ದಾರೆ. ಪ್ರಾಮಾಣಿಕ ಕಾಳಜಿಯಿಂದ ಗಂಭೀರ ಚಿಂತನ–ಮಂಥನ ನಡೆಯಬೇಕಿದ್ದ ಈ ಸಭೆಗಳೇ ವಿವಾದಕ್ಕೆ ಕಾರಣವಾಗಿರುವುದು ವಿಪರ್ಯಾಸ. ಕೋವಿಡ್ ಪ್ರಕರಣಗಳು ಹೆಚ್ಚು ಇರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜತೆ ಪ್ರಧಾನಿಯವರು ಗುರುವಾರ ಸಭೆ ನಡೆಸಿದ್ದರು. ಈ ಸಭೆಯಲ್ಲಿ 'ಬಿಜೆಪಿಯೇತರ ಪಕ್ಷಗಳ ಆಡಳಿತದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ, ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅದಕ್ಕೂ ಮೊದಲಿನ ಬೇರೊಂದು ಸಭೆಯಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಾವು ಮಾತನಾಡುತ್ತಿರುವ ಸಂದರ್ಭವನ್ನು ನೇರ ಪ್ರಸಾರ ಮಾಡಿದ್ದಾರೆ ಎಂಬುದು ಪ್ರಧಾನಿಯ ಸಿಟ್ಟಿಗೆ ಕಾರಣವಾಗಿತ್ತು. ಕೋವಿಡ್ ಪರಿಸ್ಥಿತಿಯನ್ನು ವಿಚಾರಿಸುವುದಕ್ಕಾಗಿ ದೂರವಾಣಿ ಕರೆ ಮಾಡಿದ್ದ ಪ್ರಧಾನಿಯವರು 'ತಮ್ಮ ಮನದ ಮಾತು ಮಾತ್ರ ಹೇಳಿಕೊಂಡಿದ್ದಾರೆ. ನಮ್ಮ ಮಾತು ಕೇಳಿಲ್ಲ' ಎಂದು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಹೇಳಿದ್ದು ಕೂಡ ವಿವಾದಕ್ಕೆ ಕಾರಣವಾಗಿತ್ತು. ವಿವಿಧ ರಾಜ್ಯಗಳಲ್ಲಿ ಹತ್ತು ಹಲವು ಪಕ್ಷಗಳು, ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟ ಅಧಿಕಾರದಲ್ಲಿದೆ. ಸಿದ್ಧಾಂತಗಳು ಮತ್ತು ರಾಜಕೀಯ ಕಾರಣಗಳಿಗಾಗಿ ಈ ಪಕ್ಷಗಳ ನಾಯಕರ ನಡುವೆ ಭಿನ್ನಮತವೂ ಇದೆ. ಆದರೆ, ಕೋವಿಡ್ ಪಿಡುಗಿನ ಮುಂದೆ ಜನರು ನಿಸ್ಸಹಾಯಕರಾಗಿ, ತತ್ತರಿಸಿ ನಿಂತಿರುವ ಈ ಸಂದರ್ಭದಲ್ಲಿಯೂ ಕ್ಷುಲ್ಲಕ ಭಿನ್ನಮತವನ್ನು ಮೀರುವ ಪ್ರಬುದ್ಧತೆ ತೋರಲು ಚುನಾಯಿತ ನಾಯಕರಿಗೆ ಸಾಧ್ಯವಾಗುತ್ತಿಲ್ಲ ಎಂಬುದೇ ದೊಡ್ಡ ದುರಂತ.



ಕೋವಿಡ್ ಪಿಡುಗು ರೌದ್ರಾವತಾರ ತಾಳಿರುವ ಈ ಸಂದರ್ಭದಲ್ಲಿಯೂ ಕ್ಷುಲ್ಲಕತನ ಮೀರಲಾರದ ನಮ್ಮ ಆಡಳಿತ ವ್ಯವಸ್ಥೆಗೆ, ನಾಯಕರ ಮನಸ್ಥಿತಿಗೆ ತಕ್ಷಣ ಕಾಯಕಲ್ಪ ಆಗಬೇಕಾಗಿದೆ

'ಮಾತನಾಡಲು ಅವಕಾಶ ಕೊಟ್ಟಿಲ್ಲ' ಎಂದು ಸಭೆ ಮುಗಿದ ಮೇಲೆ ಹೇಳಿಕೊಂಡು ತಿರುಗುವುದು ಸರಿಯಾದ ನಡವಳಿಕೆಯೇನೂ ಅಲ್ಲ. ತಮ್ಮ ರಾಜ್ಯದ ಜನರ ಬವಣೆಗಳನ್ನು ಪ್ರಧಾನಿಯ ಮುಂದೆ ಇರಿಸುವುದು ಮುಖ್ಯಮಂತ್ರಿಯ ಕರ್ತವ್ಯ. ಅದಕ್ಕೆ ಅವಕಾಶ ಸಿಗುತ್ತಿಲ್ಲ ಅನ್ನಿಸಿದರೆ, ಅದನ್ನು ಪಡೆದುಕೊಳ್ಳುವುದು ಮುಖ್ಯಮಂತ್ರಿಯ ಹೊಣೆಗಾರಿಕೆ. ಈಗ ನಮ್ಮ ಮುಂದೆ ಇರುವುದು ಜನರ ಜೀವ ರಕ್ಷಣೆಯ ಪ್ರಶ್ನೆ. ಇಲ್ಲಿ ರಾಜಕೀಯ ಪ್ರತಿಷ್ಠೆಗೆ ಅವಕಾಶ ಇಲ್ಲ. ಹಾಗೆಯೇ, ಪ್ರಧಾನಿಯ ನಡೆಯನ್ನು ಪ್ರಶ್ನಿಸಿದ ಮಮತಾ ಅವರ ಮೇಲೆ ಕೇಂದ್ರದ ಆಡಳಿತಾರೂಢ ಪಕ್ಷದ ಮುಖಂಡರು ಮುಗಿಬಿದ್ದಿರುವುದು ಕೂಡ ಸರಿಯಾದ ನಡೆ ಅಲ್ಲ. ಪ್ರಧಾನಿಯಾಗಲೀ, ಮುಖ್ಯಮಂತ್ರಿಯಾಗಲೀ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರೂ ಪ್ರಶ್ನಾತೀತರು ಅಲ್ಲ. ಪ್ರಧಾನಿಯನ್ನು ಪೌರರು ಯಾವುದೇ ವಿಚಾರದಲ್ಲಿ, ಯಾವುದೇ ಸಂದರ್ಭದಲ್ಲಿ ಪ್ರಶ್ನಿಸಲು ಸಾಧ್ಯವಾಗುವಂತಹ ವಾತಾವರಣ ಇದೆ ಎಂದರೆ ಅಲ್ಲಿ ಪ್ರಜಾಪ್ರಭುತ್ವ ಗಟ್ಟಿಯಾಗಿದೆ ಎಂದು ಅರ್ಥ. ಅಂತಹ ಸನ್ನಿವೇಶವು ಪ್ರಜಾಪ್ರಭುತ್ವ ದೇಶದ ನಾಯಕನಿಗೆ ಹೆಮ್ಮೆ ತರುವ ವಿಚಾರ. 'ನಮ್ಮ ದೇಶದ ಮಕ್ಕಳಿಗೆ ಸಿಗಬೇಕಿದ್ದ ಲಸಿಕೆಯನ್ನು ವಿದೇಶಕ್ಕೆ ಏಕೆ ಕಳುಹಿಸಿದಿರಿ ಮೋದೀಜಿ' ಎಂದು ಪ್ರಶ್ನಿಸಿ ಪೋಸ್ಟರ್ ಅಂಟಿಸಿದ್ದ ಜನರನ್ನು ಜೈಲಿಗೆ ಅಟ್ಟಿದ ಪ್ರಕರಣ ರಾಜಧಾನಿ ದೆಹಲಿಯಲ್ಲಿ ಇತ್ತೀಚೆಗಷ್ಟೇ ನಡೆದಿದೆ. ಇದು ನಮ್ಮ ಪ್ರಜಾಪ್ರಭುತ್ವದ ಸದ್ಯದ ಸ್ಥಿತಿ ಹಿಡಿದ ಕನ್ನಡಿ. ಕೋವಿಡ್ ನಿರ್ವಹಣೆಗೆ ಬೇಕಾದ ಸಾಮಗ್ರಿಗಳನ್ನು ರಾಜ್ಯಗಳಿಗೆ ಹಂಚಿಕೆ ಮಾಡಿದ ವಿಚಾರದಲ್ಲಿ ಕೇಂದ್ರ ತಾರತಮ್ಯ ಮಾಡಿದೆ ಎಂಬ ಆರೋಪ ಹತ್ತಾರು ಬಾರಿ ಕೇಳಿ ಬಂದಿದೆ. ಆಮ್ಲಜನಕ ಅಥವಾ ಇತರ ಅಗತ್ಯ ಸಾಮಗ್ರಿಗಳನ್ನು ಕರ್ನಾಟಕವೂ ಸೇರಿ ಹಲವು ರಾಜ್ಯಗಳು ನ್ಯಾಯಾಲಯಕ್ಕೆ ಹೋಗಿ ಪಡೆದುಕೊಳ್ಳಬೇಕಾದ ಸ್ಥಿತಿಯನ್ನು ಕೇಂದ್ರ ಸರ್ಕಾರ ಸೃಷ್ಟಿಸಿದ್ದು ದುರದೃಷ್ಟಕರ. ಜಗತ್ತನ್ನೇ ಬೆಚ್ಚಿ ಬೀಳಿಸಿರುವ ಕೋವಿಡ್ ಪಿಡುಗು ರೌದ್ರಾವತಾರ ತಾಳಿರುವ ಈ ಸಂದರ್ಭದಲ್ಲಿಯೂ ಕ್ಷುಲ್ಲಕತನ ಮೀರಲಾರದ ನಮ್ಮ ಆಡಳಿತ ವ್ಯವಸ್ಥೆಗೆ, ನಾಯಕರ ಮನಃಸ್ಥಿತಿಗೆ ಕಾಯಕಲ್ಪ ಆಗಬೇಕಿರುವುದು ತಕ್ಷಣದ ಅಗತ್ಯ. ಇಲ್ಲದೇ ಹೋದರೆ, ಸಾಂಕ್ರಾಮಿಕಕ್ಕೆ ದೇಶವು ತೆರಬೇಕಾದ ಬೆಲೆ ಇನ್ನಷ್ಟು ದುಬಾರಿಯಾದೀತು.

ದಿನದ ಟ್ವೀಟ್

ವಿನಾಯಿತಿ ಇಲ್ಲ



ನಮಗೆ ಮೂಲ ಸೌಕರ್ಯಗಳೇ ಇಲ್ಲದಿರುವಾಗ, ತೀವ್ರವಾಗಿ ಹರಡಿರುವ ವೈರಸ್ ವಿರುದ್ಧ ಒಂದು ರಾಷ್ಟ್ರವಾಗಿ ನಾವು ಹೇಗೆ ತಾನೇ ಹೋರಾಡಲು ಸಾಧ್ಯ? ಇದು, ದೇಶದಾದ್ಯಂತ ಎಲ್ಲ ಚುನಾಯಿತ ನಾಯಕರು ಉತ್ತರಿಸಬೇಕಾದ ಪ್ರಶ್ನೆ. ಇಲ್ಲಿ ಎಲ್ಲದಕ್ಕೂ ಹೆಣಗಾಡಬೇಕಿದೆ. ಇದೀಗ ಯಾವುದೇ ವಿನಾಯಿತಿ ಇಲ್ಲದೆ ಪ್ರತಿಯೊಬ್ಬರೂ ಧ್ವನಿ ಎತ್ತಬೇಕಿದೆ ಮತ್ತು ಹೋರಾಟ ಮಾಡಬೇಕಿದೆ.

ಪೂಜಾ ಭಟ್, ಚಿತ್ರನಟಿ, ನಿರ್ಮಾಪಕಿ

25 ವರ್ಷಗಳ ಹಿಂದೆ

ಬುಧವಾರ, 22-5-1996

● **ಬೆಂಬಲ ಪ್ರಶ್ನೆ: ಕಾಂಗ್ರೆಸ್ ಕೋಟೆಯಲ್ಲಿ ಬಿರುಕು**

ನವದೆಹಲಿ, ಮೇ 21 (ಪಿಟಿಐ)– ಕೇಂದ್ರದಲ್ಲಿ ಸರ್ಕಾರ ರಚನೆಗೆ ಸಂಯುಕ್ತ ರಂಗಕ್ಕೆ ಕಾಂಗ್ರೆಸ್ ಬೆಂಬಲ ನೀಡುವುದರ ಬಗ್ಗೆ ವಿವಿಧ ರಾಜ್ಯಗಳ ಕಾಂಗ್ರೆಸ್ ಘಟಕಗಳಲ್ಲಿ ಅಸಮಾಧಾನ ಹೊಗೆಯಾಡುತ್ತಿದೆ. ಆಂಧ್ರಪ್ರದೇಶದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷವು ಸಂಯುಕ್ತ ರಂಗಕ್ಕೆ ಕಾಂಗ್ರೆಸ್ ಬೆಂಬಲ ನೀಡುವುದರ ಬಗ್ಗೆ ತೀವ್ರ ಅತೃಪ್ತಿ ವ್ಯಕ್ತಪಡಿಸಿ, ಪಕ್ಷದ ಅಧ್ಯಕ್ಷ ಪಿ.ವಿ.ನರಸಿಂಹ ರಾವ್ ಅವರಿಗೆ ಇಂದು ಬಹಿರಂಗ ಪತ್ರ ಬರೆಯುವುದರೊಂದಿಗೆ ಕಾಂಗ್ರೆಸ್ ಪಕ್ಷದಲ್ಲಿನ ಒಳಗುದಿ ಹೊರಬಿದ್ದಿದೆ.

ಈ ನಡುವೆ, ಸಂಯುಕ್ತ ರಂಗದ ಪ್ರಮುಖ ಪಕ್ಷವಾಗಿರುವ ತೆಲುಗುದೇಶಂನಲ್ಲಿಯೂ ಭಿನ್ನಮತ ಹೊಗೆಯಾಡತೊಡಗಿದೆ. ಸಂಯುಕ್ತ ರಂಗಕ್ಕೆ ಸರ್ಕಾರ ರಚನೆಗೆ ಬೆಂಬಲ ನೀಡಲು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

● **ದೆಹಲಿಯಲ್ಲಿ ಕಾರ್ ಬಾಂಬ್ ಸ್ಫೋಟ: 25 ಜನ ಸಾವು**

ನವದೆಹಲಿ, ಮೇ 21 (ಯುಎನ್ಐ)– ರಾಜಧಾನಿಯ ಜನನಿಬಿಡ ಪ್ರದೇಶವಾದ ದಕ್ಷಿಣ ದೆಹಲಿಯ ಲಜಪತ್ ನಗರ ಮಾರುಕಟ್ಟೆ ಸಂಕೀರ್ಣದಲ್ಲಿ ಇಂದು ಸಂಜೆ ಭಾರಿ ಬಾಂಬೊಂದು ಸ್ಫೋಟಿಸಿ ಕನಿಷ್ಠ 25 ಮಂದಿ ಮೃತಪಟ್ಟು, 25ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 22-5-1971

● **ಅಸ್ಪೃಶ್ಯತೆ ಅಪರಾಧಕ್ಕೆ ತೀವ್ರ ಶಿಕ್ಷೆಗೆ ಸಲಹೆ**

ನವದೆಹಲಿ, ಮೇ 21– ಅಸ್ಪೃಶ್ಯತೆ ಮೊಕದ್ದಮೆಗಳಲ್ಲಿ ಶಿಕ್ಷೆ ಹೆಚ್ಚಿಸಬೇಕೆಂದು ಇಂದು ಇಲ್ಲಿ ಕೇಂದ್ರ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಚಿವ ಸಿದ್ಧಾರ್ಥ ಶಂಕರರಾಯ್ ಅವರ ಅಧ್ಯಕ್ಷತೆಯಲ್ಲಿ ಸೇರಿದ್ದ ರಾಜ್ಯಗಳ ಹಿಂದುಳಿದ ವರ್ಗ ಮತ್ತು ಸಮಾಜ ಕಲ್ಯಾಣ ಸಚಿವರ ಸಮ್ಮೇಳನವು ಅವಿರೋಧವಾಗಿ ಸರ್ಕಾರಕ್ಕೆ ಶಿಫಾರಸು ಮಾಡಿತು.

ಎಸಗಿದ ಅಪರಾಧಗಳ ಸಂಖ್ಯೆಯನ್ನು ಆಧರಿಸಿ ಕನಿಷ್ಠ ಮೂರು ತಿಂಗಳ ಸಜಾ ಜತೆಗೆ 50 ರೂಪಾಯಿಗಳ ದಂಡದಿಂದ ಆರಂಭಿಸಿ ಪರಮಾವಧಿಯಾಗಿ ಎರಡು ವರ್ಷಗಳ ಸಜಾ ಹಾಗೂ 1,000 ರೂಪಾಯಿ ದಂಡ ವಿಧಿಸಬೇಕೆಂದು ಸಮ್ಮೇಳನವು ಸಲಹೆ ಮಾಡಿತು.

● **ಖಜಾನೆ ಮೂಲಕ ನಗದು ಸಂಬಳ: ಯೋಜನೆ ನ್ಯೂನತೆ**

ಬೆಂಗಳೂರು, ಮೇ 21– ಖಾಸಗಿ ಶಾಲೆಗಳ ಶಿಕ್ಷಕರಿಗೆ ಚೆಕ್‌ಗಳ ಬದಲು, ಖಜಾನೆ ಮೂಲಕ ನಗದು ರೂಪದಲ್ಲಿ ಸಂಬಳ ಕೊಡಲು ಸಾಧ್ಯವೇ ಎಂಬ ರಾಜ್ಯಪಾಲರ ಸೂಚನೆಯನ್ನು ಕಳೆದ ಎರಡು ದಿನಗಳಿಂದ ಪರಿಶೀಲಿಸುತ್ತಿರುವ ಶಿಕ್ಷಣ ಇಲಾಖೆ ಅಧಿಕಾರಿಗಳು, ಈ ಸಲಹೆಯೂ ನ್ಯೂನತೆಯಿಂದ ಹೊರತಾಗಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ.

ತ್ಯಾಜ್ಯದ ಅಸಮರ್ಪಕ ನಿರ್ವಹಣೆಯಿಂದ ಸೋಂಕು ಇನ್ನಷ್ಟು ಹಬ್ಬುವ ಅಪಾಯವಿದೆ

ಕೋವಿಡ್ ಕಸ ನಿರ್ವಹಣೆ ಸವಾಲು



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಕೋವಿಡ್ ಸೋಂಕಿತರ ಸಂಖ್ಯೆ ಏರುತ್ತಿರುವಂತೆ ಅದರ ಚಿಕಿತ್ಸೆಗೆ ಸಂಬಂಧಿಸಿದ ತ್ಯಾಜ್ಯದ ಪ್ರಮಾಣವೂ ಏರುತ್ತಿದೆ. ಆಸ್ಪತ್ರೆಗಳ ಕೋವಿಡ್ ತ್ಯಾಜ್ಯವನ್ನು ಆಸ್ಪತ್ರೆಯವರೇ ನಿರ್ವಹಿಸಬೇಕು. ಆದರೆ ಸೋಂಕಿಗೆ ತುತ್ತಾಗಿ ಮನೆಗಳಲ್ಲಿ, ಅಪಾರ್ಟ್‌ಮೆಂಟ್‌ಗಳಲ್ಲಿ ಪ್ರತ್ಯೇಕ ವಾಸದಲ್ಲಿರುವ ರೋಗಿಗಳು ಬಿಸಾಡುವ ಸೋಂಕುಕಾರಿ ಕಸವನ್ನು ಎತ್ತುವವರಾರು? ಅದಕ್ಕೆ ನಿರ್ದಿಷ್ಟ ಮಾರ್ಗಸೂಚಿ ಇಲ್ಲದ್ದರಿಂದ ವಿಲೇವಾರಿ ಸರಿಯಾಗಿ ಆಗದೆ ಊರಿನ ಖಾಲಿ ನಿವೇಶನ, ರಸ್ತೆ ಬದಿ ಮತ್ತು ಚರಂಡಿಗಳಲ್ಲಿ ಶೇಖರಣೆಯಾಗಿ, ರೋಗವನ್ನು ಇನ್ನಷ್ಟು ಹಬ್ಬಿಸುವ ಅಪಾಯ ಎದುರಾಗಿದೆ.

ರೋಗಚಿಕಿತ್ಸಾ ತಾಜ್ಯ, ಪ್ಲಾಸ್ಟಿಕ್, ಗೃಹತ್ಯಾಜ್ಯ, ಸ್ಯಾನಿಟರಿ ನ್ಯಾಪ್‌ಕಿನ್, ಡೈಪರ್, ಕಾಂಡೋಮ್, ಒಣ ಮತ್ತು ಹಸಿ ಕಸವನ್ನು ಪ್ರಾರಂಭದಲ್ಲೇ ಬೇರ್ಪಡಿಸಬೇಕೆಂಬ ನಿರ್ದೇಶನವಿದ್ದರೂ ಯಾರೂ ಅದರ ಕುರಿತು ತಲೆ ಕೆಡಿಸಿಕೊಂಡಿಲ್ಲ. ದೇಶದ ನಗರಗಳಿಂದ ಪ್ರತಿದಿನ ಒಂದೂವರೆ ಲಕ್ಷ ಟನ್ ಘನ ತ್ಯಾಜ್ಯ ಉತ್ಪತ್ತಿಯಾಗುತ್ತದೆ. ಅದರಲ್ಲಿ ಶೇ 25ರಷ್ಟು ಮಾತ್ರ ಸಂಸ್ಕರಣೆಗೊಳ್ಳುತ್ತದೆ. ಉಳಿದದ್ದು ಭೂಭರ್ತಿ ತಾಣ ಸೇರುತ್ತದೆ.

ಅಗಾಧ ಪ್ರಮಾಣದ ಘನ ಕಸವನ್ನು ಸಂಸ್ಕರಿಸಲು ದೇಶದಾದ್ಯಂತ ವೇಸ್ಟ್ ಟು ಎನರ್ಜಿ (ಡಬ್ಲ್ಯುಟಿಇ) ಘಟಕಗಳನ್ನು ಸ್ಥಾಪಿಸುವ ಕೇಂದ್ರ ಸರ್ಕಾರದ ಯೋಜನೆ ಅಂದುಕೊಂಡ ವೇಗದಲ್ಲಿ ಸಾಗುತ್ತಿಲ್ಲ. ಅದಲ್ಲದೆ 2019ರಲ್ಲೇ ಜಾರಿಯಾಗಬೇಕಿದ್ದ, ಉತ್ಪಾದಕರೇ ಕಸ ವಿಲೇವಾರಿ ಮತ್ತು ಸಂಸ್ಕರಣೆ ಮಾಡಬೇಕೆನ್ನುವ ಎಕ್ಸ್‌ಟೆಂಡೆಡ್ ಪ್ರೊಡ್ಯೂಸರ್ ರೆಸ್ಪಾನ್ಸಿಬಿಲಿಟಿಯ (ಉತ್ಪಾದಕನ ಮುಂದುವರಿದ ಜವಾಬ್ದಾರಿ) ಕಾನೂನು ಇನ್ನೂ ಕರಡು ರೂಪದಲ್ಲೇ ಇದೆ.

ಕಸದಿಂದ ವಿದ್ಯುತ್ ಮತ್ತು ತೈಲ ತಯಾರಿಸುವ ಘಟಕಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಶೇ 40ರಷ್ಟು ಸಬ್ಸಿಡಿ ನೀಡುತ್ತಿದೆ. 1987ರಲ್ಲೇ ದೆಹಲಿಯ ತಿಮ್ರಪುರ ಮತ್ತು ದೇಶದ ಇತರ ಭಾಗಗಳಲ್ಲಿ, 130 ಮೆಗಾವಾಟ್ ಶಕ್ತಿ ಉತ್ಪಾದಿಸಬಲ್ಲ 14 ಘಟಕಗಳನ್ನು ಸ್ಥಾಪಿಸಿ ಕೆಲಸ ಶುರು ಮಾಡಿದರೂ ಈಗ ಕೆಲಸ ಮಾಡುತ್ತಿರುವುದು ಕೇವಲ 6. ಸುಡುವಾಗ ಹೊಮ್ಮುವ ಹೊಗೆ ಮತ್ತು ವಾಸನೆ ಅತಿಯಾದ ಮಾಲಿನ್ಯ ಉಂಟುಮಾಡುವುದರಿಂದ, ಯಾವ ಘಟಕವೂ ಯಶಸ್ವಿಯಾಗಿಲ್ಲ.

ಕಸದಲ್ಲಿ ತೇವಾಂಶದ ಜೊತೆ ಮಣ್ಣು ಮತ್ತು ಮರಳಿನ ಅಂಶ ಹೆಚ್ಚಿರುವುದರಿಂದ ಅದು ಸುಲಭವಾಗಿ ಸುಡುವುದಿಲ್ಲ ಮತ್ತು ಅದರಿಂದ ಶಕ್ತಿ ಉತ್ಪಾದನೆಯೂ ಕಡಿಮೆ. ಅಲ್ಲದೆ ಪೂರ್ಣವಾಗಿ ಸುಡಲು ಹೆಚ್ಚಿನ ವಿದ್ಯುತ್ ಮತ್ತು ಇಂಧನ ಎರಡೂ ಬೇಕಾಗುತ್ತವೆ. ಸೋಲಾರ್ ಮತ್ತು ಕಲ್ಲಿದ್ದಲಿನಿಂದ ತಯಾರಾಗುವ ವಿದ್ಯುತ್ ಯುನಿಟ್‌ಗೆ ₹ 3ರಿಂದ 4 ಇದೆ. ತ್ಯಾಜ್ಯದಿಂದ ತಯಾರಾಗುವ ವಿದ್ಯುತ್ತಿನ ಬೆಲೆ ಯುನಿಟ್‌ಗೆ ₹ 7 ಇರುವುದರಿಂದ ದುಬಾರಿ ಬೆಲೆಯ ವಿದ್ಯುತ್ ಅನ್ನು ಕೊಳ್ಳಲು ಯಾವ ವಿದ್ಯುತ್ ಸರಬರಾಜು ಕಂಪನಿಯೂ ತಯಾರಿಲ್ಲ. 2016ರ ಘನ ತ್ಯಾಜ್ಯ ನಿರ್ವಹಣೆ ಕಾನೂನಿನಂತೆ, ಡಬ್ಲ್ಯುಟಿಇ ಘಟಕಗಳು ಇರುವುದು ಹೆಚ್ಚಿನ ಕ್ಯಾಲೋರಿಫಿಕ್ ವ್ಯಾಲ್ಯೂ ಹೊಂದಿರುವ ಬಳಕೆಗೊಂಡ ರಬ್ಬರ್ ಟೈರುಗಳು ಮತ್ತು ಹಲವು ಪದರಗಳುಳ್ಳ ಪ್ಲಾಸ್ಟಿಕ್‌ಗಳನ್ನು ಸುಡಲು ಮಾತ್ರ. ಇದಕ್ಕಿಂತ ನಾಲ್ಕೈದು ಪಟ್ಟು ಹೆಚ್ಚಿರುವ ಮಿಶ್ರ ಕಸವನ್ನು ಸುಡಲು ಅವಕಾಶವೇ ಇಲ್ಲ.

ಈಗ ಕೋವಿಡ್‌ನಿಂದ ಉತ್ಪತ್ತಿಯಾಗುತ್ತಿರುವ ಪಿಪಿಇ ಕಿಟ್, ಮಾಸ್ಕ್, ಕೈಗವಸು, ಸ್ಯಾನಿಟೈಸರ್ ಶೀಷೆ, ಗಂಟಲು ದ್ರವ ಪರೀಕ್ಷೆಯ ಹತ್ತಿ, ಇಂಜೆಕ್ಷನ್ ಬಾಟಲ್, ಗುಳಿಗೆ ಕವರ್‌ಗಳ ಭಾರಿ ಕಸ ನಗರ ಪ್ರದೇಶಗಳಲ್ಲಿ ಎಲ್ಲೆಂದರಲ್ಲಿ ಶೇಖರಣೆಗೊಳ್ಳುತ್ತಿದೆ. ಚಿಂದಿ ಮತ್ತು ಕಸ ಆಯುವವರು ಈ ಕಸವನ್ನೆಲ್ಲ ಸಂಗ್ರಹಿಸಿ, ವಿಂಗಡಿಸಿ ಕಸ ಕೊಳ್ಳುವ ಅಂಗಡಿಗಳಿಗೆ ಮಾರುತ್ತಾರೆ. ಸೋಂಕಿತರು ಬಳಸಿ ಬಿಸಾಡಿದ ವಸ್ತುಗಳನ್ನು ಯಾವುದೇ ಮುನ್ನೆಚ್ಚರಿಕೆ ಕ್ರಮ ಅನುಸರಿಸದೆ ಸಂಗ್ರಹಿಸುವ ಇವರ ಆರೋಗ್ಯ ಅಪಾಯದಲ್ಲಿದೆ. ಸಂಗ್ರಹಿಸಿದ ಕಸವನ್ನು ಅಂದಂದೇ ಕಂಟ್ರಾಕ್ಟರ್‌ಗಳಿಗೆ ನೀಡಿ ಹಣ ಪಡೆಯುವ ಇವರಿಗೆ ಕಸದಿಂದಲೇ ಸೋಂಕು ಹರಡಬಹುದು. ಹೊರದೇಶಗಳಲ್ಲಿ ಇಂತಹವರಿಗೆ ಆರ್ಥಿಕ ಭದ್ರತೆಯ ಜೊತೆ ಆರೋಗ್ಯ ವಿಮೆ ಇದೆ. ಕಸ ಆಯುವಾಗ ಧರಿಸಲು ರಕ್ಷಣಾ ಉಡುಪು ನೀಡುತ್ತಾರೆ. ನಮ್ಮಲ್ಲಿ ಈವರೆಗೆ ಮಾಡಿದ ಕೆಲಸಕ್ಕೇ ಕೂಲಿ ನೀಡಿಲ್ಲ.

ಕೋವಿಡ್ ಕಸವನ್ನು ನಿರ್ವಹಿಸುವವರು ಆನ್‌ಲೈನ್‌ನಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ಹೇಳಿದೆ. ಬರೀ ಅಸಂಘಟಿತ, ಅನಕ್ಷರಸ್ಥ ಸಮುದಾಯವೇ ಈ ಕೆಲಸದಲ್ಲಿ ತೊಡಗಿರುವಾಗ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿ-ಕೊಳ್ಳುವುದಾದರೂ ಹೇಗೆ? ಅವರು ಆನ್‌ಲೈನ್‌ನ ಉಸಾಬರಿಯೇ ಬೇಡ ಎಂದುಕೊಂಡು ಮತ್ತು ಸೋಂಕು ತಗಲುವ ಅಪಾಯ ಜಾಸ್ತಿ ಇರುವುದರಿಂದ ಕೇವಲ ಪೇಪರ್ ಮತ್ತು ಕಾರ್ಡ್‌ಬೋರ್ಡ್ ಕಸ ಸಂಗ್ರಹಿಸಲು ಕಚೇರಿ ಮತ್ತು ಇತರ ವಾಣಿಜ್ಯ ಸಂಕೀರ್ಣಗಳ ಕಡೆ ಹೆಚ್ಚಿನ ಗಮನ ಹರಿಸುತ್ತಿದ್ದಾರೆ. ಇದರಿಂದ ಕೋವಿಡ್ ಕಸ ಹಾಗೆಯೇ ಕೊಳೆಯುತ್ತಿದೆ.

ಒಂದು ಲೆಕ್ಕದ ಪ್ರಕಾರ, ನಮ್ಮಲ್ಲಿ ಪ್ರತೀ ತಿಂಗಳು ನೂರು ಕೋಟಿ ಸ್ಯಾನಿಟರಿ ಪ್ಯಾಡ್‌ಗಳು ಬಳಕೆಯಾಗುತ್ತಿವೆ. ಅವು ಶೇ 90ರಷ್ಟು ಪ್ಲಾಸ್ಟಿಕ್ ಹೊಂದಿರುತ್ತವೆ. ಭಾರತೀಯ ಮಹಿಳೆ ತನ್ನ ಗರ್ಭಧಾರಣೆಯ ಶಕ್ತಿಯ ಅವಧಿಯಲ್ಲಿ ಸರಾಸರಿ 10,000 ಸ್ಯಾನಿಟರಿ ಪ್ಯಾಡ್‌ಗಳನ್ನು ಬಳಸುತ್ತಾಳೆ ಮತ್ತು ಪ್ಯಾಡ್, ಡೈಪರ್‌ಗಳು ನೈಸರ್ಗಿಕವಾಗಿ ಕೊಳೆಯಲು 700ರಿಂದ 800 ವರ್ಷಗಳು ಬೇಕು ಎಂಬ ಅಂಕಿ ಅಂಶ ಲಭ್ಯವಿದೆ. ಡೈಪರ್ ಮತ್ತು ಪ್ಯಾಡ್‌ಗಳಲ್ಲಿ ಅಶುದ್ಧ ರಕ್ತ ಹಾಗೂ ಮಾನವ ದೇಹದ ದ್ರವಗಳಿದ್ದು ಅವು ಕೈಯಿಂದ ಮುಟ್ಟುವವರಿಗೆ ದೊಡ್ಡ ಆರೋಗ್ಯ ಸಮಸ್ಯೆಗಳನ್ನುಂಟು ಮಾಡುತ್ತವೆ. ಅವುಗಳಲ್ಲಿ ಶೇ 90ರಷ್ಟು ಪ್ಲಾಸ್ಟಿಕ್ ಇದ್ದರೂ ಈ ಕಸವನ್ನು ಗೃಹತ್ಯಾಜ್ಯವೆಂದು ವರ್ಗೀಕರಿಸಿರುವುದರಿಂದ, ಅದರ ವಿಲೇವಾರಿಗೂ ನಮಗೂ ಸಂಬಂಧವಿಲ್ಲ ಎಂದು ಹಟ ಹಿಡಿದಿರುವ ಕಂಪನಿಗಳು, ನಗರಸಭೆಗಳಿಗೆ ಯಾವ ಸಹಾಯವನ್ನೂ ಮಾಡುತ್ತಿಲ್ಲ. ಇದು ಕಸ ನಿರ್ವಹಣೆಯ ಸಮಸ್ಯೆ ಮತ್ತಷ್ಟು ಉಲ್ಬಣಿಸಲು ಕಾರಣವಾಗಿದೆ.

ಕಸ ಸಂಗ್ರಹ, ವಿಂಗಡಣೆ ಮತ್ತು ವಿಲೇವಾರಿಯ ಸಂಪೂರ್ಣ ಜವಾಬ್ದಾರಿ ಏನಿದ್ದರೂ ಪುರ- ನಗರಸಭೆಗಳದ್ದು ಎಂಬ ಕಾನೂನು ಇದೆ. ಸದ್ಯದ ಪರಿಸ್ಥಿತಿಯಲ್ಲಿ ಇಡೀ ಊರಿನ ಕಸದ ಜವಾಬ್ದಾರಿ ಹೊರಲು ನಮ್ಮಲ್ಲಿ ಸಿಬ್ಬಂದಿಯಿಲ್ಲ ಎನ್ನುವುದು ಪುರ- ನಗರಸಭೆಗಳ ಅಳಲು. ಕೋವಿಡ್ ಅಲೆ ಸ್ಫೋಟವಾದದ್ದರಿಂದ ಸ್ಯಾನಿಟೈಸೇಶನ್, ಲಾಕ್‌ಡೌನ್, ಸೀಲ್‌ಡೌನ್, ವ್ಯಾಕ್ಸಿನೇಷನ್ ಮಾಡುವಲ್ಲೇ ಎಲ್ಲ ಸಿಬ್ಬಂದಿಯ ಬಳಕೆಯಾಗುತ್ತಿದೆ. ಕಸ ವಿಲೇವಾರಿ ಮಾಡಲು ಸಮಯವೇ ಇಲ್ಲ. ಘನ ತ್ಯಾಜ್ಯ ನಿರ್ವಹಣೆಯಲ್ಲಿ ತಯಾರಕ ಕಂಪನಿಗಳು ನಗರಸಭೆಗಳ ಜೊತೆ ಕೈಜೋಡಿಸಿ ಕೆಲಸ ಮಾಡಬೇಕೆಂಬ ನಿಯಮವಿದೆ. ಎಕ್ಸ್‌ಟೆಂಡೆಡ್ ಪ್ರೊಡ್ಯೂಸರ್ಸ್ ರೆಸ್ಪಾನ್ಸಿಬಿಲಿಟಿಯನ್ನು ಕೇವಲ ಪ್ಲಾಸ್ಟಿಕ್‌ಗೆ ಅನ್ವಯಿಸುವುದು ಸರಿಯಲ್ಲ, ಅದಕ್ಕೆ ತಿದ್ದುಪಡಿಯಾಗಬೇಕು ಎಂದು ಒತ್ತಾಯಿಸಿವೆ. ಡಬ್ಲ್ಯುಟಿಇ ಘಟಕ ಸ್ಥಾಪಿಸಲು ಶೇ 40ರಷ್ಟು ಸಬ್ಸಿಡಿ ಇದ್ದರೂ ಇದು ದುಬಾರಿ ಎಂದು ಲೆಕ್ಕ ಹಾಕುವವರು ಅವುಗಳ ಕುರಿತು ಆಸಕ್ತಿ ತೋರಿಸುತ್ತಿಲ್ಲ.

ಯಾವುದೇ ಕಸವನ್ನು ಸರಿಯಾಗಿ ವಿಲೇವಾರಿ ಮಾಡದಿದ್ದರೆ ಅದರಿಂದ ಹರಡುವ ಗಂಭೀರ ಸ್ವರೂಪದ ಕಾಯಿಲೆಗಳನ್ನು ನಿಯಂತ್ರಿಸಲು ದುಪ್ಪಟ್ಟು ಖರ್ಚಾಗುತ್ತದೆ ಎಂಬುದನ್ನು ಎಲ್ಲರೂ ಮರೆತು ಕೂತಿದ್ದಾರೆ. ಘನ ತ್ಯಾಜ್ಯ ವಿಲೇವಾರಿಯ ಕಥೆ ಇದಾದರೆ, ದ್ರವ ಹಾಗೂ ಅನಿಲ ತ್ಯಾಜ್ಯಗಳ ನಿರ್ವಹಣೆ ಹೇಗೆ ಎಂಬುದು ದೊಡ್ಡ ಪ್ರಶ್ನೆಯಾಗಿದೆ.



ಚುರುಮುರಿ



ವ್ಯಾಕ್ಸಿನ್ ಟೂರ್

● ಸುಧೀಂದ್ರ

ಕಾಫಿ ಬಂದ ಮೇಲೆ ಏಳೋಣವೆಂದು ಇನ್ನೂ ಹಾಸಿಗೆಯಲ್ಲೇ ಹೊರಳಾಡುತ್ತಿದ್ದೆ. ಗೆಳೆಯ ಸೀನನಿಂದ ಫೋನ್ ಬಂತು. ಇತ್ತೀಚೆಗಂತೂ ಯಾರದೇ ಫೋನ್ ಬರಲಿ, ಸುದ್ದಿ ಏನಿರುತ್ತೋ ಅಂತ ನಡುಕದಿಂದಲೇ ತೆಗೆದುಕೊಳ್ಳುವುದು ಅಭ್ಯಾಸವಾಗಿದೆ.

'ಏನಪ್ಪಾ, ಎಲ್ಲಾ ಆರೋಗ್ಯ ತಾನೆ?' ಎಂದೆ.

'ಎಲ್ರೂ ಫಸ್ಟ್ ಕ್ಲಾಸ್ ಕಣೋ. ಅಂದಹಾಗೆ ನಿನ್ನ ಪಾಸ್‌ಪೋರ್ಟ್ ರೆನ್ಯೂ ಮಾಡಿಸಿಕೊಂಡ್ಯಾ' ಎಂಬ ಪ್ರಶ್ನೆ ಅವನಿಂದ ಬಂತು.

'ಬೆಳಗ್ಗೆ ಫೋನ್ ಮಾಡಿ ಇಂಥ ಪ್ರಶ್ನೆನಾ ಕೇಳೋದು? ವ್ಯಾಕ್ಸಿನ್ ಚುಚ್ಚಿಸಿಕೊಳ್ಳೋಕೆ ಸ್ಲಾಟ್ ಸಿಗ್ತಾ ಇಲ್ಲ ಅಂತ ನಾನಿಲ್ಲಿ ಒದ್ದಾಡ್ತಿದ್ದೀನಿ' ಎಂದು ರೇಗಿದೆ.

'ನನ್ನ ಪ್ರಶ್ನೆಗೆ ಮೊದಲು ಉತ್ತರ ಹೇಳು. ಪಾಸ್‌ಪೋರ್ಟ್ ಇದ್ರೆ ಲಗೇಜ್ ರೆಡಿ ಮಾಡ್ಕೊ. 24 ದಿನ ರಷ್ಯಾ ಟೂರ್ ಮಾಡ್ಕೊಂಡು ಬರೋಣ. ಜತೆಗೆ ಎರಡು ಡೋಸ್ ಸ್ಪುಟ್ನಿಕ್ ವ್ಯಾಕ್ಸಿನ್ ಕೂಡಾ ಫ್ರೀಯಾಗಿ ಚುಚ್ಚಿಸ್ಕೋಬಹುದು' ಎಂದೊಡನೆ ಸೀನನ ಮೇಲೆ ಸಿಕ್ಕಾಪಟ್ಟೆ ಕೋಪ ಬಂತು. ಫೋನ್ ಕುಕ್ಕಿದೆ.

'ಯಾರದು ಫೋನ್?' ಅಂತ ಕಾಫಿ ಕಪ್‌ನೊಂದಿಗೆ ಮಡದಿ ಬಂದಳು.

'ತಲೇಹರಟೆ ಸೀನಂದು. ವ್ಯಾಕ್ಸಿನ್‌ಗೋಸ್ಕರ ಲಸಿಕಾ ಕೇಂದ್ರಗಳಿಗೆ ನಾನು ದಿನಾ ಟೂರ್ ಮಾಡ್ತಿದೀನಿ. ಇವನು ವ್ಯಾಕ್ಸಿನ್‌ಗೋಸ್ಕರ ರಷ್ಯಾ ಟೂರ್ ಮಾಡ್ಕೊಂಡು ಬರೋಣ ಅಂತಿದಾನೆ. ಸೀರಿಯಸ್‌ನೆಸ್ ಇಲ್ಲ' ಎನ್ನುತ್ತಾ ಕಾಫಿ ಕಪ್ ತಗೊಂಡೆ.

'ಮದುವೆ ಆದಾಗಿನಿಂದ್ಲೂ ಒಂದು ಫಾರಿನ್ ಟೂರಿಗೆ ಕರ್ಕೊಂಡು ಹೋಗಿ ಅಂತ ನಾನೂ ಕೇಳ್ತಾನೇ ಇದ್ದೀನಿ. ನಮ್ಮ ಮದುವೆಯ ಮೊದಲನೇ ಆ್ಯನಿವರ್ಸರಿ ಫಾರಿನ್ನಲ್ಲಿ ಅಂದ್ರಿ. ಆಮೇಲೆ ಹತ್ತನೇ ಆ್ಯನಿವರ್ಸರಿ ಬೇರೆ ದೇಶದಲ್ಲೇ ಅಂದ್ರಿ. ನಿಮ್ಮನ್ನು ನಂಬ್ಕೊಂಡ್ರೆ ಐವತ್ತನೆಯ ಆ್ಯನಿವರ್ಸರಿಗೂ ನನ್ನಾಸೆ ನೆರವೇರೋಲ್ಲ' ಎಂದು ಗೊಣಗಿದಳು.

'ಇಬ್ಬರ ಪಾಸ್‌ಪೋರ್ಟ್ ಡೀಟೇಲ್ಸ್ ಮೆಸೇಜ್ ಮಾಡಿದೀನಿ, ನಮಗೂ ನಿಮ್ಜೊತೆ ಟೂರಿಗೆ ಟಿಕೆಟ್ ಬುಕ್ ಮಾಡ್ಬಿಡು' ಎಂದು ಸೀನನಿಗೆ ಫೋನ್ ಮಾಡಿದೆ.

ಸಂಗತ

ನಾವು ಯುದ್ಧ ಮಾಡಬೇಕಾಗಿದೆ...!

ಯುದ್ಧೋನ್ಮಾದದ ಈ ಜಗತ್ತಿನಲ್ಲಿ ಶಾಂತಿಯ ಪಾರಿವಾಳ ಎಲ್ಲಿ?

● ಸುಚಿತ್ ಕೋಟ್ಯಾನ್ ಕುರ್ಕಾಲು

ಇಸ್ರೇಲ್-ಪ್ಯಾಲೆಸ್ಟೀನ್ ಕದನ ಇತ್ತೀಚೆಗೆ ಮತ್ತೆ ಶುರುವಾಗುತ್ತಿದ್ದಂತೆ, ನಮ್ಮೊಳಗೆಲ್ಲೋ ಹುದುಗಿದ್ದ ಯುದ್ಧೋನ್ಮಾದ ಮತ್ತೆ ಗರಿಗೆದರಿತು. ಇಡೀ ಜಗತ್ತೇ ಕೊರೊನಾ ವಿರುದ್ಧ ಹೋರಾಡುತ್ತಿರುವಾಗ, ನಮ್ಮ ದೇಶ ಬಹುತೇಕ ಈ ಮಹಾಮಾರಿಗೆ ಮಂಡಿಯೂರಿರುವಾಗ, ಈ ಎರಡು ದೇಶಗಳ ಜಗಳ ಮತ್ತೆ ಚರ್ಚೆಗಳಿಗೆ, ವಾದ ವಿವಾದಗಳಿಗೆ ದಾರಿ ಮಾಡಿಕೊಟ್ಟಿತು.

ಭಾರತದ ದೊಡ್ಡ ಸಂಖ್ಯೆಯ ಜನ 'ಐ ಸ್ಟ್ಯಾಂಡ್ ವಿತ್ ಇಸ್ರೇಲ್' ಎಂದರು. ಸಾಮಾಜಿಕ ಜಾಲತಾಣಗಳ ತುಂಬಾ ನೀಲಿ ಪಟ್ಟಿಯ, ಬಿಳಿ ಬಣ್ಣದ ಇಸ್ರೇಲಿ ಧ್ವಜ ಕಾಣಿಸಿಕೊಂಡಿತು. ಮತ್ತೊಂದೆಡೆ, ನಾವೇನು ಕಮ್ಮಿ ಎಂಬಂತೆ 'ಪ್ಯಾಲೆಸ್ಟೀನಿಯರ ಜೊತೆ ನಾವು' ಎಂದವರ ಸಂಖ್ಯೆಯೂ ನಮ್ಮಲ್ಲಿ ಬಹಳಷ್ಟಿದೆ. ಹೇಳಿ ಕೇಳಿ ಇದು ಹ್ಯಾಷ್‌ಟ್ಯಾಗ್ ಹೋರಾಟಗಾರರ ಕಾಲ. ಧಕ್ಕೆ ಬಂದರಿನ ಮೀನುಏಲಮ್ಮಿನಲ್ಲಿ ಅತೀ ಹೆಚ್ಚು ಕೂಗಿದವನಿಗೆ ಮೀನು ಸಿಕ್ಕಂತೆ, ಸಂಜೆ ಯಾವ ಹ್ಯಾಷ್‌ಟ್ಯಾಗಿಗೆ ಎಷ್ಟು ವೋಟಾಯಿತು, ಯಾವುದು ನಂಬರ್ ವನ್ ಟ್ರೆಂಡಿಂಗು ಎನ್ನುವುದರ ಮೇಲೆ ಆಯಾ ಸಿದ್ಧಾಂತಗಳ, ಆಯಾ ವಿಚಾರಗಳ ಕೈ ಮೇಲಾಗುತ್ತದೆ. ಹಿಂದೆ ಬಿದ್ದವರು ನಾಳೆ ಮತ್ತೆ ಎದ್ದು ಬರುತ್ತಾರೆ.

ನಾವೆಲ್ಲಾ ವಿಚಿತ್ರ ಜನ. 'ಶಾಂತಿಯನ್ನು, ಯುದ್ಧವನ್ನು ಪೂರ್ತಿ ಒಪ್ಪಲಾರದ ಜಗತ್ತು ಇದು' ಎಂದು ಪಿ.ಲಂಕೇಶ್ ಹೇಳಿದ್ದಾರೆ. ಅಹಿಂಸೆಯನ್ನು ಬೋಧಿಸಿದ ಮಣ್ಣಲ್ಲೇ ಹಿಂಸೆ ವಿಜೃಂಭಿಸುವುದನ್ನು ನಾವು ನೋಡಿದ್ದೇವೆ. ಮಾನವನ ಮೂಲ ವ್ಯಕ್ತಿತ್ವದಲ್ಲೇ ಹಿಂಸೆಯ ಛಾಯೆಯಿದೆ. ಜಗಳವನ್ನು, ಹೊಡೆದಾಟವನ್ನು, ಯುದ್ಧವನ್ನು ಮನುಷ್ಯ ಒಳಗೊಳಗೇ ಆನಂದಿಸುತ್ತಾನೆ. ಎಷ್ಟೋ ಸಲ ಶಾಂತಿಯೆಂಬುದು ಅದರ ಮೇಲೆ ಮುಚ್ಚಿಟ್ಟ ಬೂದಿಯಷ್ಟೇ ಆಗಿರುತ್ತದೆ.

ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಕದನಗಳ ಕತೆ ಹೊಸತೇನಲ್ಲ. ಇದೀಗ ಇಸ್ರೇಲ್ ಕದನವಿರಾಮ ಘೋಷಿಸಿದ್ದು, ಗಾಜಾ ನಗರದಲ್ಲಿ ಸಾವಿರಾರು ಜನ ವಿಜಯೋತ್ಸವ ಆಚರಿಸಿದ್ದಾರೆ. ಆದರೂ ಭಾರತ-ಪಾಕಿಸ್ತಾನದಂತೆ ಎಂದೂ ಮುಗಿಯದ ಮೆಗಾ ಸೀರಿಯಲ್ ಇದು. ಎರಡೂ ಹಟಮಾರಿ ರಾಷ್ಟ್ರಗಳು. ತಮ್ಮ ದೇಶಾಭಿಮಾನದ ವಿಚಾರದಲ್ಲಿ ರಾಜಿಯಾಗದ ದೇಶಗಳೂ ಹೌದು. ನಾಳೆ ಯುದ್ಧವಾಗಬಹುದು. ಮರುದಿನ ನಾಯಕರೆಲ್ಲಾ ಸೇರಿ ನಿಲ್ಲಿಸಲೂಬಹುದು. ಅದರಂತೆ, ಈ ಎಂದೂ ಮುಗಿಯದ ಕದನದೊಳಗೆ ಗೆಲುವು ಅನ್ನುವುದುಂಟೇ?

ಮತ್ತೆ ಲಂಕೇಶ್ ನೆನಪಾಗುತ್ತಾರೆ. 'ಇರಾಕ್‌ನಲ್ಲಿ ಯುದ್ಧ ನಡೆಯುವಾಗ, ಇರಾಕ್‌ನ ತಾಯಿಯೊಬ್ಬಳು ಪತ್ರಕರ್ತರಿಗೆ ಹೇಳಿದ್ದು ಮನಕರಗಿಸುತ್ತದೆ; ಬೇಡ... ಯುದ್ಧ ಬೇಡ. ನನ್ನ ಮಗ ಸಾಯುವುದು ಬೇಡ. ಅಮೆರಿಕದ ಮಕ್ಕಳೂ ಸಾಯುವುದು ಬೇಡ... ಯುದ್ಧ ಮಾಡಬೇಡಿ...' ಈ ತಾಯಿಯ ಒಡಲಿನ ನೋವು ಯಾವನಿಗೆ ಕೇಳಿಸುತ್ತದೆ?' ಎಂದು ತಮ್ಮ ಒಂದು ಲೇಖನದಲ್ಲಿ ಲಂಕೇಶ್ ಪ್ರಶ್ನಿಸಿದ್ದಾರೆ. ಉತ್ತರಿಸುವುದು ಸುಲಭವಿಲ್ಲ.

ನಾವೆಲ್ಲಾ ಯುದ್ಧವನ್ನು ಆನಂದಿಸುವ ಮನಃಸ್ಥಿತಿಗೆ ಮುಟ್ಟುತ್ತಿದ್ದೇವೆ. ಹರಿವ ನೆತ್ತರು, ನಿಲ್ಲದ ಕಣ್ಣೀರು ಯಾವ ದೇಶದ್ದೇ ಆಗಿರಲಿ, ಯಾವ ಮಣ್ಣಿನದ್ದೇ ಆಗಿರಲಿ; ಅದು ನಮ್ಮ ನಿಮ್ಮಂತೆಯೇ ಹೊತ್ತು ಕೂಳಿಗಾಗಿ ಪರದಾಡುವ ಜನಸಾಮಾನ್ಯನದ್ದೇ ಆಗಿರುತ್ತದೆ ಎನ್ನುವುದನ್ನು ಮರೆಯುತ್ತೇವೆ. ನಮಗೆ ನಮ್ಮ ಸಿದ್ಧಾಂತಗಳೇ ಸಖ್ಯ, ನಮ್ಮ ಧರ್ಮವೇ ಮುಖ್ಯ, ನಾವು ಹೇಳಿದ್ದೇ ಸತ್ಯ.

ಯುದ್ಧವೊಂದು ನಡೆಯುವುದು ಯಾವುದೋ ನಾಯಕರ ಪ್ರತಿಷ್ಠೆಗಾಗಿ, ಯಾವುದೋ ತುಂಡು ನೆಲದ ಹಕ್ಕಿಗಾಗಿ, ಮೂಲಭೂತವಾದಿಗಳ ಹಟಕ್ಕಾಗಿ... ಆದರೆ ಎಷ್ಟೋ ಸಲ ಇದಕ್ಕೆ ಬಲಿಯಾಗುವುದು ಇವೆಲ್ಲದರಿಂದ ಮಾರುದೂರವಿರುವ ಬಡಪಾಯಿಯಷ್ಟೇ.

'ಸುಡಾನಿ ಫ್ರಮ್ ನೈಜೀರಿಯಾ' ಎಂಬೊಂದು ಮಲಯಾಳಂ ಸಿನಿಮಾದಲ್ಲಿ ನನ್ನನ್ನು ಬಹುವಾಗಿ ಕಾಡಿದ ದೃಶ್ಯವೊಂದಿದೆ. ನೈಜೀರಿಯಾದ ಹುಡುಗ ಆಟದಲ್ಲಿ ಕಾಲು ಮುರಿದುಕೊಂಡು ಕೇರಳದ ಮುಸ್ಲಿಂ ಗೆಳೆಯನ ಮನೆಯಲ್ಲಿ ವಿಶ್ರಾಂತಿಯಲ್ಲಿರುತ್ತಾನೆ. ಅವನ ಅಜ್ಜಿ ನೈಜೀರಿಯಾದಲ್ಲಿ ತೀರಿಕೊಂಡರೆಂದು ತಿಳಿದು ಹೋಗಲಾರದೆ ಹತಾಶನಾಗುತ್ತಾನೆ. ಆಗ ಕೇರಳದ ಗೆಳೆಯನ ತಾಯಿ, ವ್ಯಕ್ತಿ ಸತ್ತ ಮೂರನೇ ದಿನಕ್ಕೆ ನಡೆಸುವ ಪೂಜೆಯನ್ನು ನೈಜೀರಿಯಾದ ಅಜ್ಜಿಯ ಹೆಸರಲ್ಲಿ ಮಾಡಿಸುತ್ತಾಳೆ. ಎಲ್ಲಿಯ ನೈಜೀರಿಯಾ, ಎಲ್ಲಿಯ ಮಲಪ್ಪುರ? ಕ್ರೈಸ್ತನೊಬ್ಬನ ಅಜ್ಜಿ ತೀರಿಕೊಂಡಾಗ, ಗಡಿ-ಭಾಷೆ-ಧರ್ಮವನ್ನೆಲ್ಲಾ ಮೀರಿ ಮುಸಲ್ಮಾನ ತಾಯಿಯೊಬ್ಬಳು ಮಾಡುವ ಪ್ರಾರ್ಥನೆಯ ಅಂಶವೇ ನಮಗಿಂದು ಬೇಕಿರುವುದು.



ಮಹಾತ್ಮ ಗಾಂಧಿಯೂ ತಮ್ಮ ಆತ್ಮಕಥೆಯಲ್ಲಿ ಅದನ್ನೇ ಹೇಳುತ್ತಾರೆ- 'ಶತ್ರುಗಳೆನ್ನಿಸಿಕೊಳ್ಳುವವರು ನೀತಿ ನಿಯಮಗಳಿಲ್ಲದವರೆಂದು ಹೇಗೆ ಗೊತ್ತು? ಅವರು ಶತ್ರುಗಳಾದ ಮಾತ್ರಕ್ಕೆ ಅವರು ಮಾಡುತ್ತಿರುವುದು ತಪ್ಪು ಎಂದು ಹೇಳಬಹುದೇ? ದೇವರನ್ನು ಪ್ರಾರ್ಥಿಸುವಾಗ ನಾವು ನ್ಯಾಯವಾದುದನ್ನು ಮಾತ್ರ ಕೇಳಬಹುದು'.

ಯುದ್ಧವಿಲ್ಲದ ನಾಡಿನ ಕಲ್ಪನೆ ಯುಟೋಪಿಯನ್ ಥಿಯರಿ (ಆದರ್ಶವಾದ) ಆಗಿರಬಹುದು. ಆದರೆ ಆ ದಿಸೆಯಲ್ಲಿ ಒಂಚೂರಾದರೂ ಪ್ರಯತ್ನಿಸಿ ನೋಡೋಣ.

ಹಾಗೂ ನಾವು ಯುದ್ಧ ಮಾಡೋಣ, ನಮ್ಮನ್ನು ಇಂದಿಗೂ ಜಾತಿ-ಧರ್ಮದ ಹೆಸರಿನಲ್ಲಿ ಆಟವಾಡಿಸುತ್ತಾ ತಮ್ಮ ಸಾಮ್ರಾಜ್ಯ ಕಟ್ಟುತ್ತಿರುವವರ ವಿರುದ್ಧ. ನಾವು ಯುದ್ಧ ಮಾಡೋಣ, ಮತಾಂಧತೆಯನ್ನು ತುಂಬಿಕೊಂಡು, ಎಂದೋ ಸಿಗುವ ಸ್ವರ್ಗದ ಕಲ್ಪನೆಯಲ್ಲಿ ಭೂಮಿಯನ್ನು ನರಕವಾಗಿಸುವವರ ವಿರುದ್ಧ. ನಾವು ಯುದ್ಧ ಮಾಡೋಣ, ಶಾಂತಿ-ಸಹಬಾಳ್ವೆಯನ್ನು ಕದಡಲೆತ್ನಿಸುವ ಪ್ರತಿಯೊಂದು ವಿಚಾರಧಾರೆಯ ವಿರುದ್ಧ.

ವಾಚಕರ ವಾಣಿ

ಲಸಿಕೆಗೂ ಸಂಚಾರಿ ಬಸ್ ಬರುವಂತಾದರೆ...

ರಾಜ್ಯ ರಸ್ತೆ ಸಾರಿಗೆ ನಿಗಮದ 13 ಬಸ್‌ಗಳನ್ನು ಸಂಚಾರಿ ಐಸಿಯು ಆಸ್ಪತ್ರೆಗಳನ್ನಾಗಿ ಪರಿವರ್ತಿಸಲು ಸರ್ಕಾರ ನಿರ್ಧರಿಸಿದ್ದು ಮೆಚ್ಚುಗೆಯ ಕೆಲಸವೇ ಆಗಿದೆ. ಅದೇ ರೀತಿ ಎರಡನೇ ಲಸಿಕೆ ಪಡೆಯಲೆಂದು ಕಾದಿರುವ ಹಿರಿಯ ನಾಗರಿಕರಿಗೆ ಲಸಿಕೆ ನೀಡಲು ಸಹ ಹೀಗೆ ಕೆಲವೊಂದು ಬಸ್‌ಗಳನ್ನು ನಗರಗಳಲ್ಲಿ ಓಡಾಡಿಸುವ ವ್ಯವಸ್ಥೆ ಮಾಡಿದರೆ ಅದೂ ಶ್ಲಾಘನೀಯ ಕೆಲಸವೇ ಆಗುತ್ತದೆ.

ಎರಡನೆಯ ಲಸಿಕೆಗಾಗಿ ಕಾದಿರುವವರ ಫೋನ್ ನಂಬರ್ ಮತ್ತಿತರ ವಿವರಗಳು ಹೇಗಿದ್ದರೂ ಸರ್ಕಾರದ ಬಳಿ ಈಗಾಗಲೇ ಇವೆ. ಒಂದು ದಿನ ಮುಂಚಿತವಾಗಿ ಅವರವರ ಬಡಾವಣೆಗಳ ಇಂಥ ಸ್ಥಳಗಳಿಗೆ ಬಸ್ ಬರಲಿದೆ ಎಂಬ ಸಂದೇಶವನ್ನು ಅವರಿಗೆ ರವಾನಿಸುವ ವ್ಯವಸ್ಥೆಯಾಗಬೇಕು. ವಯಸ್ಸಾದ ನಮ್ಮಂಥವರು ದೂರದ ಪ್ರಾಥಮಿಕ ಆರೋಗ್ಯ ಕೇಂದ್ರದವರೆಗೆ ಕಾಲ್ನಡಿಗೆಯಲ್ಲಿ ಹೋಗಿ, ಹಗಲಿಡೀ ಅಲ್ಲಿ ಲಸಿಕೆಗಾಗಿ ಸರದಿಯಲ್ಲಿ ಕಾದು ಕೂತು ಸುಸ್ತಾಗಿ ನಡೆದು ಮನೆ ಸೇರುವ ಪ್ರಸಂಗಗಳನ್ನು ಇದು ತಪ್ಪಿಸಬಹುದು.

ಎನ್.ಕೆ.ಗೋವಿಂದಪ್ಪ, ಬೆಂಗಳೂರು

ಹಾಲಿನ ದರ ಕಡಿತ: ಹೈನೋದ್ಯಮಕ್ಕೆ ಬರೆ

ಬಡವರು, ಶ್ರಮಿಕರು, ಬೀದಿಬದಿ ವ್ಯಾಪಾರಿಗಳು, ಕಟ್ಟಡ ಕಾರ್ಮಿಕರಂತಹ ಹಲವಾರು ಅವಲಂಬಿತ ಕಸುಬುದಾರರಿಗೆ ರಾಜ್ಯ ಸರ್ಕಾರ ಒಂದೆಡೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿದೆ. ಆದರೆ ಇದೇ ಸಂದರ್ಭದಲ್ಲಿ ರೈತರಿಂದ ಖರೀದಿ ಮಾಡುವ ಹಾಲಿನ ದರವನ್ನು ಕಡಿತಗೊಳಿಸಲು ಹಾಲು ಒಕ್ಕೂಟಗಳು ಮುಂದಾಗಿವೆ. ಇದು ನಿಜವಾಗಿಯೂ ಹೈನೋದ್ಯಮಕ್ಕೆ ಬರೆ ಎಳೆದಂತಹ ಕ್ರಮವಾಗಿದೆ.

ಹಲವು ತಿಂಗಳುಗಳಿಂದ ಹಾಲಿನ ಮೇಲಿನ ಪ್ರೋತ್ಸಾಹಧನವನ್ನು ಸಹ ಸರ್ಕಾರ ರೈತರ ಖಾತೆಗೆ ಜಮಾ ಮಾಡಿಲ್ಲ. ಇದರಿಂದ ಪಶುಗಳಿಗೆ ತಿಂಡಿ, ಮೇವು ಕೊಂಡುಕೊಳ್ಳಲು ರೈತರಿಗೆ ಬಹಳ ಕಷ್ಟವಾಗಿದೆ. ಹಾಲು ಒಕ್ಕೂಟಗಳು ಹಾಲಿನ ದರ ಕಡಿತ ಮಾಡುವ ನಿರ್ಧಾರವನ್ನು ವಾಪಸ್ ಪಡೆದು, ರೈತ ಕುಟುಂಬಗಳಿಗೆ ನೆರವಾಗುವಂತೆ ಸರ್ಕಾರ ನೋಡಿಕೊಳ್ಳಬೇಕು.

ಲಕ್ಷ್ಮಿ ಕಿಶೋರ್ ಅರಸ್, ಕೂಡ್ಲೂರು

ಮಕ್ಕಳನ್ನು ರಕ್ಷಿಸಲು ಕಾರ್ಯಯೋಜನೆಗಳೇನು?

ತಕ್ಕಷ್ಟು ವೈದ್ಯಕೀಯ ಸಿದ್ಧತೆ ಮಾಡಿಕೊಳ್ಳದೆ, ಕೋವಿಡ್ ಎರಡೂ ಅಲೆಗಳ ಹೊಡೆತಕ್ಕೆ ಸಿಕ್ಕಿ ಈಗಾಗಲೇ ನಮ್ಮ ರಾಜ್ಯದಲ್ಲಿಯೇ ಸಾವಿರಾರು ಜೀವಗಳು ಬಲಿಯಾಗಿವೆ. ಕೋವಿಡ್ ಅಟ್ಟಹಾಸ ಇನ್ನೂ ಸಾಗಿಯೇ ಇದೆ. ಆದರೆ ಇದಿಷ್ಟೇ ಸಾಲದೆಂಬಂತೆ, ಬರಲಿರುವ ಮೂರನೆಯ ಅಲೆಯು ಮಕ್ಕಳನ್ನು ತೀವ್ರವಾಗಿ ಬಾಧಿಸುತ್ತದೆಂದು ತಜ್ಞರು ಮತ್ತೆ ಮತ್ತೆ ಎಚ್ಚರಿಸುತ್ತಿದ್ದಾರೆ. ಅದರಲ್ಲೂ ಅಪೌಷ್ಟಿಕತೆ ಸಮಸ್ಯೆ ಹೆಚ್ಚಾಗಿರುವ ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇರುವುದರಿಂದ, ಅವರಿಗೆ ಸೋಂಕು ತಗಲುವ, ಅಪಾಯಕಾರಿ ಹಂತವನ್ನು ತಲುಪುವ ಸಾಧ್ಯತೆ ಹೆಚ್ಚೇ ಇದೆ. ರಾಜ್ಯದಲ್ಲಿ 4.43 ಲಕ್ಷ ಮಕ್ಕಳು ಅಪೌಷ್ಟಿಕತೆಯ ಸುಳಿಯಲ್ಲಿರುವ ಸುದ್ದಿ (ಪ್ರ.ವಾ., ಮೇ 21) ತೀವ್ರ ಆತಂಕಕ್ಕೆ ಕಾರಣವಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು 'ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುತ್ತಿರುವುದರಿಂದ, ಅಪೌಷ್ಟಿಕ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ' ಎಂದು ನೀಡಿರುವ ಹೇಳಿಕೆ ಖಂಡಿತ ಸಮಾಧಾನಕರವಾಗಿಲ್ಲ.

ನಮ್ಮ ಪ್ರತಿಯೊಂದು ಮಗುವಿನ ಜೀವವೂ ಅಮೂಲ್ಯವಾದುದು. ಕೋವಿಡ್ ಕಂಟಕದ ಈ ಹೊತ್ತಿನಲ್ಲಿ ಸರ್ಕಾರವು ಪ್ರತೀ ಮಗುವನ್ನು ಸೋಂಕಿನಿಂದ ರಕ್ಷಿಸಲು ತಕ್ಷಣವೇ ಯುದ್ಧೋಪಾದಿಯಲ್ಲಿ ತಯಾರಿ ಮಾಡಿಕೊಳ್ಳಲೇಬೇಕಿದೆ. ಮಕ್ಕಳ ಸಂರಕ್ಷಣೆ ಮತ್ತು ಸುರಕ್ಷತೆಗಾಗಿ ತುರ್ತಾಗಿ ವಿಶೇಷ ಯೋಜನೆಗಳನ್ನು ರೂಪಿಸಿ, ಪ್ರತಿಯೊಂದು ಮಗುವನ್ನೂ ಅಪೌಷ್ಟಿಕತೆಯಿಂದ ಹೊರತರಲು, ಮಕ್ಕಳ ಆರೋಗ್ಯ ರಕ್ಷಣೆಗೆ ಬೇಕಾದ ತುರ್ತು ವೈದ್ಯಕೀಯ ಸೌಲಭ್ಯಗಳನ್ನು ಸಿದ್ಧಪಡಿಸಿಟ್ಟುಕೊಳ್ಳಲು, ಪ್ರತೀ ಮಗುವಿಗೆ ಲಸಿಕೆ ನೀಡುವ ಮೂಲಕ ಸೋಂಕಿಗೆ ತಡೆ ಹಾಕಲು ಸಮರ್ಪಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ತಕ್ಷಣವೇ ಇದಕ್ಕಾಗಿ ತಜ್ಞರ ಸಮಿತಿ ರಚಿಸಿ, ಅವರ ಸಲಹೆ ಪಡೆದು, ಸೋಂಕಿನಿಂದ ಪ್ರತಿಯೊಂದು ಮಗುವನ್ನೂ ಕಾಪಾಡಲು ವಿಕೇಂದ್ರೀಕೃತ ಕಾರ್ಯವಿಧಾನವನ್ನು ರೂಪಿಸಬೇಕು. ಅದನ್ನು ಸಾರ್ವಜನಿಕರಿಗೆ ಖಾತರಿಗೊಳಿಸಬೇಕು. ಈ ಸಂದರ್ಭದಲ್ಲಿ ಮಕ್ಕಳ ಆರೋಗ್ಯದ ಬಗೆಗೆ ಸರ್ಕಾರ ತೋರುವ ಯಾವುದೇ ನಿರ್ಲಕ್ಷ್ಯವೂ ಖಂಡಿತ ಕ್ಷಮೆಗೆ ಅರ್ಹವಾಗಿರುವುದಿಲ್ಲ.

ರೂಪ ಹಾಸನ, ಹಾಸನ

ವಿರೋಧ ಪಕ್ಷವನ್ನು ಹತ್ತಿಕ್ಕುವ ಕ್ರಮ

ಪ್ರಜಾಪ್ರಭುತ್ವದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಸಮನಾದ ಹುದ್ದೆ ವಿರೋಧ ಪಕ್ಷದ ನಾಯಕನ ಸ್ಥಾನ. ನೇರವಾಗಿ ಸರ್ಕಾರದಲ್ಲಿ ಭಾಗಿಯಾಗಿರದಿದ್ದರೂ ಆಳುವ ಸರ್ಕಾರದ ಎಂಜಿನ್ ಮತ್ತು ಬೋಗಿಗಳು ಹಳಿ ತಪ್ಪದಂತೆ ಸದಾ ಎಚ್ಚರಿಸುವ ಜವಾಬ್ದಾರಿ ವಿರೋಧ ಪಕ್ಷದ ನಾಯಕರಿಗೆ ಇರುತ್ತದೆ. ಅವರು ಕೇವಲ ಒಂದು ಪಕ್ಷದ ಆಣತಿಯಂತೆ ಕೆಲಸ ಮಾಡುವುದಿಲ್ಲ. ರಾಜ್ಯದ ಎಲ್ಲಾ ಜನರ ಪ್ರತಿನಿಧಿಯಾಗಿ ಕೆಲಸ ಮಾಡುವ ಗುರುತರವಾದ ಹೊಣೆಗಾರಿಕೆ ಅವರ ಮೇಲಿರುತ್ತದೆ. ಸಾರ್ವಜನಿಕರಿಂದ ತೆರಿಗೆಯ ರೂಪದಲ್ಲಿ ಸಂಗ್ರಹಿಸಲಾದ ಹಣವನ್ನು ಆಳುವ ಸರ್ಕಾರ ದುರ್ಬಳಕೆ ಮಾಡುವುದನ್ನು ತಪ್ಪಿಸಲು ಸದಾ ಕಣ್ಗಾವಲಿಗಾಗಿ ಸೃಷ್ಟಿಸಲಾದ ಹುದ್ದೆ ಅದು. ಸರ್ಕಾರದ ಖರ್ಚು-ವೆಚ್ಚದ ಬಗ್ಗೆ ಶ್ವೇತಪತ್ರ ಹೊರಡಿಸಲು ಒತ್ತಾಯಿಸುವ ಹಕ್ಕು ಅವರಿಗಿದೆ.

ವಸ್ತುಸ್ಥಿತಿ ಹೀಗಿರುವಾಗ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೊ ಸಂವಾದ ನಡೆಸುವುದಕ್ಕೆ ಸರ್ಕಾರ ಅವಕಾಶ ನೀಡದಿರುವುದು, ಆಡಳಿತ ಪಕ್ಷವೊಂದು ವಿರೋಧ ಪಕ್ಷವನ್ನು ಹತ್ತಿಕ್ಕುವ ಕ್ರಮವಾಗಿದೆ. ಕೊರೊನಾ ಸಾಂಕ್ರಾಮಿಕ ರೋಗದಂತಹ ಸಂಕಷ್ಟದಲ್ಲಿ ಅಧಿಕಾರಿಗಳೊಂದಿಗೆ ನೇರವಾಗಿ ಮಾತನಾಡಿ, ವಿವಿಧ ಜಿಲ್ಲೆಗಳ ಸ್ಥಿತಿಗತಿ ಅರಿಯುವ ಅವಕಾಶ ತಪ್ಪಿಸಿದ್ದಾರೆ.


ಗಣಪತಿ ನಾಯ್ಕ್, ಕಾನಗೋಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ದೇಶದ ಪ್ರಧಾನಿಯನ್ನು ಯಾರೂ ಪ್ರಶ್ನಿಸುವಂತಿಲ್ಲವೇ?

ಪ್ರಶ್ನಾತೀತ ಪ್ರಧಾನಿ ದೇಶದ ಹಿತಕ್ಕೆ ಹಾನಿ

• ಕೃಷ್ಣ ಬೈರೇಗೌಡ



ಪ್ರಧಾನಿ ಪ್ರಶ್ನಾತೀತರೂ ಅಲ್ಲ, ಹಾಗೆ ಆಗಲೂಬಾರದು. ಅದರಿಂದ ಜನಹಿತ ಮತ್ತು ಪ್ರಜಾಪ್ರಭುತ್ವ ಕ್ಷೀಣಿಸುತ್ತದೆ. ಅಂಥ ಸರ್ವಾಧಿಕಾರ ಬೆಳೆಯುತ್ತದೆ. ಅದು ದೇಶಕ್ಕೆ ಹಾನಿ. ಪ್ರಧಾನಿಯನ್ನು ಅಥವಾ ಸರ್ಕಾರವನ್ನು ಪ್ರಶ್ನಿಸುವುದು ದೇಶದ ಬಗ್ಗೆ ನೈಜ ಕಾಳಜಿ ಹೊಂದಿರುವ ಭಾರತೀಯನ ಹಕ್ಕು ಹಾಗೂ ಕರ್ತವ್ಯ. ಇದರಿಂದ ದೇಶ ಮತ್ತಷ್ಟು ಬಲಿಷ್ಠ, ಸದೃಢ ಅಭಿವೃದ್ಧಿಯನ್ನು ಸಾಧಿಸಬಹುದು

ನಿಜ, 'ಪ್ರಜಾಪ್ರಭುತ್ವ ಒಂದು ಕೆಟ್ಟ ಆಡಳಿತ ವ್ಯವಸ್ಥೆ. ಆದರೆ ಅದು ಇಲ್ಲಿಯವರೆಗೂ ಕಂಡಂತಹ ಇತರ ಎಲ್ಲಾ ಆಡಳಿತ ವ್ಯವಸ್ಥೆಗಳಿಗಿಂತ ಉತ್ತಮವಾದ ವ್ಯವಸ್ಥೆ' ಎಂಬುದು ಎಲ್ಲಾ ಅನುಭವಸ್ಥರ ಮಾತು.

ಪ್ರಜಾಪ್ರಭುತ್ವ ಎಂದರೆ ಐದು ವರ್ಷಕ್ಕೆ ಒಮ್ಮೆ ಮತ ಚಲಾಯಿಸುವುದಷ್ಟೇ ಅಲ್ಲ. ಚುನಾಯಿತ ಸರ್ಕಾರದ ನೀತಿ, ನಿಯಮ ಕಾರ್ಯವೈಖರಿಗಳನ್ನು ಮಾಧ್ಯಮ, ವಿಪಕ್ಷಗಳು, ಜನರು ನಿರ್ಭೀತಿಯಿಂದ ವಿಶ್ಲೇಷಣೆ ಮಾಡಿ, ಅಗತ್ಯವಾದಾಗ ಟೀಕೆ, ಸಲಹೆ ನೀಡಿ ತಪ್ಪುಗಳನ್ನು ತಿದ್ದಿದರೆ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆಯು ಜನರಿಗೆ ಒಳ್ಳೆ ಆಡಳಿತ ನೀಡುತ್ತದೆ. ಚುನಾವಣೆ ಮೂಲಕ ಆಯ್ಕೆ ಆದರೆ ಅಷ್ಟೇ ಸಾಕು ಎಂಬುದು ಸರಿಯಲ್ಲ– ಹಿಟ್ಲರ್ ಸಹ ಚುನಾವಣೆಯಲ್ಲಿ ಆಯ್ಕೆ ಆಗಿದ್ದರು ಎಂಬುದನ್ನು ನಾವು ನೆನಪಿನಲ್ಲಿ ಇರಿಸಿಕೊಳ್ಳಬೇಕು. ಅಧಿಕಾರಕ್ಕೆ ಇತಿಮಿತಿ ಇಲ್ಲದಿದ್ದರೆ, ಸರ್ವಾಧಿಕಾರ ಬೆಳೆಯುತ್ತದೆ, ದೇಶ ಅವನತಿ ಕಾಣುತ್ತದೆ.

ಹಾಗಾಗಿಯೇ ನಮ್ಮ ಸಂವಿಧಾನವು ಎಲ್ಲ ಭಾರತೀಯರಿಗೆ ಮೂಲಭೂತ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿದೆ.

'ಲಸಿಕೆ ರಫ್ತು ಮಾಡಿದ್ದು ಏಕೆ?' ಎಂದು ಭಿತ್ತಿಪತ್ರ ಹಾಕಿದ್ದಕ್ಕೆ 25 ಭಾರತೀಯರ ಮೇಲೆ 2-3 ತರಹದ ಪ್ರಕರಣಗಳನ್ನು ದಾಖಲಿಸಿ ಬಂಧಿಸಲಾಯಿತು. ಈ ಪ್ರಕರಣವನ್ನು ನೋಡಿದರೆ, ನಾವು ಪ್ರಜಾಪ್ರಭುತ್ವ ಭಾರತದಲ್ಲಿದ್ದೇವೆಯೇ? ಸಂವಿಧಾನಾತ್ಮಕ, ಕಾನೂನು ಆಧಾರಿತ ಆಡಳಿತವೇ ಇದು ಎಂಬ ಪ್ರಶ್ನೆ ಮೂಡುತ್ತದೆ. ಆದರೆ, ಈ ಪ್ರಶ್ನೆಗೆ, 'ಭಿತ್ತಿಪತ್ರ ಹಾಕಿದವರು ದೆಹಲಿಯ ಅಂದ ಕೆಡಿಸಿದ್ದಾರೆ. ಅದಕ್ಕೆ ಸಂಬಂಧಿಸಿದ ಕಾನೂನು ಮತ್ತು ಲಾಕ್‌ಡೌನ್‌ನಲ್ಲಿ ಓಡಾಡಬಾರದೆಂಬ ನಿಯಮವನ್ನು ಉಲ್ಲಂಘಿಸಿದ್ದಾರೆ' ಎಂಬುದು ಪೊಲೀಸರ ಸಮರ್ಥನೆ. ಇದಕ್ಕಿಂತ ಹಾಸ್ಯಾಸ್ಪದ ನೆಪ ಮತ್ತೊಂದಿರಲಿಕ್ಕಿಲ್ಲ. ಸಿನಿಮಾ, ರಾಜಕೀಯ ಮತ್ತು ನಾನಾ ವಾಣಿಜ್ಯ ವಹಿವಾಟಿಗೆ ಸಂಬಂಧಿಸಿದ ಕೋಟ್ಯಂತರ ಭಿತ್ತಿಪತ್ರಗಳು ದೆಹಲಿಯ ಗೋಡೆಗಳಲ್ಲಿ ಇವೆ. ಎಷ್ಟು ಕೇಸುಗಳು ದಾಖಲಾಗಿವೆ? ದೇಶವೇ ಕೋವಿಡ್ ಮಹಾಮಾರಿಯಿಂದ ಪರಿತಪಿಸುತ್ತಿರುವಾಗ, ಪೊಲೀಸರಿಗೆ ಪೋಸ್ಟರ್ ಹಚ್ಚಿದವರ ಮೇಲೆ ಕೇಸು ಹಾಕುವುದಕ್ಕಿಂತ ಉಪಯುಕ್ತ ಕೆಲಸ ಬೇರೆ ಏನೂ ಇಲ್ಲವೆ?

ನಿಜವಾದ ಕಾರಣ: ಸರ್ಕಾರದ ಲಸಿಕೆ ನೀತಿ ಮತ್ತು ಲಸಿಕೆ ಕೊರತೆ ವಿಷಯ ಪ್ರಶ್ನಿಸಿದ್ದನ್ನು ಪ್ರಧಾನಿ ಮತ್ತು ಅವರ ಗೃಹ ಸಚಿವರಿಗೆ ಸಹಿಸಲಾಗಿಲ್ಲ. ಹಾಗಾಗಿಯೇ ಇದು ಘೋರಾಪರಾಧ. ಅದಕ್ಕಾಗಿ ಒಬ್ಬೊಬ್ಬರ ಮೇಲೂ 2-3 ತರಹದ ಕೇಸು. ಪ್ರಧಾನಿ ಅಥವಾ ಸರ್ಕಾರದ ನೀತಿಗಳನ್ನು ಯಾರೇ ಪ್ರಶ್ನಿಸಿದರೂ ಅವರನ್ನು ಅಪರಾಧಿಗಳು, ದೇಶದ್ರೋಹಿಗಳು ಅಥವಾ ಭಯೋತ್ಪಾದಕರು ಎಂದು ಬಿಂಬಿಸಿ, ತರಹೇವಾರಿ ಕೇಸುಗಳನ್ನು ಹಾಕುವ ಪರಿಪಾಟ 2014 ರಿಂದಲೂ (ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ದಿನಗಳಿಂದ) ನಡೆದಿದೆ. ನೈಜ ಪ್ರಶ್ನೆಗಳಿಗೆ ದೇಶ ಭಕ್ತಿಯ ಟೀಕೆ ಎಂಬ ಹಣೆಪಟ್ಟಿ ಕಟ್ಟಿದರೆ, ಆ ಪ್ರಶ್ನೆಗಳಿಗೆ ಉತ್ತರಿಸುವ ಜವಾಬ್ದಾರಿಯಿಂದ ಸಲೀಸಾಗಿ ತಪ್ಪಿಸಿಕೊಳ್ಳಬಹುದು. ಜೊತೆಗೆ ಪ್ರಶ್ನೆ ಕೇಳಿದ ಪ್ರಜ್ಞಾವಂತ ಪ್ರಜೆಯನ್ನು ದೇಶದ್ರೋಹಿ ಎಂದು ಬ್ರ್ಯಾಂಡ್ ಮಾಡಿ, ಅವರನ್ನು ಒಂದಷ್ಟು ಬೈದರೆ, ಇನ್ನೊಂದಷ್ಟು ವೋಟು ಗಿಟ್ಟಿಸಬಹುದು. ಇದರಿಂದ ದುಪ್ಪಟ್ಟು ಲಾಭ.

ಬಿಜೆಪಿ, ಆ ಪಕ್ಷದ ನಿಷ್ಠಾವಂತರ ಪಡೆ, ಆಯ್ದ 'ಮಾಧ್ಯಮ'ಗಳು, ಸಾಮಾಜಿಕ ಜಾಲತಾಣಗಳ ಪರಿಣಾಮಕಾರಿ ಬಳಕೆಯ ಜತೆಗೆ ಸರ್ಕಾರಿ ಸಂಸ್ಥೆಗಳ ದುರುಪಯೋಗದ ಮೂಲಕ ಈ ಕೆಲಸವನ್ನು ಕಳೆದ ಏಳು ವರ್ಷಗಳಿಂದ ಮಾಡುತ್ತಿವೆ. ದೆಹಲಿಯಲ್ಲಿ ಇತ್ತೀಚೆಗೆ ದಾಖಲಾದ ಪ್ರಕರಣ ಒಂದು ಉದಾಹರಣೆ ಅಷ್ಟೇ. ಕಳೆದ ಏಳು ವರ್ಷಗಳಲ್ಲಿ ಇವರನ್ನು ಪ್ರಶ್ನಿಸಿದವರ ಮೇಲೆ ದೇಶದ್ರೋಹ, ಭಯೋತ್ಪಾದನೆ ತಡೆ, ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ. ಹೀಗೆ ಸಾವಿರಾರು ಭಾರತೀಯರ ಮೇಲೆ ನಾನಾ ಕಾಯ್ದೆ ಅಡಿ ಹಾಕಿರುವ ಕೇಸುಗಳನ್ನು ಲೆಕ್ಕ ಹಾಕಲಿಕ್ಕೆ ಸಾಧ್ಯವಿಲ್ಲ. ಅತ್ಯಂತ ಗಂಭೀರವಾದ ದೇಶದ್ರೋಹ ಪ್ರಕರಣಗಳದ್ದು ಮಾತ್ರ ಅಂಕಿ ಅಂಶ ಕಲೆ ಹಾಕಲಾಗಿದೆ. 2010ರಿಂದ 2020ರ ನಡುವೆ ದಾಖಲಾಗಿರುವ ದೇಶದ್ರೋಹ ಪ್ರಕರಣಗಳ ಪೈಕಿ ಶೇ 96ರಷ್ಟು 2014ರ ನಂತರ ದಾಖಲಾಗಿವೆ. ಇವೆಲ್ಲವೂ ಸರ್ಕಾರ ಮತ್ತು ರಾಜಕಾರಣಿಗಳನ್ನು ಟೀಕಿಸಿದ್ದಕ್ಕೆ ದಾಖಲಿಸಲಾಗಿರುವ ಪ್ರಕರಣಗಳು.

2020ರವರೆಗೆ, ನರೇಂದ್ರ ಮೋದಿ ಅವರನ್ನು ಟೀಕಿಸಿದ್ದರ ವಿರುದ್ಧ 149 ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ ಅವರನ್ನು ಟೀಕಿಸಿದ್ದರ ವಿರುದ್ಧ 144 ಪ್ರಕರಣಗಳು ದಾಖಲಾಗಿವೆ. 'ಟೀಕೆಯು ದೇಶದ್ರೋಹ ಅಲ್ಲವೇ ಅಲ್ಲ' ಎಂದು ಸುಪ್ರೀಂ ಕೋರ್ಟ್ ಪದೇ ಪದೇ ಹೇಳುತ್ತಲೇ ಇದೆ. ಬಿಜೆಪಿ ಸರ್ಕಾರಗಳು ಮಾತ್ರ ದೇಶದ್ರೋಹ ಪ್ರಕರಣಗಳನ್ನು ಎಡೆಬಿಡದೆ ದಾಖಲಿಸುತ್ತಲೇ ಇವೆ.

ಇವುಗಳೊಂದಿಗೆ ತರಹೇವಾರಿ ಕಾನೂನುಗಳ ಅಡಿ ದಾಖಲಾಗಿರುವ ಬೋಗಸ್ ಕೇಸುಗಳಿಗೆ ಲೆಕ್ಕವೇ ಇಲ್ಲ. 2016ರಿಂದ 2019ರ ನಡುವೆ ದೇಶದ್ರೋಹ ಪ್ರಕರಣಗಳ ಪ್ರಮಾಣ ಶೇ 160ರಷ್ಟು ಏರಿಕೆ ಕಂಡಿವೆ. ಇದೇ ಅವಧಿಯಲ್ಲಿ ಈ ಮೊಕದ್ದಮೆಗಳು ನ್ಯಾಯಾಲಯಗಳಲ್ಲಿ ರುಜುವಾತು ಆದ ಪ್ರಮಾಣ ಶೇ 33.3ರಿಂದ ಶೇ 3.3ಕ್ಕೆ ಕುಸಿದಿದೆ. 100ಕ್ಕೆ 3 ಪ್ರಕರಣಗಳು ಮಾತ್ರ ಸಾಬೀತಾಗಿವೆ ಅಂದರೆ ಉಳಿದವು ಬಹುತೇಕ ಬೋಗಸ್ ದೂರುಗಳು. ಅವುಗಳ ಉದ್ದೇಶ ಜನರ ಬಾಯಿ ಮುಚ್ಚಿಸುವುದು. ಸರ್ಕಾರವನ್ನು ಪ್ರಶ್ನಾತೀತವಾಗಿ ಮಾಡುವುದು. 'ಹೇಗೂ ಖುಲಾಸೆ ಆಗಿದೆಯಲ್ಲ ಬಿಡಿ' ಎಂದು ಹೇಳುವ ಕೆಲವರು ಸಮಾಧಾನ ಪಡಿಸಲು ನೋಡಬಹುದು. ಆದರೆ ಕೇಸುಗಳನ್ನು ಹಾಕಿಸಿಕೊಂಡು, ಜಾಮೀನು ಸಿಗದೆ ಸೆರೆವಾಸ ಅನುಭವಿಸಿ, ವರ್ಷಾನುಗಟ್ಟಲೆ ಕೋರ್ಟ್ ಸುತ್ತಿ, ಸಂಪಾದನೆ ಕಳೆದುಕೊಂಡ ಮೇಲೆ, ವಾಕ್ ಸ್ವಾತಂತ್ರ್ಯವನ್ನು ಮರೆತು, ಬಾಯಿ ಮುಚ್ಚಿಕೊಂಡು ಬದುಕೋದು ಲೇಸು ಅಂತ ಎಂಥವರಿಗೂ ಅನ್ನಿಸುತ್ತದೆ. ಅವರನ್ನು ನೋಡುವವರಿಗೂ 'ಬಾಯಿ ಮುಚ್ಚಿ, ಇಲ್ಲಾ ಅಂದರೆ...' ಅನ್ನೋ ಸ್ಪಷ್ಟ ಸಂದೇಶ ತಾನೇ ತಾನಾಗಿ ಹೋಗಿರುತ್ತದೆ.

ಹಾಗಾಗಿ, ಎಲ್ಲಿ ಉಳಿಯಿತು ಸಂವಿಧಾನಬದ್ಧ ಅಭಿವ್ಯಕ್ತಿ ಮತ್ತು ವಾಕ್ ಸ್ವಾತಂತ್ರ್ಯ? ಆಳುವ ಸರ್ಕಾರಗಳು ಏನು ಏಡವಟ್ಟು ಮಾಡಿದರೂ ಪ್ರಶ್ನೆ ಮಾಡುವವರು ಇಲ್ಲವಾದರೆ, 'ದೊರೆಯ ಬಟ್ಟೆ ಎಲ್ಲಾ ಕಳಚಿ ಹೋಗಿದ್ದರೂ ದೊರೆಯ ಪೋಷಾಕುಗಳನ್ನು ಹಾಡಿ ಹೊಗಳುವುದಷ್ಟೆ' ಉಳಿದವರ ಘನ ಕಾರ್ಯ. ಇನ್ನು ಆ ರಾಜನ ರಾಜ್ಯದ ಪರಿಸ್ಥಿತಿ ಏನಾಗಬೇಕು? ಅದಕ್ಕಾಗಿಯೇ ಸರ್ಕಾರವನ್ನು ನಿರಂತರ ವಿಮರ್ಶೆಗಳಿಗೆ ಒಳಪಡಿಸಬೇಕು, ಸಲಹೆ ನೀಡಬೇಕು, ತಪ್ಪುಗಳನ್ನು ತೋರಿಸಿ, ತಿದ್ದಬೇಕು. ಆಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ.

ದಿಶಾರವಿ ಪ್ರಕರಣದಲ್ಲಿ ನ್ಯಾಯಾಲಯ ಹೀಗೆ ಹೇಳಿದೆ: 'ಸರ್ಕಾರದ ಒಣ ಪ್ರತಿಷ್ಠೆ ರಕ್ಷಣೆಗಾಗಿ ಇರೋದಲ್ಲ ದೇಶದ್ರೋಹ ಕಾನೂನು... ಪ್ರಶ್ನೆ ಮಾಡಿದರೆ ಪೌರರನ್ನು ಜೈಲಿಗೆ ಹಾಕುವುದಕ್ಕೆ ಆಗುವುದಿಲ್ಲ'. 'ಜನರು ಅವರ ಸಮಸ್ಯೆಯನ್ನು ಹೇಳಿಕೊಳ್ಳುವುದರ ಮೇಲೆ ನಿರ್ಬಂಧ ಹೇರಿದರೆ ಅದು ನ್ಯಾಯಾಂಗ ನಿಂದನೆ ಆಗುತ್ತದೆ. ಜನ ತಪ್ಪು ಹೇಳುತ್ತಿದ್ದಾರೆ ಎಂದು ಭಾವಿಸದೆ, ಅವರ ಧ್ವನಿಗೆ ಮುಕ್ತ ಅವಕಾಶ ನೀಡಿ, ಆಲಿಸಿ!' ಎಂದು ಸುಪ್ರೀಂ ಕೋರ್ಟ್ ಇದೇ ಏಪ್ರಿಲ್ 30ರಂದು ಹೇಳಿದೆ. ಆದರೂ ಇವು ಯಾವುವನ್ನೂ ಲೆಕ್ಕಿಸದೆ ಕೇಸುಗಳನ್ನು ಹಾಕಿ ಜನಧ್ವನಿಯನ್ನು ಅಡಗಿಸುವ, ಜನರನ್ನು ಹೆದರಿಸುವ ಕಾರ್ಯ 2014ರಿಂದ ಇಂದಿನವರೆಗೂ ನಡೆದೇ ಇದೆ.

ಪ್ರಧಾನಿ ಪ್ರಶ್ನಾತೀತರೂ ಅಲ್ಲ, ಹಾಗೆ ಆಗಲೂಬಾರದು. ಅದರಿಂದ ಜನಹಿತ ಮತ್ತು ಪ್ರಜಾಪ್ರಭುತ್ವ ಕ್ಷೀಣಿಸುತ್ತದೆ. ಅಂಥ ಸರ್ವಾಧಿಕಾರ ಬೆಳೆಯುತ್ತದೆ. ಅದು ದೇಶಕ್ಕೆ ಹಾನಿ. ಪ್ರಧಾನಿಯನ್ನು ಅಥವಾ ಸರ್ಕಾರವನ್ನು ಪ್ರಶ್ನಿಸುವುದು ದೇಶದ ಬಗ್ಗೆ ನೈಜ ಕಾಳಜಿ ಹೊಂದಿರುವ ಭಾರತೀಯನ ಹಕ್ಕು ಹಾಗೂ ಕರ್ತವ್ಯ. ಇದರಿಂದ ದೇಶ ಮತ್ತಷ್ಟು ಬಲಿಷ್ಠ, ಸದೃಢ ಅಭಿವೃದ್ಧಿಯನ್ನು ಸಾಧಿಸಬಹುದು.

ಲೇಖಕ: ಕಾಂಗ್ರೆಸ್ ಶಾಸಕ

'ಪ್ರಶ್ನಾತೀತರು' ಎಂಬ ಭ್ರಮೆ ಇಲ್ಲ

ಪ್ರಜಾವಾಣಿ ಚರ್ಚೆ

• ವಿ ಸುನಿಲ್ ಕುಮಾರ್



'ಮೋದಿ ಕಾಣೆಯಾಗಿದ್ದಾರೆ' ಎಂದು ದೆಹಲಿಯಲ್ಲಿ ಪೋಸ್ಟರ್‌ಗಳನ್ನು ಅಂಟಿಸಲಾಯಿತು. ಅದನ್ನು ಅಂಟಿಸಿದವರ ವಿರುದ್ಧ ಸಾರ್ವಜನಿಕರು ದೂರು ನೀಡಿದಾಗ, ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ. ಪ್ರಜಾತಂತ್ರದಲ್ಲಿರುವ ನಿಯಮದ ಪ್ರಕಾರವೇ ನಡೆದಿದೆ. ಇದಕ್ಕೂ ಪ್ರಧಾನಿಗೂ ಏನು ಸಂಬಂಧ. ಕಾನೂನು ತನ್ನ ಕೆಲಸ ಮಾಡಬೇಕಲ್ಲವೆ?

ವಾಕ್ ಸ್ವಾತಂತ್ರ್ಯ ಸಂವಿಧಾನ ನಮ್ಮೆಲ್ಲರಿಗೂ ನೀಡಿರುವ ಹಕ್ಕು. ಅದನ್ನು ಎಲ್ಲರೂ ಗೌರವಿಸಬೇಕು. ನಾವೂ ಗೌರವಿಸುತ್ತೇವೆ. ಹಾಗೆಯೇ ಟೀಕೆ–ಟಿಪ್ಪಣಿಗಳಿಗೆ ಯಾರೂ ಅತೀತರಲ್ಲ. ದ್ವೇಷಪೂರ್ಣ ಮನಸ್ಸುಗಳು ಈ ಪವಿತ್ರ ಸ್ವಾತಂತ್ರ್ಯವನ್ನು ಸ್ವೇಚ್ಛಾಚಾರವಾಗಿ ಕೀಳು ಮಟ್ಟದಲ್ಲಿ ನಿರಂತರವಾಗಿ ಒಬ್ಬ ವ್ಯಕ್ತಿಯನ್ನು ಗುರಿ ಮಾಡಿದರೆ ಒಪ್ಪುದಕ್ಕೆ ಸಾಧ್ಯವೇ? ಅದು ಪ್ರಧಾನಿ ನರೇಂದ್ರ ಮೋದಿ ವಿಷಯದಲ್ಲಿ ಮಾತ್ರವಲ್ಲ, ಯಾವುದೇ ಪಕ್ಷದ ನಾಯಕರನ್ನು 'ಟಾರ್ಗೆಟ್' ಎಂಬಂತೆ ಟೀಕೆ ಮಾಡುವುದನ್ನು ಒಪ್ಪಲು ಸಾಧ್ಯವೇ?

ದೇಶದಲ್ಲಿ ಈಗ ಆಗಿರುವುದು ಅದೇ. ನರೇಂದ್ರ ಮೋದಿಯವರು ಪ್ರಧಾನಿ ಆದ ದಿನದಿಂದಲೂ ದೇಶದಲ್ಲಿ ಒಂದು ವರ್ಗ, ಪಕ್ಷ ಮತ್ತು ಒಂದು ವರ್ಗದ ಮಾಧ್ಯಮ ಆರೋಗ್ಯಪೂರ್ಣವಾಗಿ ಟೀಕಿಸುವುದರ ಬದಲು ಪ್ರಧಾನಿ ಆಗಿದ್ದೇ ತಪ್ಪು, ಅವರು ಮಾಡಿದ್ದೆಲ್ಲವೂ ತಪ್ಪು ಎಂಬಂತೆ ಹಗೆ ಸಾಧಿಸುತ್ತಾ ಬಂದಿರುವುದನ್ನು ನೋಡಬಹುದು. ವಾಕ್ ಸ್ವಾತಂತ್ರ್ಯಕ್ಕಿಂತ ಅಜೆಂಡಾವೇ ಹೆಚ್ಚು ಕೆಲಸ ಮಾಡುತ್ತಿದೆ. ದೇಶದ ಇತಿಹಾಸದಲ್ಲಿ ಇಷ್ಟೊಂದು ಪೂರ್ವಗ್ರಹಪೀಡಿತ ಮತ್ತು ದ್ವೇಷದಿಂದ ಕೂಡಿದ ಟೀಕೆಗಳನ್ನು ಯಾವುದೇ ಪ್ರಧಾನಿ ಎದುರಿಸಿಲ್ಲ. ದೇಶ-ವಿದೇಶಗಳ ಪತ್ರಿಕೆಗಳನ್ನೇ ತೆಗೆದುಕೊಳ್ಳಿ, ಪ್ರಧಾನಿ ಕುರಿತು ಬಂದಿರುವ ಲೇಖನಗಳ ಸಮೀಕ್ಷೆ ಯಾರಾದರೂ ಮಾಡಿದರೆ, ಅದರಲ್ಲಿ ಮೋದಿಯ ವ್ಯಕ್ತಿತ್ವ, ಉಡುಪಿನಿಂದ ಹಿಡಿದು ಆಡಳಿತದವರೆಗೆ ಎಲ್ಲವೂ ಟೀಕೆಗೆ ಒಳಗಾಗಿವೆ. ಹಾಗೆಂದು, ಮೋದಿ ಟೀಕಾತೀತರು ಎಂದು ಎಂದೂ ಭಾವಿಸಿಲ್ಲ. ತಮಗೆ ಎದುರಾದ ಟೀಕೆಗಳನ್ನು ಮೌನವಾಗಿ ಸ್ವೀಕರಿಸುವ ಅವರು, ಹೆಚ್ಚು ಕೆಲಸ ಮಾಡುವ ಮೂಲಕವೇ ಉತ್ತರ ನೀಡಲು ಬಯಸುತ್ತಾರೆ. ಅದು ಅವರ ಶೈಲಿ.

ಮೋದಿಯವರು ಪ್ರಧಾನಿ ಅಭ್ಯರ್ಥಿ ಎಂದು ಘೋಷಣೆ ಆದ ದಿನದಿಂದಲೇ ಒಂದು ವರ್ಗಕ್ಕೆ ಸಹಿಸಲು ಆಗಲಿಲ್ಲ. ಒಂದು ಕುಟುಂಬದ ಹಿಡಿತದಿಂದ ದೇಶ ಕೈ ತಪ್ಪಬಾರದು ಎಂಬುದೇ ಅವರ ಕುತ್ಸಿತ ಹಿತಾಸಕ್ತಿ. ಯಾರೋ ಒಬ್ಬ ಸಾಮಾನ್ಯ ವ್ಯಕ್ತಿ ಬಂದು ಕೂರುತ್ತಾನಲ್ಲ ಎಂಬ ಆತಂಕ. ಅದಕ್ಕಾಗಿ ಚುನಾವಣೆ ವೇಳೆ ಕಠೋರ ನುಡಿಗಳು– ನರಹಂತಕ, ಸಾವಿನ ವ್ಯಾಪಾರಿ, ಕೀಳು ಜಾತಿಯವ, ಚಾಯ್ ವಾಲಾ ಎಂದು ಹಂಗಿಸಿದರು. ಯಾವಾಗ ಇವೆಲ್ಲವನ್ನು ಮೆಟ್ಟಿ ಮೋದಿ ಬಹುಮತದಿಂದ ಆಯ್ಕೆ ಆಗಿ ಬಂದರೋ, ಆಗ ಹಲವರಲ್ಲಿ ಅಸೂಯೆ ಮತ್ತು ಅಸಹನೆಯ ಪಿತ್ಥ ನೆತ್ತಿಗೇರಿತು. ವಿಶ್ವದ ಹಲವು ಮುಖಂಡರು ಮೋದಿಯವರನ್ನು ಅಭಿನಂದಿಸಿದ್ದರೂ, ಅಧಿಕಾರ ಕಳೆದುಕೊಂಡ 'ಕುಟುಂಬ'ದವರು ಕನಿಷ್ಠ ಅಭಿನಂದನೆ ಸಲ್ಲಿಸುವ ಸೌಜನ್ಯ ತೋರಿಸಲಿಲ್ಲ. ಅಂದರೆ, ಇವರ ಅಸಹನೆ ಯಾವ ಮಟ್ಟದಲ್ಲಿರಬೇಕು ಎಂಬುದನ್ನು ಗಮನಿಸಬೇಕು.

ಹಿಂದೆ ಕಾಂಗ್ರೆಸ್ಸೇತರ ಸರ್ಕಾರಗಳು ಅಧಿಕಾರಕ್ಕೆ ಬಂದಾಗ ಕುಟಿಲತೆಯಿಂದ ಪತನಗೊಳಿಸಿ, ಮತ್ತೆ ಗದ್ದುಗೆ ಏರುತ್ತಿದ್ದರು. ಆ ಕುಟಿಲತೆಯನ್ನು 70 ವರ್ಷಗಳಿಂದ ದೇಶ ನೋಡಿದೆ. ಮೋದಿ ಅವಧಿಯಲ್ಲಿ ಅದು ಸಾಧ್ಯವಾಗದಂತೆ ಭರ್ಜರಿ ಜಯವನ್ನು ಜನತೆಯೇ ನೀಡಿದ್ದರು. ಹೀಗಾಗಿ ಮೋದಿ ಸರ್ಕಾರದ ವಿರುದ್ಧ ಕುಟುಂಬದ ಹಿತೈಷಿ ವರ್ಗ 'ಗೆರಿಲ್ಲಾ' ಮಾದರಿಯನ್ನು ಅನುಸರಿಸಿತು. ಕೆಲವು ಹಿಂಸಾತ್ಮಕ ಘಟನೆಗಳು ದೇಶದ ವಿವಿಧ ಭಾಗದಲ್ಲಿ ನಡೆದಾಗ, ಅದಕ್ಕೂ ಮೋದಿ ಸರ್ಕಾರಕ್ಕೂ ನಂಟು ಬೆಸೆದರು. ದೇಶದಲ್ಲಿ ಅಸಹನೆ ಹೆಚ್ಚಾಗಿದೆ ಎಂದು ಹುಯಿಲೆಬ್ಬಿಸಿದರು. ಇವರ ಅವಧಿಯಲ್ಲಿ ಅನೇಕ ಬಗೆಯಲ್ಲಿ ಉಪಕೃತರಾದ 'ಬೌದ್ಧಿಕ' ವಲಯ 'ಅವಾರ್ಡ್ ವಾಪ್ಸಿ' ಮೂಲಕ ಮೋದಿ ವಿರುದ್ಧ ಮೊದಲ ಯುದ್ಧ ಸಾರಿತು. ದಲಿತ ವ್ಯಕ್ತಿಗಳು ಮತ್ತು ಮುಸ್ಲಿಂ ವ್ಯಕ್ತಿಗಳ ಮೇಲೆ ಹಲ್ಲೆ ನಡೆದಾಗ ಅದಕ್ಕೂ ಸರ್ಕಾರಕ್ಕೆ ನಂಟು ಕಲ್ಪಿಸಿದರು. ಮೋದಿ ದಲಿತ ಮತ್ತು ಮುಸ್ಲಿಂ ವಿರೋಧಿ ಎಂದು ಬಿಂಬಿಸಿದರು. ಕಾಂಗ್ರೆಸ್ ಅವಧಿಯಲ್ಲಿ ಇಂತಹ ಅಸಂಖ್ಯಾತ ಹೇಯ ಘಟನೆಗಳು ನಡೆದಿದ್ದಾಗ ಈ ವರ್ಗ ಮೌನವಾಗಿ ಇರುತ್ತಿತ್ತು.

ಬಿಜೆಪಿಯನ್ನು ಚುನಾವಣೆಯಲ್ಲಿ ಸೋಲಿಸಲು ಸಾಧ್ಯವಿಲ್ಲ ಎಂಬುದು ಗೊತ್ತಾದ ಬಳಿಕ ಮೋದಿ ವಿರೋಧಿಸುವ ಶಕ್ತಿಗಳು, ಪಕ್ಷಗಳು ತಮ್ಮ 'ಗೆರಿಲ್ಲಾ' ಯುದ್ಧದಲ್ಲಿ ವಿವಿಧ ಬಗೆಯ ಅಸ್ತ್ರಗಳನ್ನು ಹಿರಿದು ತೆಗೆಯಲಾರಂಭಿಸಿದರು. ಅದರಲ್ಲಿ ಗೋಬೆಲ್ಸ್ ಮಾದರಿಯ ಅಪಪ್ರಚಾರವೂ ಒಂದು. ಇದರಲ್ಲಿ 'ಸಮಾನ ಮನಸ್ಕ'ರೆಲ್ಲಾ ದೇಶದ ಹಿತವನ್ನು ಬಲಿಗೊಟ್ಟು ಒಂದಾದರು.

ಹಲವು 'ಗೆರಿಲ್ಲಾ' ಯುದ್ಧದಲ್ಲಿ ಸೋತವರಿಗೆ ಈಗ ಸಿಕ್ಕಿರುವ ಹೊಸ ಅಸ್ತ್ರವೆಂದರೆ, ಕೋವಿಡ್ ಎರಡನೇ ಅಲೆ. ಇದರಲ್ಲಿ ಸರ್ಕಾರಕ್ಕೆ ಹೆಗಲು ಕೊಡಬೇಕಾಗಿತ್ತು. ಹೌದು, ಎರಡನೇ ಅಲೆ ಅಚಾನಕ್ ಅಪ್ಪಳಿಸಿತು. ದೇಶದ ಆರೋಗ್ಯ ವ್ಯವಸ್ಥೆ ಕೊರೊನಾ ಸುನಾಮಿಯನ್ನು ಎದುರಿಸುವ ಸ್ಥಿತಿಯಲ್ಲಿ ಇರಲಿಲ್ಲ. ಇದಕ್ಕೆ ಏಳು ವರ್ಷ ಆಡಳಿತ ಮಾಡಿದ ಮೋದಿ ಅವರನ್ನು ಹೊಣೆ ಮಾಡಿದರೆ ಆಗುವುದಿಲ್ಲ. ಈ 'ಕುವ್ಯವಸ್ಥೆ'ಯಲ್ಲಿ 60 ಕ್ಕೂ ಹೆಚ್ಚು ವರ್ಷ ಆಡಳಿತ ನಡೆಸಿದ ಕಾಂಗ್ರೆಸ್‌ನ ಪಾಲು ಇಲ್ಲವೇ? ಲಸಿಕೆ ತಯಾರಿಕೆಯಲ್ಲಿ ಸ್ವಾವಲಂಬನೆ ಸಾಧಿಸುವ ಭಾರತದ ಶಕ್ತಿಯನ್ನು ಹಾಳು ಗೆಡವಿದ್ದು ಯಾರು? ಯುಪಿಎ 1ರ ಅವಧಿಯಲ್ಲಿ ಸಾರ್ವಜನಿಕ ಸ್ವಾಮ್ಯದ ಮೂರು ಪ್ರಮುಖ ಲಸಿಕೆ ಉತ್ಪಾದಕ ಘಟಕಗಳ ಲೈಸೆನ್ಸ್ ರದ್ದು ಮಾಡಿ ಖಾಸಗಿಯವರಿಗೆ ಮಣೆ ಹಾಕಿದ ಕೀರ್ತಿ ಡಾ.ಮನಮೋಹನ್ ಸಿಂಗ್ ಸರ್ಕಾರಕ್ಕೆ ಸಲ್ಲಬೇಕಲ್ಲವೆ. ದೇಶದಲ್ಲಿ ಲಸಿಕೆ ಸಿಗುತ್ತಿಲ್ಲ ಎಂದು ರಾಹುಲ್ ಗಾಂಧಿ, ಸೋನಿಯಾಗಾಂಧಿ ಅಬ್ಬರಿಸುತ್ತಿದ್ದಾರೆ. ಲಸಿಕೆ ಉತ್ಪಾದಕ ಘಟಕಗಳ ಕತ್ತು ಹಿಸುಕಿದ್ದು ಅವರದ್ದೇ ಸರ್ಕಾರದ ಅವಧಿಯಲ್ಲಿ ಅಲ್ಲವೇ?

ಇವರ ಗೆರಿಲ್ಲಾ ಯುದ್ಧದ ಭಾಗವಾಗಿ 'ಮೋದಿ ಕಾಣೆಯಾಗಿದ್ದಾರೆ' ಎಂದು ದೆಹಲಿಯಲ್ಲಿ ಪೋಸ್ಟರ್‌ಗಳನ್ನು ಅಂಟಿಸಲಾಯಿತು. ಅದನ್ನು ಅಂಟಿಸಿದವರ ವಿರುದ್ಧ ಸಾರ್ವಜನಿಕರು ದೂರು ನೀಡಿದಾಗ, ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ. ಪ್ರಜಾತಂತ್ರದಲ್ಲಿರುವ ನಿಯಮದ ಪ್ರಕಾರವೇ ನಡೆದಿದೆ. ಇದಕ್ಕೂ ಪ್ರಧಾನಿಗೂ ಏನು ಸಂಬಂಧ. ಕಾನೂನು ತನ್ನ ಕೆಲಸ ಮಾಡಬೇಕಲ್ಲವೆ?

ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತನಾಡುವ ಕಾಂಗ್ರೆಸ್ ಪಕ್ಷವು ಯುಪಿಎ– 2 ಸರ್ಕಾರದ ಅವಧಿಯಲ್ಲಿ ಬಲಪಂಥೀಯರ ಟ್ವಿಟರ್, ಬ್ಲಾಗ್‌ಗಳು ಮತ್ತು ವೆಬ್‌ಸೈಟ್‌ಗಳ ಮೇಲೆ ನಿರ್ಬಂಧ ವಿಧಿಸಿತ್ತು. ವಿಶೇಷವಾಗಿ ಆ ಪಕ್ಷದ ನಾಯಕಿ ಸೋನಿಯಾ ಗಾಂಧಿ ಮತ್ತು ಅವರ ಪುತ್ರ ರಾಹುಲ್ ಗಾಂಧಿ ಮೇಲೆ ಯಾವುದೇ ರೀತಿಯ ಟೀಕೆಗಳನ್ನು ಸಹಿಸದಷ್ಟು 'ವ್ಯಕ್ತಿಪೂಜೆ' ಅಲ್ಲಿ ಹೆಪ್ಪುಗಟ್ಟಿತ್ತು ಎಂಬುದನ್ನು ಮರೆಯಲು ಸಾಧ್ಯವೇ?

ಯುಪಿಎ ಅವಧಿಯಲ್ಲಿ (2008) ಸ್ಪ್ಯಾನಿಷ್ ಲೇಖಕ ಜೇವಿಯರ್ ಮೊರೊ ಅವರು 'ಎಲ್ ಸಾರಿ ರೋಜೊ' ಅಂದರೆ 'ಕೆಂಪು ಸೀರೆ' ಎಂಬ ಪುಸ್ತಕವನ್ನು ಪ್ರಕಟಿಸಿದರು. ಅದು ಸೋನಿಯಾಗಾಂಧಿ ಕುರಿತಾಗಿದ್ದು, ಆ ಪುಸ್ತಕವನ್ನು ಭಾರತದಲ್ಲಿ ಬಿಡುಗಡೆ ಮಾಡಲು ಯುಪಿಎ ಸರ್ಕಾರ ಬಿಡಲಿಲ್ಲ. ಗದ್ದಲ ಎಬ್ಬಿಸಿದ್ದು ಮಾತ್ರವಲ್ಲದೆ, ಲೇಖಕನ ವಿರುದ್ಧ ಭಾರತೀಯ ನ್ಯಾಯಾಲಯದಲ್ಲಿ ದಾವೆ ಹೂಡಿದರು. ಹಾಗಿದ್ದರೆ ಸೋನಿಯಾ ಪ್ರಶ್ನಾತೀತರೆ? ಆಗ ನಮ್ಮ ಲಿಬರಲ್‌ಗಳು ಏಕೆ ಪ್ರಶ್ನಿಸಲಿಲ್ಲ? ಮೋದಿ ವಿರುದ್ಧ ಹೀನಾಯವಾಗಿ ಬರೆದ ಎಷ್ಟೋ ಪುಸ್ತಕಗಳು ಬಿಡುಗಡೆ ಆಗಿವೆ. ಯಾರಾದರೂ ತಡೆದ ನಿದರ್ಶನವಿದೆಯೆ? 'ನೆಹರೂ–ಗಾಂಧಿ' ಪರಿವಾರದ ಎಲ್ಲ ಸರ್ವಾಧಿಕಾರಿ ನಡೆಗಳಿಗೂ ಬೇರೆಯದೇ ಆದ ಬಣ್ಣ ಬಳಿದು ರಕ್ಷಾ ಕವಚವಾಗಿ ನಿಂತವರು ಉಪಕೃತ ಬೌದ್ಧಿಕರು. ಮೋದಿ ಅವರಿಗೆ ಆ ರಕ್ಷಾ ಕವಚವಿಲ್ಲ, ಏಕೆಂದರೆ ಅವರು ನೈಜ ನಾಯಕ. ಮಿಥ್ಯಾ ಟೀಕೆಗಳಿಗೆ ತಲೆ ಕೆಡಿಸಿಕೊಂಡವರಲ್ಲ. ಪ್ರಶ್ನಾತೀತ ಎಂದು ಭಾವಿಸಿಯೂ ಇಲ್ಲ. ಆ ಭ್ರಮೆಯೂ ಇಲ್ಲ.

ಆಡಳಿತ ಪಕ್ಷದ ಮುಖ್ಯ ಸಚೇತಕ, ವಿಧಾನಸಭೆ


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ನ್ಯುಮೋನಿಯಾ ಚುಚ್ಚುಮದ್ದು ಪಡೆಯುವುದರಿಂದ ಕೋವಿಡ್ ಬರುವುದನ್ನು ತಡೆಯಬಹುದು. ಈ ಚುಚ್ಚುಮದ್ದು ಪಡೆದಿದ್ದರೆ, ಕೊರೊನಾ ಸೋಂಕು ತಗುಲಿದರೂ ಅದು ಕೋವಿಡ್ ಆಗಿ ಬದಲಾಗುವುದಿಲ್ಲ. ಹೀಗಾಗಿ ನ್ಯುಮೋನಿಯಾ ಚುಚ್ಚುಮದ್ದನ್ನು ಹಾಕಿಸಿಕೊಳ್ಳಿ, ಕೋವಿಡ್ ಅನ್ನು ದೂರವಿಡಿ' ಎಂಬ ವಿವರ ಇರುವ ಪೋಸ್ಟರ್‌ಗಳು ಟ್ವಿಟರ್, ಫೇಸ್‌ಬುಕ್‌ನಲ್ಲಿ ವೈರಲ್ ಆಗಿವೆ.

ಇದು ಸುಳ್ಳು ಸುದ್ದಿ ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ನ್ಯುಮೋನಿಯಾ ಚುಚ್ಚುಮದ್ದು, ನ್ಯುಮೋನಿಯಾವನ್ನು ಮಾತ್ರ ತಡೆಯುವ ಸಾಮರ್ಥ್ಯ ಹೊಂದಿದೆ. ನ್ಯುಮೋನಿಯಾ ಚುಚ್ಚುಮದ್ದು ಪಡೆಯುವುದರಿಂದ ಕೋವಿಡ್ ತಡೆಯಬಹುದು ಎಂಬುದರ ಕುರಿತಾಗಿ ಯಾವುದೇ ಸಂಶೋಧನೆ ನಡೆದಿಲ್ಲ ಮತ್ತು ಇದು ಸಾಬೀತಾಗಿಲ್ಲ. ಹೀಗಾಗಿ ಕೋವಿಡ್ ತಡೆ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕೋವಿಡ್ ಲಸಿಕೆ ಹಾಕಿಸಿಕೊಳ್ಳಬೇಕು' ಎಂದು ಪಿಐಬಿ ಹೇಳಿದೆ.

ಗುಂಡಣ್ಣ



ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ



ಜನರ ಮನಸ್ಸು ಗೆದ್ದ ಬುದ್ಧ

ಜಗದ ಸೃಷ್ಟಿ ಬಗ್ಗೆ ಭಾರತೀಯ ದಾರ್ಶನಿಕರು ಬಹಳಷ್ಟು ಹೇಳಿದ್ದಾರೆ. ಹಲವರು ಅನೇಕ ರೀತಿ ವ್ಯಾಖ್ಯಾನಿಸಿದ್ದಾರೆ. ಇದರಿಂದ ಜೀವಿಯ ಹುಟ್ಟು ಮತ್ತು ಅಂತ್ಯದ ಕುರಿತು ಅದ್ಭುತ ಅಧ್ಯಾತ್ಮಜ್ಞಾನ ಲೋಕವೇ ಭಾರತದಲ್ಲಿ ಸೃಷ್ಟಿಯಾಗಿದೆ. ಜೀವ ಹುಟ್ಟುವುದೇಕೆ? ಅದು ಸಾಯುವುದೇಕೆ? ಸಾವಿನ ನಂತರ ಆ ಜೀವ ಎಲ್ಲಿ ಹೋಗುತ್ತದೆ? ದಿಗಂತದ ಅಸಂಖ್ಯ ನಕ್ಷತ್ರ-ಆಕಾಶ ಕಾಯಗಳ ಕಾಯುತ್ತಿರುವ ಒಡೆಯನಾರು? ಜೀವಾತ್ಮ-ಪರಮಾತ್ಮಗಳ ಸಂಯೋಗವಾಗುತ್ತಾ? ಇಲ್ಲವಾ? ಹೀಗೆ ಸಾವಿನಾಚೆಗಿನ ಪಾರಮಾರ್ಥಿಕ ಚಿಂತನೆಗಳು ಸಾವಿರಾರು ವರ್ಷಗಳಿಂದ ನಡೆಯುತ್ತಲೇ ಇವೆ. ಆದರೆ ಯಾವುದೂ ಸಾವಿನಾಚೆಗಿನ ನಿಖರ ಸತ್ಯ ತಿಳಿಯಲು ಸಾಧ್ಯವಾಗಿಲ್ಲ.

ಏಕೆಂದರೆ, ಬ್ರಹ್ಮಾಂಡ ಒಂದು ಮಾಯಾಲೋಕ. ಇಲ್ಲಿ ಸತ್ಯ ಸುಳ್ಳಾಗುತ್ತದೆ, ಸುಳ್ಳು ಸತ್ಯ ಅನಿಸುತ್ತದೆ. ಇಂಥ ಭ್ರಮಾಪ್ರಪಂಚದಲ್ಲಿ ಸತ್ಯ-ಮಿಥ್ಯೆಗಳ ಪತ್ತೆ ಹಚ್ಚುವುದು ಸುಲಭವಲ್ಲ. ಅದಕ್ಕೆ ಭಗವತ್‌ಜ್ಞಾನ ಬೇಕು. ಇಂಥ ಭಗವತ್‌ಜ್ಞಾನ ಪಡೆಯಲು ಅಧ್ಯಾತ್ಮದ ಸಾಗರದಲ್ಲಿ ಮಂಥನ ನಡೆಸಬೇಕು. ಅಧ್ಯಾತ್ಮಮಂಥನ ನಡೆಸುವುದು ಅಷ್ಟು ಸುಲಭವಲ್ಲ. ಅಡಿಗಡಿಗೆ ಭ್ರಮಾವಿಷ ಆರ್ಭವಿಸಿ ಬರುತ್ತದೆ. ಅದನ್ನು ಹೀರಿ ಶಿವಶಕ್ತಿ ಪಡೆವ ಯುಕ್ತಿ ಬೇಕು. ಎಲ್ಲಾ ಅಡೆತಡೆಗಳನ್ನು ಮೆಟ್ಟಿ ನಿಂತು, ಅಧ್ಯಾತ್ಮ ಮಂಥಿಸುವಾಗಲು ಬುದ್ಧಿ ಮಂಕಾಗುತ್ತದೆ. ಮನಸ್ಸಿನ ತುಂಬಾ ಶೂನ್ಯ ಆವರಿಸಿಕೊಳ್ಳುತ್ತದೆ. ಇಂಥ ಭ್ರಮಾಮಯವನ್ನು ನಿಗ್ರಹಿಸಿ, ಮಾಯಾ ಕತ್ತಲನ್ನು ಭೇದಿಸಿದಾಗ ಭಗವತ್ ಜ್ಞಾನದ ಬೆಳಕು ಕಾಣಿಸುತ್ತದೆ.

ಋಷಿ-ಮುನಿಗಳು ಕಾಡು-ಮೇಡುಗಳನ್ನ ಅಲೆದು, ವರ್ಷಗಟ್ಟಲೇ ತಪಸ್ಸು ಮಾಡಿ ಭಗವಂತನನ್ನು ಒಲಿಸಿಕೊಳ್ಳುವ ಭಗವತ್ ಜ್ಞಾನ ಪಡೆಯುತ್ತಿದ್ದರು. ಲಾಭ-ಲೋಭದ ಲವಲೇಶವೂ ಇಲ್ಲದ ದಿವ್ಯ ಜ್ಞಾನಧಾರಿಗಳಿಗೆ ತಮ್ಮ ಹಿಂದಿನ ಬದುಕು ಅದೆಷ್ಟು ಬಾಲಿಶವಾಗಿತ್ತು. ತಾವೆಂಥ ಮೂರ್ಖ ಮನಃಸ್ಥಿತಿಯಲ್ಲಿದ್ದೆವೆಂಬ ಅರಿವಾಗುತ್ತದೆ. ಹೀಗಾಗಿ ಅವರ್ಯಾರಿಗೂ ಜನಸಮೂಹದ ತಾಮಸ ಬದುಕಲ್ಲಿ ಇರಬೇಕೆನಿಸುವುದಿಲ್ಲ. ಅದಕ್ಕಾಗಿ ಮತ್ತೆ ನಾಡಿಗೆ ಬಾರದೆ ಕಾಡಿನಲ್ಲೇ ಮತ್ತಷ್ಟು ಬ್ರಹ್ಮವಿದ್ಯೆಯ ಅವಲೋಕನದಲ್ಲಿ ಮುಳುಗುತ್ತಾರೆ. ಆದರೆ ಬುದ್ಧನೊಬ್ಬನೇ ತಾನು ತಿಳಿದ ಭಗವತ್ ಜ್ಞಾನ ಅಥವಾ ಲೋಕಜ್ಞಾನವನ್ನು ಲೋಕಕ್ಕೆಲ್ಲಾ ಹಂಚಲು ಹೊರಟ. ಕೊನೆ ಉಸಿರು ನಿಲ್ಲುವವರೆಗೂ ಜ್ಞಾನದ ಸವಿಯನ್ನು ಜನರಿಗೆ ಹಂಚುವುದನ್ನು ನಿಲ್ಲಿಸಲಿಲ್ಲ.

ರಾಜ ಶುದ್ಧೋದನ ಮತ್ತು ರಾಣಿ ಮಾಯಾದೇವಿಯ ಮಗನಾಗಿ ರಾಜಕುಮಾರನಂತೆ ಸುಖವಾಗಿದ್ದ ಸಿದ್ಧಾರ್ಥನಿಗೆ ಬುದ್ಧನಾಗಲು ಪ್ರೇರೇಪಿಸಿದ್ದು ಸಾವು-ನೋವು. ಭಗವಂತನ ಸೃಷ್ಟಿಯಲ್ಲಿ ಕಷ್ಟಗಳೇಕಿವೆ? ಇರುವಷ್ಟು ಸುಖ ಎಲ್ಲರಿಗೂ ಸಮನಾಗಿ ಏಕಿಲ್ಲ? ಯಾಕಿಂಥ ತಾರತಮ್ಯ? ಸುಖ-ದುಃಖಗಳು ಜೀವಾತ್ಮಗಳಿಗೇ ಏಕೆ ಬಾಧಿಸುತ್ತವೆ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಹುಡುಕಲು ಅರ್ಧರಾತ್ರಿಯಲ್ಲಿ ಹೊರಟ. ಇಡೀ ಜಗತ್ತು ಇದ್ಯಾವ ಚಿಂತೆಯೂ ಮಾಡದೆ ಮಲಗಿರುವಾಗ, ಎದ್ದು ಕೂತ. ಹತ್ತಾರು ವರ್ಷಗಳ ಕಾಲ ಬೋಧಿವೃಕ್ಷದ ಕೆಳಗೆ ತಪಸ್ಸು ಮಾಡಿ ಜ್ಞಾನದ ಬೆಳಕು ಕಂಡ. ಆ ಬೆಳಕಿನ ದೀಪ ಹಿಡಿದು ಎಲ್ಲರ ಮನದ ಕತ್ತಲೇ ಬೆಳಗಿದ. ತಾನು ತಿಳಿದ ಜೀವ-ಜೀವನದ ಸತ್ಯವನ್ನು ಹಂಚಿದ.

ಬುದ್ಧ ನೀಡಿದ ಸರಳ ಜ್ಞಾನಾಮೃತವಾದ 'ಆಸೆಯೇ ದುಃಖಕ್ಕೆ ಮೂಲ' ಅನ್ನುವುದರಲ್ಲಿ ಬ್ರಹ್ಮಾಂಡದಷ್ಟು ಅರ್ಥವಿದೆ. ಇಂದು ನಾವು ಅನುಭವಿಸುತ್ತಿರುವ ಎಲ್ಲಾ ದುಃಖಗಳಿಗೂ ಆಸೆಗಳೇ ಕಾರಣವಾಗಿವೆ. ಕೊರೊನಾದಂಥ ಕ್ರಿಮಿ ಜಗತ್ತನ್ನೇ ಆವರಿಸುವುದರಲ್ಲೂ ಆಸೆಯ ನೆರಳಿದೆ. ಇಂಥ ಆಸೆಗಳೇ ಮನುಕುಲಕ್ಕೆ ದುಃಖತರುತ್ತಿದೆ. ತಾನು-ತನ್ನದು ಎಂಬ ಲೋಭ ಮೋಹದಲ್ಲಿ ಮುಳುಗಿರುವ ಮಾನವರಿಗೆ ಬುದ್ಧನ ಬುದ್ಧಿವಂತಿಕೆ ಮಾತುಗಳು ಅರ್ಥವಾಗುವುದಿಲ್ಲ. ನಿಃಸ್ವಾರ್ಥವಾದ 'ಸಚ್ಚಿದಾನಂದ' ಮನಸ್ಸುಗಳು ಮಾತ್ರ ಬುದ್ಧತತ್ವವನ್ನು ಅರಿತು, ಉಲ್ಲಸಿತ ಭಾವದಲ್ಲಿ ಪ್ರಫುಲ್ಲವಾಗಿರುತ್ತವೆ.

ದಿನ ಭವಿಷ್ಯ

ಶನಿವಾರ ಮೇ 22, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಕೃತ್ತಿಕಾ ಏಕಾದಶಿ ಗಂ. 50-58 (ರಾ. 2-24) ಶನಿವಾರ ನಿತ್ಯ ನಕ್ಷತ್ರ ಉತ್ತರ ಫಲ್ಗುಣಿ ಗಂ. 9-37 (ಹ. 9-52) ವಜ್ರ ನಾಮ ಯೋಗ ಗಂ 21-39 ವಣಿಜ ಕರಣ ಗಂ. 23-12 ವಿಷ ಗಂ. 29-36 ಅಮೃತ ಗಂ. 52-27: ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 5-57 ಸೂರ್ಯಾಸ್ತ: 6-36 ಅದೃಷ್ಟ ಸಂಖ್ಯೆ 1, 9

ಮೇಷ: ಆರ್ಥಿಕ ಸ್ಥಿತಿಯಲ್ಲಿ ಏರುಪೇರು ಕಂಡುಬರಲಿದೆ. ಮಂಗಳಕಾರ್ಯಗಳಿಗಾಗಿ ಓಡಾಟ. ವೃತ್ತಿರಂಗದಲ್ಲಿ ಮುನ್ನಡೆಯನ್ನು ಕಾಣುವಿರಿ. ಒಟ್ಟಾರೆ ಉತ್ತಮ ಫಲಗಳನ್ನು ಪಡೆಯಲಿದ್ದೀರಿ.

ವೃಷಭ: ದೇಹಾರೋಗ್ಯದ ಬಗ್ಗೆ ಗಮನ ಹರಿಸಲಿದ್ದೀರಿ. ಸಾಂಸಾರಿಕವಾಗಿ ಚೇತರಿಕೆ ಮತ್ತು ಆರ್ಥಿಕ ಅಭಿವೃದ್ಧಿ ಕಂಡುಬರಲಿದೆ. ಹಿರಿಯರೊಡನೆ ವಾದವಿವಾದ ಬದಲಾಗಿ ಸಂಯಮದ ವರ್ತನೆ ಉತ್ತಮ. ಶುಭದಿನವಾಗಲಿದೆ.

ಮಿಥುನ: ಹಂತಹಂತವಾಗಿ ತೋರಿಬರುವ ಅಭಿವೃದ್ಧಿ ಸಮಾಧಾನ ತಂದೀತು. ಸಂಗಾತಿಯೊಂದಿಗೆ ಸಂತಸದ ದಿನವಾಗಲಿದೆ. ದೂರ ಸಂಚಾರ ದಿನದ ಮಟ್ಟಿಗೆ ಮಾಡದಿರುವುದೇ ಲೇಸು. ಆರೋಗ್ಯದ ಬಗ್ಗೆ ಗಮನ ಅಗತ್ಯ.

ಕರ್ಕಾಟಕ: ನಿಮ್ಮ ಪ್ರಯತ್ನ ಬಲ, ಕ್ರಿಯಾಶೀಲತೆಯಿಂದಾಗಿ ಕಾರ್ಯಸಾಧನೆಯಲ್ಲಿ ಉತ್ತಮ ಫಲ ದೊರೆಯಲಿದೆ. ಆರೋಗ್ಯದ ಕುರಿತಂತೆ ಹೆಚ್ಚಿನ ಕಾಳಜಿ ವಹಿಸುವುದು ಅಗತ್ಯ. ದೇವತಾಕಾರ್ಯಗಳಲ್ಲಿ ಆಸಕ್ತರಾಗುವಿರಿ.

ಸಿಂಹ: ಆರ್ಥಿಕ ಸ್ಥಿತಿಯಲ್ಲಿಯೂ ಸೇರಿದಂತೆ ಗೊಂದಲಮಯವಾದ ಮನಸಿನಿಂದಾಗಿ ಆತಂಕ ಎದುರಾದೀತು. ಯಾವುದಕ್ಕೂ ಪ್ರಮುಖ ನಿರ್ಧಾರಗಳನ್ನು ಮಾಡದಿರುವುದು ಉತ್ತಮ. ವಿದ್ಯಾಭ್ಯಾಸದಲ್ಲಿ ಅನುಕೂಲ.

ಕನ್ಯಾ: ನಾನಾ ರೀತಿಯ ವ್ಯವಹಾರದಿಂದಾಗಿ ಹಣಕಾಸಿನ ಅಭಿವೃದ್ಧಿಯನ್ನು ಕಾಣಲಿದ್ದೀರಿ. ಸರ್ಕಾರಿ ಅಧಿಕಾರಿಗಳಿಂದ ಕಾರ್ಯಾನುಕೂಲವಾಗಲಿದೆ. ಅನಿರೀಕ್ಷಿತ ದೇವತಾ ದರ್ಶನ ಭಾಗ್ಯ ದೊರಕಲಿದೆ.

ತುಲಾ: ವೃತ್ತಿರಂಗದಲ್ಲಿ ಸಮಾಧಾನ ಕಂಡುಬರುತ್ತದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹಿನ್ನಡೆಯ ಸಾಧ್ಯತೆ ಇದ್ದು ಹೆಚ್ಚಿನ ಶ್ರಮ ವಹಿಸಬೇಕಾದೀತು. ಅನಿರೀಕ್ಷಿತ ಬಂಧುಗಳ ಆಗಮನ. ಸ್ವಲ್ಪ ಹೆಚ್ಚಿನದಾದ ವೆಚ್ಚ ಭರಿಸಬೇಕಾದೀತು.

ವೃಶ್ಚಿಕ: ದೈಹಿಕ ಮತ್ತು ಮಾನಸಿಕವಾಗಿ ಸ್ವಲ್ಪಮಟ್ಟಿನ ಅಸಮಾಧಾನ ಅಸಹನೆಗಳು ಕಂಡುಬರಲಿದೆ. ವೈವಾಹಿಕ ವಿಚಾರಗಳು ವಿಳಂಬವಾಗುವ ಸಾಧ್ಯತೆ ಕಂಡುಬರುತ್ತದೆ. ದೇವತಾರಾಧನೆಯಿಂದ ನೆಮ್ಮದಿ ಹೊಂದುವಿರಿ.

ಧನು: ಉದ್ಯೋಗದಲ್ಲಿ ನೆಮ್ಮದಿ ಹಾಗೂ ಅಭಿವೃದ್ಧಿಯನ್ನು ಕಾಣಲಿದ್ದೀರಿ. ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ಸಮಸ್ಯೆ ಕಂಡುಬಂದರೂ ಆತಂಕಕ್ಕೆ ಕಾರಣವಿಲ್ಲ. ಕಾರ್ಯಸಿದ್ಧಿಯೊಂದಿಗೆ ಧನಾಗಮನವಾಗುವ ಸಾಧ್ಯತೆ.

ಮಕರ: ನೌಕರವರ್ಗದವರಿಗೆ ಸಂತೋಷದ ದಿನವಾಗಲಿದೆ. ವಿದ್ಯಾರ್ಥಿಗಳಲ್ಲಿ ಅಭ್ಯಾಸದ ಬಗ್ಗೆ ಉದಾಸೀನತೆ ಕಂಡುಬರಲಿದೆ. ಪ್ರಯಾಣದಲ್ಲಿ ವಿಘ್ನಗಳು ಎದುರಾಗುವ ಸಾಧ್ಯತೆ ಇದ್ದು ಪ್ರಯಾಣ ಮಾಡದಿರುವುದು ಉಚಿತ.

ಕುಂಭ: ಆರೋಗ್ಯದಲ್ಲಿ ಗಣನೀಯ ಸುಧಾರಣೆಯನ್ನು ಕಾಣಲಿದ್ದೀರಿ. ರಕ್ಷಣಾ ಕ್ಷೇತ್ರದಲ್ಲಿರುವವರಿಗೆ ಮುಂಬಡ್ತಿ ಮುಂತಾದ ಉಡುಗೊರೆಗಳು ದೊರಕುವ ಸಾಧ್ಯತೆ. ವಿದ್ಯಾಭ್ಯಾಸದಲ್ಲಿ ಉತ್ತಮ ಪ್ರಗತಿಯನ್ನು ಕಾಣಲಿದ್ದೀರಿ.

ಮೀನ: ಉದ್ದೇಶಿತ ಕಾರ್ಯಗಳಲ್ಲಿ ವಿಳಂಬವಾದರೂ ಪ್ರಗತಿಯನ್ನು ಕಾಣಲಿದ್ದೀರಿ. ವಿವಿಧ ಮೂಲಗಳಿಂದ ಆರ್ಥಿಕ ಅನುಕೂಲತೆಗಳು ದೊರಕುವವು. ಉದ್ಯೋಗಕ್ಷೇತ್ರದಲ್ಲಿ ಉತ್ತಮ ಪ್ರಗತಿಯನ್ನು ಕಾಣಲಿದ್ದೀರಿ.

ನಿಮ್ಮ ಜನ್ಮದಿನ 22-ಮೇ ಈ ದಿನ ಅತ್ಯಂತ ಶುಭಕರ. ಆರ್ಥಿಕ ಅನುಕೂಲ. ಎಲ್ಲವೂ ಸಕಾಲದಲ್ಲಿ ಒದಗಿ ಬಂದು ಜೀವನವೊಂದು ಮಧುರವಾದ ಅನುಭವವನ್ನು ನೀಡಲಿದೆ. ಉತ್ತಮ ಬಾಂಧವ್ಯವು ಕೂಡಿ ಬಂದು ಸಂತೋಷಮಯವಾದ ಜೀವನ. ಉತ್ತಮ ಸಂಸ್ಕಾರವಂತರಾಗಿ ಸಮಾಜದಲ್ಲಿನ ಗೌರವಕ್ಕೆ ಚ್ಯುತಿ ಬಾರದಂತೆ ವ್ಯವಹಾರಗಳು ಸಾಗುವವು.

ಪದಬಂಧ 4604


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಕಂದಾಯವನ್ನು ನಿಗದಿಪಡಿಸುವ ವ್ಯವಸ್ಥೆ (4)
5.ನಗದೊಡನೆ ಕೈಯಲ್ಲಿರುವ ಹಣವೂ ಇದೆ (3)
6.ತಾಯಿಯ ಮನೆಯ ಕಿಟಕಿ (4)
8.ಗರದಲ್ಲಿರುವ ಅನ್ಯ ಮಾರ್ಗ (4)
12.ನಡುವೆ ಕಟಿಯನ್ನಿಟ್ಟು ತೋರ್ಪಡಿಸು! (4)
14.ವಾದಕ್ಕೆ ಗ್ರಾಸವಾದ ತರ್ಜುಮೆ (4)
15.ಹೊರದೂಡಲ್ಪಟ್ಟವನು (3)
16.ಮಾನವನ್ನು ಹೊಂದಿದ ವಸ್ತುಸ್ಥಿತಿ (4)

ಮೇಲಿಂದ ಕೆಳಕ್ಕೆ

1.ಓದು ಬರಹ ಗೊತ್ತೇ ಇರದವನು (5)
2.ರಾಜ, ಮಂತ್ರಿ ಮುಂತಾದ ಕಾಯಿಗಳಿಂದ ಆಡುವ ಆಟ (4)
3.ವಾರದ ಕೊನೆಗೆ ಧರಿಸಿದ ಯಜ್ಞೋಪವೀತ (4)
4.ದಿನದೊಳಗೆ ಆಗಮಿಸಿದ ಮಂತ್ರಿ (3)
7.ಶ್ರಮ ನಿರ್ವಹಿಸುವಿಕೆ (2)
9.ಕುತೂಹಲದಿಂದ ಕೂಡಿದ ಆಸೆ (3)
10.ಗಾಳಿಯಿಂದ ಕೂಡಿದ ಪ್ರದೇಶ (5)
11.ತಲೆ ಕೂದಲಿಗೆ ಹತ್ತುವ ಕ್ರಿಮಿ (2)
12.ತೋರಿಸುವಿಕೆಯನ್ನು ಹೀಗೆನ್ನಿ (4)
13.ಹೂವಿನ ಶರ (4)
14.ಅಡಗಿಕೊಳ್ಳಲು ಪ್ರಶಸ್ತವಾದ ಕಾಡು (3)



4603ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಶೇಷಪ್ರಶ್ನೆ 3.ತಲೆದೂಗು 5.ಮತ 6.ಪರಿಚಯ 8.ಜಾಗ 9.ಮಜ್ಜೆ 10.ತರಕಾರಿ 12.ಸುತ 15.ಹರಿದಾರಿ 16.ನವರಂಗ

ಮೇಲಿಂದ ಕೆಳಕ್ಕೆ: 1.ಶೇಷ 2.ಪ್ರಭಾತ 3.ತರಾತುರಿ 4.ಗುನ್ನ 5.ಮನೋಗತ 6.ಪರಾರಿ 7.ಯಮದೂತ 11.ಕಾಲುದಾರಿ 12.ಸುದೈವ 13.ದೇಹ 14.ಬೀಗ

ಸುಡೊಕು 4990

		1		7		6		2
		5	2		9			
2	8			1			9	
	5		7		4	8		
				8		5		9
8	3	6						4
6				5		9		7
	7	8	1					
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4989 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಕೋವಿಡ್: ಖಾಸಗಿ ಆಂಬುಲೆನ್ಸ್ ಸೇವೆಗೆ ದರ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರ್ಯಾಚರಣೆ ನಡೆಸುತ್ತಿರುವ ಖಾಸಗಿ ಆಂಬುಲೆನ್ಸ್‌ಗಳ ಸೇವೆಗೆ ಸರ್ಕಾರವು ದರ ನಿಗದಿ ಮಾಡಿದ್ದು, 10 ಕಿ.ಮೀ.ವರೆಗಿನ ಸಂಚಾರಕ್ಕೆ ₹ 1,500 ನಿಗದಿಪಡಿಸಲಾಗಿದೆ.

ಕೋವಿಡ್ ಕಾಯಿಲೆ ಕಾಣಿಸಿಕೊಂಡ ಬಳಿಕ ಆಂಬುಲೆನ್ಸ್‌ಗಳಿಗೆ ಬೇಡಿಕೆ ಹೆಚ್ಚಿದೆ. ಕೆಲವು ಆಂಬುಲೆನ್ಸ್ ಸೇವೆ ಪೂರೈಕೆದಾರರು ಸೋಂಕಿತರಿಂದ ಅಧಿಕ ಹಣವನ್ನು ಸುಲಿಗೆ ಮಾಡುತ್ತಿದ್ದಾರೆ ಎಂಬ ಆರೋಪಗಳು ಕೇಳಿ ಬಂದಿದ್ದವು. ಹೀಗಾಗಿ, ಸರ್ಕಾರವು ಸಾರಿಗೆ ಆಯುಕ್ತರಿಂದ ವಿವಿಧ ವೆಚ್ಚಗಳ ಬಗ್ಗೆ ವರದಿ ಪಡೆದು, ಆದೇಶ ಹೊರಡಿಸಿದೆ.

10 ಕಿ.ಮೀ. ನಂತರದ ಬಳಿಕ ಪ್ರತಿ ಕಿ.ಮೀ.ಗೆ ₹ 120 ನಿಗದಿ ಮಾಡಲಾಗಿದೆ. ಪ್ರತಿ ಗಂಟೆಗೆ ₹ 200 ಕಾಯುವ ಶುಲ್ಕ ಗೊತ್ತುಪಡಿಸಲಾಗಿದೆ. ಈ ದರವು ರೋಗಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಕರೆದೊಯ್ಯುವ ಆಂಬುಲೆನ್ಸ್‌ಗಳಿಗೆ ಅನ್ವಯವಾಗಲಿದೆ.

ಜೀವ ರಕ್ಷಕ ವ್ಯವಸ್ಥೆ (ಲೈಫ್ ಸಪೋರ್ಟ್) ಹೊಂದಿರುವ ಆಂಬುಲೆನ್ಸ್‌ಗಳಿಗೆ 10 ಕಿ.ಮೀ ಒಳಗಡೆಯ ಸಂಚಾರಕ್ಕೆ ₹ 2 ಸಾವಿರ ಹಾಗೂ ನಂತರ ಪ್ರತಿ ಕಿ.ಮೀ.ಗೆ ₹ 120 ನಿಗದಿಪಡಿಸಲಾಗಿದೆ. ಕಾಯುವ ಶುಲ್ಕ ₹ 250 ಗೊತ್ತುಪಡಿಸಲಾಗಿದೆ. ಈ ದರವು ವೈಯಕ್ತಿಕ ಸುರಕ್ಷಾ ಸಾಧನಗಳ ಬಳಕೆ, ವೈದ್ಯಕೀಯ ಆಮ್ಲಜನಕ, ಸಲಕರಣೆಗಳು ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒಳಗೊಂಡಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಉಪಮುಖ್ಯಮಂತ್ರಿ ಡಾ.ಅಶ್ವತ್ಥನಾರಾಯಣ ಮಾಹಿತಿ

500 ಕಡೆ ಆಮ್ಲಜನಕ ಉತ್ಪಾದನಾ ಘಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಇನ್ನು ಒಂದೆರಡು ತಿಂಗಳಲ್ಲಿ 500 ಕಡೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲಾಗುವುದು ಎಂದು ಕೋವಿಡ್ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಯೊಂದು ಸಮುದಾಯ ಆರೋಗ್ಯ ಕೇಂದ್ರ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕವನ್ನು ಸ್ಥಾಪಿಸಲಾಗುವುದು. ಈ ಆಸ್ಪತ್ರೆಗಳಲ್ಲಿ ಐಸಿಯುಗಳನ್ನೂ ಅಳವಡಿಸಲಾಗುವುದು ಎಂದು ಹೇಳಿದರು.

ಒಂದು ಆಮ್ಲಜನಕ ಹೊಂದಿದ ಹಾಸಿಗೆಗೆ 20 ಸಾವಿರ ಲೀಟರ್ ಆಮ್ಲಜನಕವನ್ನು ಪೂರೈಸಬೇಕು. ಈ ಲೆಕ್ಕವನ್ನು ನೋಡಿದರೆ, ರಾಜ್ಯದಲ್ಲಿರುವ ಎಲ್ಲ ಆಮ್ಲಜನಕ ಹಾಸಿಗೆಗಳಿಗೆ ಆಗಿ ಮಿಗುವಷ್ಟು ಆಮ್ಲಜನಕದ ತುರ್ತು ಸಂಗ್ರಹ ನಮ್ಮಲ್ಲಿದೆ. ಮೂರನೇ ಅಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಇನ್ನು ಹೆಚ್ಚಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಈಗಾಗಲೇ ರಾಜ್ಯದಲ್ಲಿ 3 ಸಾವಿರ ವೆಂಟಿಲೇಟರ್, 25 ಸಾವಿರ ಆಮ್ಲಜನಕ ಹಾಸಿಗೆಗಳನ್ನು ಹೆಚ್ಚುವರಿಯಾಗಿ ಒಂದು ವರ್ಷದ ಅವಧಿಯಲ್ಲಿ ಸಿದ್ಧಪಡಿಸಿದ್ದೇವೆ. ಈ ಪ್ರಮಾಣವನ್ನು ಇನ್ನೂ ಹೆಚ್ಚಿಸುತ್ತೇವೆ ಎಂದು ಹೇಳಿದರು.

ಜೂನ್ 1ಕ್ಕೆ ಲಸಿಕೆಗೆ ಹೊಸ ಪೋರ್ಟಲ್: ರಾಜ್ಯದಲ್ಲಿ ಲಸಿಕೆ ನೀಡಲು ಮತ್ತು ಅದರ ಮೇಲೆ ವ್ಯವಸ್ಥಿತವಾಗಿ ನಿಗಾ ಇರಿಸಲು ಅಭಿವೃದ್ಧಿಪಡಿಸಿರುವ ಪೋರ್ಟಲ್ ಜೂನ್ 1ರಿಂದ ಕಾರ್ಯ ನಿರ್ವಹಿಸಲಿದೆ ಎಂದು ಅಶ್ವತ್ಥನಾರಾಯಣ ಹೇಳಿದರು.

ಕೇಳಿದಷ್ಟು ಔಷಧ ಪೂರೈಕೆ ಸಾಧ್ಯವಾಗಿಲ್ಲ:ಡಿವಿಎಸ್

ಕಪ್ಪು ಶಿಲೀಂಧ್ರ ಸೂಂಕಿಗೆ ರಾಜ್ಯ ಕೇಳಿರುವಷ್ಟು ಔಷಧಿಯನ್ನು ಪೂರೈಕೆ ಮಾಡಲು ಸಾಧ್ಯವಾಗಿಲ್ಲ, ಮುಂಬರುವ ದಿನಗಳಲ್ಲಿ ಪೂರೈಕೆ ಮಾಡಲಾಗುವುದು ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರಗಳ ಸಚಿವ ಡಿ.ವಿ.ಸದಾನಂದಗೌಡ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಪ್ಪು ಶಿಲೀಂಧ್ರಕ್ಕೆ 20 ಸಾವಿರ ವಯಲ್ಸ್ ಔಷಧ ನೀಡುವಂತೆ ರಾಜ್ಯ ಸರ್ಕಾರ ಇದೇ 14 ರಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ. ಈಗಾಗಲೇ 1050 ವಯಲ್ಸ್ ಕಳಿಸಲಾಗಿದೆ. ಉಳಿದದ್ದನ್ನು ಆದಷ್ಟು ಬೇಗನೆ ಕಳಿಸುವುದಾಗಿ ಭರವಸೆ ನೀಡಿದರು.

ಮತ್ತೆ 14 ದಿನ ಲಾಕ್‌ಡೌನ್ ವಿಸ್ತರಣೆ

ಒಂದನೇ ಪುಟದಿಂದ

‘ರಾಜ್ಯದಲ್ಲಿ ಲಾಕ್‌ಡೌನ್ ವಿಧಿಸಿದ ಬಳಿಕ ಕೊರೊನಾ ಸೋಂಕು ನಿಯಂತ್ರಣಕ್ಕೆ ಬರಲಾರಂಭಿಸಿದೆ. ಸಾರ್ವಜನಿಕರೂ ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಆದರೆ ರಾಜ್ಯದ ಎಲ್ಲ ಭಾಗದಲ್ಲೂ ನಿಯಂತ್ರಣಕ್ಕೆ ತರಲು ಕಠಿಣ ನಿಯಮ ಪಾಲಿಸಬೇಕಾಗಿದೆ. ಈ ಸಂಬಂಧ ತಜ್ಞರು ನೀಡಿರುವ ಅಭಿಪ್ರಾಯವನ್ನು ಪರಿಗಣಿಸಿದ್ದೇವೆ’ ಎಂದು ಹೇಳಿದರು.

ಬೆಳಿಗ್ಗೆ 9.45 ಬಳಿಕ ಕಠಿಣ ಕ್ರಮ: ‘ಈಗಿರುವಂತೆ ಬೆಳಿಗ್ಗೆ 6 ರಿಂದ 10 ರವರೆಗೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ಇರುತ್ತದೆ. ಮಾರಾಟಗಾರರು 9.45 ಕ್ಕೇ ಬಾಗಿಲು ಹಾಕಿ ಮನೆಗಳಿಗೆ ಹೋಗಬೇಕು. ಅ ಬಳಿಕ ರಸ್ತೆಗಳಿಗೆ ಬಂದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಯಡಿಯೂರಪ್ಪ ಎಚ್ಚರಿಕೆ ನೀಡಿದರು.

‘ಬೆಂಗಳೂರು ನಗರ ಮತ್ತು ಇತರ ಕೆಲವು ನಗರಗಳಲ್ಲಿ ಕೆಲವು ಅನಗತ್ಯವಾಗಿ ಓಡಾಡುತ್ತಿರುವುದು ಗಮನಕ್ಕೆ ಬಂದಿದೆ. ಅದಕ್ಕೆ ಅವಕಾಶ ನೀಡುವುದಿಲ್ಲ. ಮಾಸ್ಕ್ ಧರಿಸುವುದೂ ಸೇರಿ ಮಾರ್ಗಸೂಚಿಯನ್ನು ಎಲ್ಲರೂ ಕಟ್ಟುನಿಟ್ಟಾಗಿ ಪಾಲಿಸಬೇಕು. ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ಜರುಗಿಸಲಾಗುವುದು’ ಎಂದೂ ಹೇಳಿದರು.

ಲಾಕ್‌ಡೌನ್: 12 ದಿನಗಳಲ್ಲಿ 4.33 ಲಕ್ಷ ಪ್ರಕರಣ

ಒಂದನೇ ಪುಟದಿಂದ

ಕಳೆದ ವರ್ಷ ಅಕ್ಟೋಬರ್ ಬಳಿಕ ನಿಯಂತ್ರಣಕ್ಕೆ ಬಂದಿದ್ದ ಕೋವಿಡ್, ಮಾರ್ಚ್ ನಂತರ ಏರುಗತಿ ಪಡೆದುಕೊಂಡಿತು. ಎರಡನೇ ಅಲೆಯಲ್ಲಿ ಸೋಂಕು ವೇಗವಾಗಿ ವ್ಯಾಪಿಸಿಕೊಳ್ಳಲಾರಂಭಿಸಿದ ಕಾರಣ ಸರ್ಕಾರವು ಏ.10 ರಿಂದ 7 ಜಿಲ್ಲೆಗಳಿಗೆ ಅನ್ವಯವಾಗುವಂತೆ ರಾತ್ರಿ ಹಾಗೂ ವಾರಾಂತ್ಯ ಕರ್ಫ್ಯೂ ವಿಧಿಸಿತ್ತು. ಬಳಿಕ ಅದನ್ನು ಎಲ್ಲ ಜಿಲ್ಲೆಗಳಿಗೆ ವಿಸ್ತರಿಸಲಾಯಿತು. ಆ ವೇಳೆಗೆ ರಾಜ್ಯದಲ್ಲಿ ಸೋಂಕು ದೃಢ ಪ್ರಮಾಣ ಶೇ 7.04ರಷ್ಟಿತ್ತು. 69 ಸಾವಿರ ಸಕ್ರಿಯ ಪ್ರಕರಣಗಳಿದ್ದವು.

ಏ.27ರಿಂದ ಮೇ 9ರವರೆಗೆ ಕೆಲವು ಚಟುವಟಿಕೆಗಳಿಗೆ ಮಾತ್ರ ಅವಕಾಶ ಕಲ್ಪಿಸಿ ಇಡೀ ರಾಜ್ಯದಲ್ಲಿ ಜನತಾ ಕರ್ಫ್ಯೂ ಜಾರಿ ಮಾಡಲಾಯಿತು. ಈ ಅವಧಿಯಲ್ಲಿ 5.65 ಲಕ್ಷ ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಅದೇ ರೀತಿ, 4,149 ಮಂದಿ ಸಾವಿಗೀಡಾಗಿರುವುದು ಖಚಿತಪಟ್ಟಿದೆ. ಹೀಗಾಗಿ ಸರ್ಕಾರ ಜಾರಿಗೊಳಿಸಿದ ಜನತಾ ಕರ್ಫ್ಯೂ ಬಗ್ಗೆ ಸಾರ್ವಜನಿಕ ವಲಯದಲ್ಲಿ ಟೀಕೆ ವ್ಯಕ್ತವಾಗಿತ್ತು.

ರಾಜ್ಯದ ವಿವಿಧೆಡೆ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಶುಕ್ರವಾರ ಧಾರಾಕಾರ ಮಳೆಯಾಗಿದೆ. ಬೆಳಗಾವಿ, ಬಳ್ಳಾರಿ, ವಿಜಯಪುರಗಳಲ್ಲಿ ಸಾಧಾರಣ ಹಾಗೂ ಹುಬ್ಬಳ್ಳಿ, ಗದಗ, ಬಾಗಲಕೋಟೆ, ಹೊಸಪೇಟೆಯಲ್ಲಿ ಧಾರಾಕಾರ ಮಳೆಯಾಗಿದೆ.

ಗದಗ ಜಿಲ್ಲೆಯ ಬೆಟಗೇರಿ, ನರೇಗಲ್, ಮುಂಡರಗಿ, ಶಿರಹಟ್ಟಿಗಳಲ್ಲಿ ಬಿರುಸಿನ ಮಳೆಯಾಗಿದೆ. ಹಂಪಿ ಸುತ್ತಮುತ್ತ, ಕಮಲಾಪುರಗಳಲ್ಲಿ ಗಂಟೆಗೂ ಹೆಚ್ಚು ಸಮಯ ಬಿರುಗಾಳಿ ಸಹಿತ ಮಳೆಯಾಗಿದೆ. ಹಾಸನ ನಗರ ಹಾಗೂ ವಿವಿಧೆಡೆ ಗುಡುಗು ಸಹಿತ ಸಾಧಾರಣ ಹಾಗೂ ಸಕಲೇಶಪುರ, ಬೇಲೂರು, ಆಲೂರು ತಾಲ್ಲೂಕುಗಳಲ್ಲಿ ತುಂತುರು ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಮೊಳಕಾಲ್ಮುರು, ಚಳ್ಳಕೆರೆ, ಹೊಸದುರ್ಗ ತಾಲ್ಲೂಕುಗಳಲ್ಲಿ ಹಾಗೂ ದಾವಣಗೆರೆ ಜಿಲ್ಲೆಯ ದಾವಣಗೆರೆ ನಗರ, ಹೊನ್ನಾಳಿ, ಮಲೇಬೆನ್ನೂರಿನಲ್ಲಿ ಸಾಧಾರಣ ಮಳೆಯಾಗಿದೆ.

ಯಾದಗಿರಿ ಜಿಲ್ಲೆಯ ವಡಗೇರಾ ತಾಲ್ಲೂಕಿನ ವಿವಿಧೆಡೆ ಸಾಧಾರಣ, ರಾಯಚೂರಿನಲ್ಲಿ ಕೆಲ ಹೊತ್ತು ತುಂತುರು ಮಳೆಯಾಯಿತು. ದಕ್ಷಿಣ ಕನ್ನಡ, ಚಿಕ್ಕಮಗಳೂರು, ಉಡುಪಿ ಜಿಲ್ಲೆಗಳ ಹಲವೆಡೆ ಶುಕ್ರವಾರ ಸಾಧಾರಣ ಮಳೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಹದವಾದ ಮಳೆಯಾಗಿದೆ.

ಮಳೆ–ಎಲ್ಲಿ, ಎಷ್ಟು?

ಕೋಲಾರದಲ್ಲಿ ಶುಕ್ರವಾರ 10 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಭಟ್ಕಳ, ಸುಳ್ಯ, ಆನೇಕಲ್, ಭಾಗಮಂಡಲ, ಗೌರಿಬಿದನೂರು 3, ಕಾರವಾರ, ರಾಯಚೂರು, ಅಂಕೋಲಾ, ಕಾರ್ಕಳ, ಸಂಡೂರು, ಶ್ರೀರಂಗಪಟ್ಟಣ, ಬಂಗಾರಪೇಟೆ, ಬೆಂಗಳೂರಿನಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ. ಕಲಬುರ್ಗಿಯಲ್ಲಿ 36.4 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.



ಹುಬ್ಬಳ್ಳಿಯಲ್ಲಿ ಶುಕ್ರವಾರ ಸಂಜೆ ಸುರಿದ ಮಳೆಯಲ್ಲಿ ಭವಾನಿ ನಗರದ ರೈಲ್ವೆ ಸೇತುವೆ ಕೆಳಭಾಗದಲ್ಲಿ ಸಾಗಿದ ವಾಹನಗಳು —ಪ್ರಜಾವಾಣಿ ಚಿತ್ರ

13 ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’

ಬೆಂಗಳೂರು: ಹವಾಮಾನ ವೈಪರೀತ್ಯದಿಂದ ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಮೇ 25ರವರೆಗೆ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಹಲವು ಜಿಲ್ಲೆಗಳಲ್ಲಿ ಶುಕ್ರವಾರ ಹೆಚ್ಚು ಮಳೆಯಾಗಿದೆ. ಕರಾವಳಿ ಜಿಲ್ಲೆಗಳಲ್ಲಿ 25ರವರೆಗೆ ವ್ಯಾಪಕ ಮಳೆಯಾಗಲಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಚಾಮರಾಜನಗರ, ಚಿಕ್ಕಬಳ್ಳಾಪುರ, ಹಾಸನ, ಕೊಡಗು, ಕೋಲಾರ, ಮೈಸೂರು ಹಾಗೂ ರಾಮನಗರ ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗುವ ಮುನ್ಸೂಚನೆ ಇದ್ದು, ಮೇ 22ರವರೆಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ ಎಂದು ಮಾಹಿತಿ ನೀಡಿದೆ.

ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮೇ 26ರವರೆಗೆ ಗುಡುಗು, ಸಿಡಿಲು ಸಹಿತ ಮಳೆಯಾಗಬಹುದು. ಉತ್ತರ ಒಳನಾಡಿನಲ್ಲಿ ಒಣಹವೆ ಮುಂದುವರಿದರೂ ಕೆಲವು ಕಡೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

‘ದಲೈಲಾಮಾ ಉತ್ತರಾಧಿಕಾರಿ: ಚೀನಾ ಒಪ್ಪಿಗೆ ಅಗತ್ಯ’

ಬೀಜಿಂಗ್ (ಪಿಟಿಐ): ಟಿಬೆಟ್‌ನ ಅಧ್ಯಾತ್ಮ ಗುರು ದಲೈಲಾಮಾ ಅವರ ಉತ್ತರಾಧಿಕಾರಿ ಆಯ್ಕೆಗೆ ಚೀನಾದ ಅನುಮೋದನೆ ಬೇಕು. ಈಗಿನ ದಲೈಲಾಮಾ ಮತ್ತು ಅವರ ಬೆಂಬಲಿಗರು ಹಾಗೂ ಅನುಯಾಯಿಗಳು ಆಯ್ಕೆ ಮಾಡಿದ ಯಾವುದೇ ಉತ್ತರಾಧಿಕಾರಿಗೆ ಮಾನ್ಯತೆ ನೀಡಲಾಗುವುದಿಲ್ಲ ಎಂದು ಚೀನಾ ಶುಕ್ರವಾರ ಹೇಳಿದೆ.

ಐಜಿಪಿ ಸೇರಿ ಅಧಿಕಾರಿಗಳ ಎತ್ತಂಗಡಿ

ಕಾರಿನಲ್ಲಿದ್ದ 4 ಕೆ.ಜಿ. 900 ಗ್ರಾಂ.ಚಿನ್ನ ನಾಪತ್ತೆ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಯಮಕನಮರಡಿ ಬಳಿ ಪೊಲೀಸರು ಕಾರು ತಡೆದು ತಪಾಸಣೆ ನಡೆಸಿದ ನಂತರ, ಕಾರಲ್ಲಿದ್ದ 4 ಕೆ.ಜಿ. 900 ಗ್ರಾಂ. ಚಿನ್ನ ನಾಪತ್ತೆ ದೂರಿಗೆ ಸಂಬಂಧಿಸಿ ಸಿಐಡಿ ಪೊಲೀಸರು ವಿಚಾರಣೆ ಆರಂಭಿಸುತ್ತಿದ್ದಂತೆಯೇ, ಐಜಿಪಿ ಸೇರಿ ಕೆಲವು ಅಧಿಕಾರಿಗಳ ವರ್ಗಾವಣೆಯಾಗಿದೆ.

ಉತ್ತರ ವಲಯ ಐಜಿಪಿ ಎಚ್.ಜಿ. ರಾಘವೇಂದ್ರ ಸುಹಾಸ್ ಅವರನ್ನು ಬೆಂಗಳೂರಿನ ಆಂತರಿಕ ಭದ್ರತಾ ವಿಭಾಗದ ಐಜಿಪಿ ಹುದ್ದೆಗೆ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇವರೊಂದಿಗೆ, ಗೋಕಾಕ ಉಪ ವಿಭಾಗದ ಡಿವೈಎಸ್ಪಿ ಜಾವೀದ್ ಇನಾಮದಾರ್ ಅವರನ್ನು ಐಎಸ್‌ಡಿಗೆ, ಡಿಎಸ್‌ಬಿ ಇನ್‌ಸ್ಪೆಕ್ಟರ್ ರಾಮೇಶ್ವರ ಕಲ್ಯಾಣಶೆಟ್ಟಿ ಅವರನ್ನು ಹುಬ್ಬಳ್ಳಿ-ಧಾರವಾಡದ ಪೊಲೀಸ್ ತರಬೇತಿ ಶಾಲೆಗೆ ಮತ್ತು ಯಮಕನಮರಡಿ ಪೊಲೀಸ್ ಠಾಣೆ ಪಿಎಸ್‌ಐ ರಮೇಶ ಪಾಟೀಲ ಅವರನ್ನು ಹುಬ್ಬಳ್ಳಿ-ಧಾರವಾಡದ ಸಿಇಎನ್ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಲಾಗಿದೆ.

ಈ ನಡುವೆ, ಮಂಗಳೂರಿನ ಉದ್ಯಮಿಗೆ ಸೇರಿದ ಚಿನ್ನ ನಾಪತ್ತೆಯಾಗಿದ್ದು ಹೇಗೆ? ಎಂಬ ನಿಟ್ಟಿನಲ್ಲಿ ಡಿಟೆಕ್ಟಿವ್ ಎಸ್ಪಿ ರಾಘವೇಂದ್ರ ಹೆಗಡೆ ನೇತೃತ್ವದ ತಂಡವು ಶುಕ್ರವಾರವೂ ಇಲ್ಲೇ ಬೀಡು ಬಿಟ್ಟಿದ್ದು, ತನಿಖೆ ಮುಂದುವರಿಸಿದೆ.

ಜ.9ರಂದು ಕಾರು ತಡೆದು ಪರಿಶೀಲನೆ ನಡೆಸಿದ್ದರು. ಕಾರಿನ ಒಳಗೆ ಮಾಡಿಫೈ ಮಾಡಿದ್ದರಿಂದ ಸಂಶಯಾಸ್ಪದ ವಾಹನವೆಂದು ಪ್ರಕರಣ ದಾಖಲಾಗಿತ್ತು. ನ್ಯಾಯಾಲಯವು ಪ್ರಕರಣವನ್ನು ಮುಂದೂಡಿತ್ತು. ಹೀಗಾಗಿ, ಕಾರನ್ನು ಯಮಕನಮರಡಿ ಠಾಣೆಯಲ್ಲಿ ನಿಲ್ಲಿಸಲಾಗಿತ್ತು. ಏ.16ಕ್ಕೆ ಕಾರು ನ್ಯಾಯಾಲಯದಲ್ಲಿ ಬಿಡುಗಡೆಯಾದಾಗ ಮಾಲೀಕರು ಪರಿಶೀಲಿಸಿದಾಗ ಅದರಲ್ಲಿ ಚಿನ್ನ ಇಲ್ಲದಿರುವುದು ಗೊತ್ತಾಗಿದೆ.

ಕಾರಿನ ಹಿಂಬದಿ ಗಾಜು ಒಡೆದು ಹೊಸ ಗಾಜು ಹಾಕಿಸಲಾಗಿತ್ತು. ಶಂಕೆಯಿಂದ ಕಾರಿನ ಮಾಲೀಕರು ಚಿನ್ನ ಕಳವಾಗಿದೆ ಎಂದು ದೂರು ನೀಡಿದ್ದರು. ಕಾರಿನ ಏರ್‌ಬ್ಯಾಗ್‌ನ ಜಾಗದಲ್ಲಿ ಚಿನ್ನ ಇಡಲಾಗಿತ್ತು ಎಂದು ತಿಳಿಸಿದ್ದರು. ವಿಚಾರಣೆ ನಡೆಸಿದ್ದ ಜಿಲ್ಲಾ ಪೊಲೀಸರು, ಪ್ರಕರಣದಲ್ಲಿ ಇಲಾಖೆಯವರೇ ಇರುವ ಸಾಧ್ಯತೆ ಕಾರಣ ಹೆಚ್ಚಿನ ತನಿಖೆ ಕೋರಿ ಸಿಐಡಿಗೆ ಬರೆದಿದ್ದರು. ಈ ಹಿನ್ನೆಲೆಯಲ್ಲಿ ತನಿಖೆ ಶುರುವಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ವೈ.ಎಸ್. ರವಿಕುಮಾರ್ ಕಲಬುರ್ಗಿ ಪೊಲೀಸ್ ಕಮಿಷನರ್

ಬೆಂಗಳೂರು: ಐಜಿಪಿ ಶ್ರೇಣಿಯ ಐವರು ಸೇರಿದಂತೆ ಆರು ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಶುಕ್ರವಾರ ಆದೇಶ ಹೊರಡಿಸಿದ್ದು, ಪೊಲೀಸ್ ನೇಮಕಾತಿ ವಿಭಾಗದ ಡಿಐಜಿ ಡಾ.ವೈ.ಎಸ್. ರವಿಕುಮಾರ್ ಅವರನ್ನು ಕಲಬುರ್ಗಿ ನಗರ ಪೊಲೀಸ್ ಕಮಿಷನರ್ ಹುದ್ದೆಗೆ ನೇಮಿಸಲಾಗಿದೆ.

ಪೊಲೀಸ್ ಪ್ರಧಾನ ಕಚೇರಿಯ ಆಡಳಿತ ವಿಭಾಗದ ಐಜಿಪಿಯಾಗಿದ್ದ ಕೆ.ವಿ. ಶರತ್ ಚಂದ್ರ ಅವರನ್ನು ಅರಣ್ಯ ಘಟಕದ ಐಜಿಪಿ ಹುದ್ದೆಗೆ, ಬಳ್ಳಾರಿ ವಲಯದ ಐಜಿಪಿ ಎಂ. ನಂಜುಂಡಸ್ವಾಮಿ ಅವರನ್ನು ಕಾರಾಗೃಹ ಇಲಾಖೆಯ ಐಜಿಪಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಈಶಾನ್ಯ ವಲಯದ ಐಜಿಪಿಯಾಗಿದ್ದ ಮನೀಶ್ ಖರ್ಬೀಕರ್ ಅವರನ್ನು ಬಳ್ಳಾರಿ ವಲಯದ ಐಜಿಯನ್ನಾಗಿ, ಉತ್ತರ ವಲಯದ (ಬೆಳಗಾವಿ) ಐಜಿಪಿ ಹುದ್ದೆಯಲ್ಲಿದ್ದ ಎಚ್.ಜಿ. ರಾಘವೇಂದ್ರ ಸುಹಾಸ್ ಅವರನ್ನು ಬೆಂಗಳೂರಿನ ಆಂತರಿಕ ಭದ್ರತಾ ವಿಭಾಗದ ಐಜಿಪಿ ಹುದ್ದೆಗೆ ಮತ್ತು ಕಲಬುರ್ಗಿ ನಗರ ಪೊಲೀಸ್ ಕಮಿಷನರ್ ಎನ್. ಸತೀಶ್ ಕುಮಾರ್ ಅವರನ್ನು ಉತ್ತರ ವಲಯದ ಐಜಿಪಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

‘ಪದವಿ: ಆನ್‌ಲೈನ್ ಬೋಧನೆ ಮುಂದುವರಿಕೆ’

ಬೆಂಗಳೂರು: ‘ಪದವಿ ಕೋರ್ಸ್‌ಗಳ ಬೆಸ ಸೆಮಿಸ್ಟರ್‌ಗಳಿಗೆ ಇನ್ನೂ ಪರೀಕ್ಷೆ ನಡೆಸಿರದಿದ್ದರೂ, ಅವುಗಳ ಮುಂದಿನ ಸಮ ಸ್ಥಾನಿಕ ಸೆಮಿಸ್ಟರ್‌ಗಳಿಗೆ ಆನ್‌ಲೈನ್ ತರಗತಿಗಳನ್ನು ಮುಂದುವರಿಸಿ’ ಎಂದು ರಾಜ್ಯದ ವಿಶ್ವವಿದ್ಯಾಲಯಗಳು ಹಾಗೂ ಪದವಿ ಶಿಕ್ಷಣ ಕಾಲೇಜುಗಳಿಗೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಶುಕ್ರವಾರ ಸೂಚನೆ ನೀಡಿದ್ದಾರೆ.

‘ಈ ಕೋರ್ಸ್‌ಗಳ ಭೌತಿಕ ತರಗತಿಗಳನ್ನು ಆರಂಭಿಸುವ ಕುರಿತು ಕೋವಿಡ್ ಪರಿಸ್ಥಿತಿ ನೋಡಿಕೊಂಡು ನಿರ್ಧಾರ ತೆಗೆದುಕೊಳ್ಳಲಾಗುವುದು. ಕೆಲವು ಎಂಜಿನಿಯರಿಂಗ್ ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿ ಮಾತ್ರ ಮುಂದಿನ ಸೆಮಿಸ್ಟರ್‌ಗಳಿಗೆ ಹೋಗಲು ಕ್ಯಾರಿ ಓವರ್ ಪದ್ಧತಿ ಅನ್ವಯವಾಗುವುದಿಲ್ಲ. ಅವುಗಳ ಬಗ್ಗೆ ಆಯಾ ಕುಲಪತಿಗಳು ಹಾಗೂ ಪ್ರಾಂಶುಪಾಲರುಗಳು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಜೊತೆ ಸಮಾಲೋಚನೆ ನಡೆಸಿ ನಿರ್ಧಾರಕ್ಕೆ ಬರಬೇಕು’ ಎಂದರು.

ಮಾಜಿ ಸಚಿವ ಬಾಬಾಗೌಡ ಪಾಟೀಲ ನಿಧನ

ಒಂದನೇ ಪುಟದಿಂದ

ಬೈಲಹೊಂಗಲ ತಾಲ್ಲೂಕಿನ ಚಿಕ್ಕಬಾಗೇವಾಡಿ ಗ್ರಾಮದವರಾಗಿದ್ದ ಅವರು ಕರ್ನಾಟಕ ರೈತ ಸಂಘಟನೆ ಹೋರಾಟದಿಂದ ಪ್ರೇರೇಪಣೆಗೊಂಡು ಅದೇ ಸಂಘಟನೆಯಲ್ಲಿ ತೊಡಗಿ ಪ್ರಮುಖ ನಾಯಕರಾಗಿ ಬೆಳೆದರು. ರೈತ ಸಂಘಟನೆ ಮೂಲಕ 1989ರ ವಿಧಾನಸಭೆ ಚುನಾವಣೆಯಲ್ಲಿ ಕಿತ್ತೂರು ಮತ್ತು ಧಾರವಾಡ ಗ್ರಾಮೀಣ ಕ್ಷೇತ್ರದಿಂದ ಸ್ಪರ್ಧಿಸಿದ್ದು, ಎರಡೂ ಕಡೆ ಆಯ್ಕೆಯಾಗಿದ್ದರು. ಬಳಿಕ ಧಾರವಾಡ ಗ್ರಾಮೀಣ ಕ್ಷೇತ್ರಕ್ಕೆ ರಾಜೀನಾಮೆ ನೀಡಿದ್ದರು.

ರೈತ ಸಂಘಟನೆ ನಾಯಕರೊಂದಿಗಿನ ಭಿನ್ನಾಭಿಪ್ರಾಯದಿಂದ ಬಿಜೆಪಿ ಸೇರಿದ್ದರು. ಬೆಳಗಾವಿ ಲೋಕಸಭೆ ಕ್ಷೇತ್ರದಿಂದ ಆಯ್ಕೆಯಾಗಿ 1998ರಲ್ಲಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಖಾತೆ ಸಚಿವರಾಗಿದ್ದರು.

ನಂತರ ಬಿಜೆಪಿ ತೊರೆದು ಕೆಲ ವರ್ಷ ಜೆಡಿಎಸ್‌ನಲ್ಲಿದ್ದರು. ಅದನ್ನೂ ತೊರೆದು ತಮ್ಮ ನೇತೃತ್ವದಲ್ಲಿ ಅಖಂಡ ಕರ್ನಾಟಕ ರೈತ ಸಂಘ ಸ್ಥಾಪಿಸಿದ್ದರು. ಕೇಂದ್ರ ಸರ್ಕಾರವು ಕೃಷಿ ಕಾಯ್ದೆಗಳಿಗೆ ತಿದ್ದುಪಡಿ ತಂದಿರುವುದು ರೈತರಿಗೆ ಮರಣ ಶಾಸನವಾಗಿದೆ ಎಂದು ಬಲವಾಗಿ ವಿರೋಧಿಸುತ್ತಿದ್ದರು. ಕೃಷಿ ಕಾಯ್ದೆಗಳ ವಿರುದ್ಧ ಹೋರಾಟ ಮಾಡುತ್ತಿರುವ ರಾಕೇಶ್ ಟಿಕಾಯತ್ ಅವರ ಕಿಸಾನ್ ಮಹಾ ಪಂಚಾಯತ್‌ನಲ್ಲೂ ಮುಂಚೂಣಿಯಲ್ಲಿದ್ದರು. ರಾಜ್ಯದಲ್ಲಿ ಕಿಸಾನ್ ಮಹಾಪಂಚಾಯತ್‌ಗಳನ್ನು ಸಂಘಟಿಸುವಲ್ಲಿ ನೇತೃತ್ವ ವಹಿಸಿದ್ದರು.

ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ (1998) ಬಿಜೆಪಿ ಗೆಲುವಿನ ಖಾತೆ ತೆರೆದದ್ದೇ ಇವರು. ಆದರೆ, ಇದೇ ಕ್ಷೇತ್ರಕ್ಕೆ ಈಚೆಗೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಮತ್ತು ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಪ್ರಚಾರ ಮಾಡಿದ್ದರು.

ರೈತರಿಗೆ ಸ್ವಾಭಿಮಾನ ತುಂಬಿದ ಹೋರಾಟಗಾರ

ಅಡಗಿತು ರೈತಪರ ಧ್ವನಿ

• ಪ್ರದೀಪ ಮೇಲಿನಮನಿ

ಚನ್ನಮ್ಮನ ಕಿತ್ತೂರು: ಮಾಸಿದ ಧೋತರ, ಅಂಗಿ, ಹೆಗಲ ಮೇಲೊಂದು ಟವೆಲ್ ಹಾಕಿದ ರೈತ ತಾಲ್ಲೂಕಿನ ತಹಶೀಲ್ದಾರ್ ಕಚೇರಿಗೆ ಹೋದರೆ, ಮೊದಲು ಕಚೇರಿ ಬಾಗಿಲಲ್ಲಿ ಚಪ್ಪಲಿ ಬಿಡಬೇಕಿತ್ತು. ಎರಡೂ ಕೈಗಳನ್ನೆತ್ತಿ ಅಲ್ಲಿ ಕುಳಿತಿರುವ ನೌಕರನೊ ಅಥವಾ ಸಿಪಾಯಿಗೆ ಕೈ ಮುಗಿದು ಒಳಗೆ ಹೋಗಬೇಕಿತ್ತು.

ಸ್ವಾತಂತ್ರ್ಯಾನಂತರ ಸಾರ್ವಜನಿಕರ ಸೇವೆಗೆಂದೇ ಇರುವ ಸರ್ಕಾರಿ ಕಚೇರಿಯೊಳಗೆ ಹೋಗಬೇಕೆಂದರೆ ರೈತ ಹೀಗೆ ನಡೆದುಕೊಳ್ಳಬೇಕಿತ್ತು. ಅನ್ನದಾತನಿಗೆ ಹಾಕಿದ ಅಲಿಖಿತ ನಿಯಮವೂ ಇದಾಗಿತ್ತು. ಈ ಚಿತ್ರಣ ಸಂಪೂರ್ಣ ಬದಲಾಗಿದ್ದು 80ರ ದಶಕದಲ್ಲಿ. ಅನ್ನದಾತನಲ್ಲಿ ಆತ್ಮಸ್ಥೈರ್ಯ ಮತ್ತು ಸ್ವಾಭಿಮಾನ ತುಂಬಿದವರು ರೈತಪರ ಹೋರಾಟಗಾರರಾದ ಪ್ರೊ. ಎಂ.ಡಿ. ನಂಜುಂಡಸ್ವಾಮಿ, ಬಾಬಾಗೌಡ ಪಾಟೀಲ, ಎನ್.ಡಿ. ಸುಂದರೇಶ್ ಮೊದಲಾದ ನಾಯಕರು.

ರೈತರ ಸಮಸ್ಯೆಗಳ ವಿರುದ್ಧ ಗಟ್ಟಿ ಧ್ವನಿಯೆತ್ತಿ ಆಳುವ ಸರ್ಕಾರಗಳ ಕಿವಿ ಹಿಂಡಿದ್ದ ನಾಯಕರು ಇವರು. ಇವರ ವಾರಸುದಾರರಾಗಿ ಕೊನೆಯ ಕೊಂಡಿ ಎಂಬಂತೆ ಉಳಿದುಕೊಂಡಿದ್ದ ಬಾಬಾಗೌಡ ಪಾಟೀಲ ಅವರ ಯುಗವೂ ಅಂತ್ಯವಾಗಿದೆ.

ದೈತ್ಯ ಸಂಘಟಕ: ಉತ್ತರ ಕರ್ನಾಟಕದಲ್ಲಿ ರೈತ ಚಳವಳಿಗೆ ದೈತ್ಯ ಶಕ್ತಿ ತುಂಬಿದವರು ಬಾಬಾಗೌಡ ಪಾಟೀಲ. ಮಧ್ಯವರ್ತಿಗಳ ಶೋಷಣೆ, ಬೆಳೆಗಳಿಗೆ ಸಮರ್ಪಕ ಬೆಲೆ ಇಲ್ಲದಿರುವುದು, ಸರ್ಕಾರದ ಲೆವಿ ದಬ್ಬಾಳಿಕೆ, ಕಾಲುವೆಗಳಿಗೆ ನೀರು ಹರಿಸದೇ ಕಂದಾಯ ಕಟ್ಟುವುದು..... ಹೀಗೆ ಸಮಸ್ಯೆಗಳ ಕುಲುಮೆಯಲ್ಲಿ ಬದುಕನ್ನೇ ಸುಟ್ಟುಕೊಂಡು ಹೈರಾಣವಾಗಿದ್ದ ಬಡಪಾಯಿ ರೈತನಿಗೆ ಮೇಟಿಯಾಗಿ ನಿಂತು ಧ್ವನಿ ಕೊಟ್ಟವರು ಬಾಬಾಗೌಡ ಪಾಟೀಲ.



ಬಾಬಾಗೌಡ ಪಾಟೀಲ

ರೈತನ ಮೇಲೆ ಸವಾರಿ ಮಾಡುತ್ತಿದ್ದ ಸರ್ಕಾರದ ನೀತಿಗಳನ್ನು ಪ್ರಖರ ವಿಚಾರಗಳ ಮೂಲಕ ಜವಾರಿ ಮಾತುಗಳಲ್ಲಿ ಖಂಡಿಸುತ್ತ ಇಡೀ ರೈತ ಕುಲದಲ್ಲಿ ಜಾಗೃತಿಯ ಗಂಟೆ ಮೊಳಗಿಸಿದರು. ಪ್ರೊ. ನಂಜುಂಡಸ್ವಾಮಿ ಮತ್ತು ಬಾಬಾಗೌಡ ಅವರು ರೈತ ಚಳವಳಿಯ ಎರಡು ಚಕ್ರಗಳಂತಿದ್ದರು. ಕೂಗು ಹಾಕಿದರೆ ಸಾಕು, ಸರ್ಕಾರ ನಡುಗುತ್ತಿತ್ತು.

ವಿಧಾನಸೌಧದ ಒಳಗೂ ರೈತರ ಬಲವಾದ ಧ್ವನಿ ಕೇಳಿಸಬೇಕು, ರೈತರೇ ಸರ್ಕಾರ ರಚಿಸಿದರೆ ಅವರ ಸಮಸ್ಯೆಗಳು ಇತ್ಯರ್ಥವಾಗಲು ಸಾಧ್ಯವೆಂದು ನಿಲುವು ತಾಳಿದ್ದ ರೈತ ಸಂಘಟನೆ ಪ್ರಮುಖರು 1989ರ ಸಾರ್ವತ್ರಿಕ ವಿಧಾನಸಭೆ ಚುನಾವಣೆಯಲ್ಲೂ ಸ್ಪರ್ಧಿಸಿದ್ದರು.

ಗೆದ್ದಿದ್ದವರು ಒಬ್ಬರೇ: ಕಿತ್ತೂರು ಮತ್ತು ಧಾರವಾಡ ಗ್ರಾಮೀಣ ಕ್ಷೇತ್ರದಿಂದ ಬಾಬಾಗೌಡ ಪಾಟೀಲರು ಕಣಕ್ಕಿಳಿದಿದ್ದರು. ರಾಜ್ಯದಾದ್ಯಂತ 150 ಸ್ಥಾನಗಳಲ್ಲಿ ಸಂಘದ ಅಭ್ಯರ್ಥಿಗಳಿದ್ದರು. ಆದರೆ, ಗೆಲುವು ಪಡೆದಿದ್ದು ಬಾಬಾಗೌಡ ಒಬ್ಬರೆ. ಎರಡೂ ಕ್ಷೇತ್ರಗಳಲ್ಲಿ ಅಧಿಕ ಮತಗಳನ್ನು ಪಡೆದು ಗೆದ್ದು ಬಂದಿದ್ದರು. ರೈತರೇ ರೊಟ್ಟಿಗಂಟು ಕಟ್ಟಿಕೊಂಡು, ಟ್ರ್ಯಾಕ್ಟರ್‌ನಲ್ಲಿ ಸಂಚರಿಸಿ ಎರಡೂ ಕ್ಷೇತ್ರಗಳಲ್ಲಿ ಆಯ್ಕೆ ಮಾಡಿ ವಿಧಾನಸಭೆಗೆ ಕಳುಹಿಸಿದ್ದರು. ಸಂಘಟನೆ ಬಲಕ್ಕೆ ಘಟಾನುಘಟಿ ನಾಯಕರೇ ಅಂದಿನ ಚುನಾವಣೆಯಲ್ಲಿ ಅಲ್ಪಮತಗಳಿಂದ ಆಯ್ಕೆಯಾಗಿ ಬಂದಿದ್ದರು.

ಧಾರವಾಡ ಗ್ರಾಮೀಣ ಕ್ಷೇತ್ರಕ್ಕೆ ರಾಜೀನಾಮೆ ನೀಡಿ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರನ್ನು ಗೆಲ್ಲಿಸಿ ವಿಧಾನಸೌಧದ ಮೆಟ್ಟಿಲುಗಳನ್ನು ಹತ್ತಿಸಿದ್ದರು. ಅಂತಹ ಪ್ರಭಾವಿ ಸಂಘಟನೆಗಾರ ಬಾಬಾಗೌಡ.

ಬದಲಾದ ಪರಿಸ್ಥಿತಿಯಿಂದಾಗಿ ಸಂಘಟನೆ ತೊರೆದು ಬಿಜೆಪಿ ಸೇರಿದ್ದರು. ಬೆಳಗಾವಿ ಲೋಕಸಭೆ ಕ್ಷೇತ್ರದಿಂದ ಸ್ಪರ್ಧಿಸಿ ಸಂಸದರಾದರು. ವಾಜಪೇಯಿ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿ ರೈತರಿಗೆ, ಗ್ರಾಮೀಣ ಪ್ರದೇಶದವರಿಗೆ ಕೆಲವು ಮಹತ್ವದ ನೀತಿಗಳನ್ನು ರೂಪಿಸಿದರು.

ಮುಂದೆ ರಾಜಕೀಯ ಕ್ಷೇತ್ರ ಈ ಅದ್ಭುತ ಮಾತುಗಾರನಿಗೆ ಒಲಿಯಲಿಲ್ಲ. ಅವರೂ ಪ್ರಸ್ತುತ ರಾಜಕೀಯ ಪರಿಸ್ಥಿತಿಗೆ ಒಗ್ಗಿಕೊಳ್ಳಲಿಲ್ಲ ಎನ್ನುತ್ತಾರೆ ಅವರ ಅಭಿಮಾನಿಗಳು.

ಸಂಕ್ಷಿಪ್ತ ಸುದ್ದಿ

ಶಿಕ್ಷಕ ಸಾವು: ಕುಟುಂಬಕ್ಕೆ ₹ 1 ಕೋಟಿ ನೀಡಿದ ಕೇಜ್ರಿವಾಲ್

ನವದೆಹಲಿ (ಪಿಟಿಐ): ಕೋವಿಡ್‌–19ನಿಂದ ಸಾವಿಗೀಡಾದ ಸರ್ಕಾರಿ ಶಾಲೆಯ ಶಿಕ್ಷಕ ನಿತಿನ್ ತನ್ವರ್ ಅವರ ಕುಟುಂಬಕ್ಕೆ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಶುಕ್ರವಾರ ₹ 1 ಕೋಟಿ ಆರ್ಥಿಕ ಸಹಾಯ ನೀಡಿದ್ದಾರೆ.

ದೆಹಲಿಯ ಸರ್ಕಾರಿ ಶಾಲೆಯ ಶಿಕ್ಷಕರಾಗಿದ್ದ ನಿತಿನ್ ಅವರು ಕೋವಿಡ್ ಕರ್ತವ್ಯದಲ್ಲಿದ್ದಾಗಲೇ ಕಳೆದ ವರ್ಷ ಡಿಸೆಂಬರ್‌ನಲ್ಲಿ ಕೊರೊನಾ ಸೋಂಕಿಗೀಡಾಗಿದ್ದರು. ಕರ್ತವ್ಯದ ಸಮಯದಲ್ಲಿ ನಿತಿನ್ ಪಡಿತರ ವಿತರಣೆ ಸೇರಿದಂತೆ ಹಲವು ಬೋಧಕೇತರ ಕರ್ತವ್ಯಗಳನ್ನು ನಿರ್ವಹಿಸಿದ್ದರು.

ಆರೋಗ್ಯ ವ್ಯವಸ್ಥೆ: ಹೈಕೋರ್ಟ್ ತೀರ್ಪಿಗೆ ‘ಸುಪ್ರೀಂ’ ತಡೆ

ನವದೆಹಲಿ: ಕೋವಿಡ್‌ನಿಂದ ತತ್ತರಿಸಿರುವ ಉತ್ತರ ಪ್ರದೇಶದಲ್ಲಿನ ಆರೋಗ್ಯ ವ್ಯವಸ್ಥೆಗೆ ಸಂಬಂಧಿಸಿದಂತೆ ಅಲಹಾಬಾದ್ ಹೈಕೋರ್ಟ್ ನೀಡಿದ್ದ ತೀರ್ಪಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆಯಾಜ್ಞೆ ನೀಡಿದೆ.

ಅಲಹಾಬಾದ್ ಹೈಕೋರ್ಟ್ ತನ್ನ ತೀರ್ಪಿನಲ್ಲಿ, ‘ಕೋವಿಡ್‌ನ ಈ ಸಮಯದಲ್ಲಿ ಉತ್ತರ ಪ್ರದೇಶದ ಹಳ್ಳಿಗಳು ಮತ್ತು ಗ್ರಾಮಗಳಲ್ಲಿನ ಸಂಪೂರ್ಣ ವೈದ್ಯಕೀಯ ವ್ಯವಸ್ಥೆಯನ್ನು ದೇವರೇ ಕಾಪಾಡಬೇಕು’ ಎಂದು ಹೇಳಿತ್ತು.

ಅತ್ಯಾಚಾರ ಪ್ರಕರಣ: ತರುಣ್ ತೇಜ್‌ಪಾಲ್ ದೋಷಮುಕ್ತ

ಪಣಜಿ: ಅತ್ಯಾಚಾರ ಪ್ರಕರಣದಲ್ಲಿ ತೆಹಲ್ಕಾ ಮಾಜಿ ಪ್ರಧಾನ ಸಂಪಾದಕ ತರುಣ್ ತೇಜ್‌ಪಾಲ್ ಅವರಿಗೆ ಇಲ್ಲಿನ ತ್ವರಿತ ನ್ಯಾಯಾಲಯ ದೋಷಮುಕ್ತಗೊಳಿಸಿದೆ. 2013ರಲ್ಲಿ ಗೋವಾದ ಪಂಚತಾರಾ ಹೋಟೆಲ್‌ನಲ್ಲಿ ತನ್ನ ಕಿರಿಯ ಸಹೋದ್ಯೋಗಿ ಮೇಲೆ ಅತ್ಯಾಚಾರ ಎಸಗಿದ್ದ ಬಗ್ಗೆ ಇವರ ವಿರುದ್ಧ ಆರೋಪಪಟ್ಟಿ ದಾಖಲಿಸಲಾಗಿತ್ತು.

ತೇಜಪಾಲ್ ಪರ ವಾದಿಸಿದ್ದ ವಕೀಲ ಸುಹಾಸ್ ವೆಲಿಪ್, ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಕ್ಷಮಾ ಜೋಶಿ ಅವರು ತೇಜ್‌ಪಾಲ್ ಅವರನ್ನು ಖುಲಾಸೆಗೊಳಿಸಿ ತೀರ್ಪು ನೀಡಿದರು ಎಂದು ತಿಳಿಸಿದರು.

ಐಪಿಸಿ 376 (ಅತ್ಯಾಚಾರ), 341 (ಬಲವಂತವಾಗಿ ಇರಿಸುವುದು), 354ಎ (ಲೈಂಗಿಕ ದೌರ್ಜನ್ಯ), 354ಬಿ (ಕ್ರಿಮಿನಲ್ ಹಲ್ಲೆ) ಸಂಬಂಧ ಇವರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು.



ಸಂಬಿತ್ ಪಾತ್ರಾ ಅವರ ಟ್ವೀಟ್‌ನಲ್ಲಿರುವ ದಾಖಲೆಯನ್ನು ‘ತಿರುಚಲಾದ ಮಾಹಿತಿ’ ಎಂದು ಟ್ಯಾಗ್ ಮಾಡಲಾಗಿದೆ

ಸಂಬಿತ್ ಪಾತ್ರಾ ಟ್ವೀಟ್‌ನಲ್ಲಿ ‘ತಿರುಚಲಾದ ಮಾಹಿತಿ’

ಒಂದನೇ ಪುಟದಿಂದ

‘ಸಂಬಿತ್ ಪಾತ್ರಾ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಸಚಿವೆ ಸ್ಮೃತಿ ಇರಾನಿ ಮತ್ತಿತರರು ತಪ್ಪು ಮತ್ತು ಸುಳ್ಳು ಮಾಹಿತಿ ಹರಡಲು ಟ್ವಿಟರ್ ಅನ್ನು ಬಳಸಿಕೊಳ್ಳುತ್ತಿದ್ದಾರೆ. ಟೂಲ್‌ಕಿಟ್ ಟ್ವೀಟ್‌ನಲ್ಲಿ ತಿರುಚಲಾದ ದಾಖಲೆಗಳನ್ನು ಹಂಚಿಕೊಂಡಿದ್ದಾರೆ. ಈ ಟ್ವೀಟ್‌ಗಳನ್ನು ಅಳಿಸಿ ಮತ್ತು ಬಿಜೆಪಿ ನಾಯಕರ ಟ್ವಿಟರ್ ಖಾತೆಗಳನ್ನು ಶಾಶ್ವತವಾಗಿ ಸ್ಥಗಿತಗೊಳಿಸಿ’ ಎಂದು ಕಾಂಗ್ರೆಸ್, ಟ್ವಿಟರ್‌ಗೆ ಗುರುವಾರ ಸಂಜೆ ಪತ್ರ ಬರೆದಿತ್ತು. ಪತ್ರ ಬರೆದ ಕೆಲವೇ ಗಂಟೆಗಳಲ್ಲಿ, ಪಾತ್ರಾ ಅವರ ಟ್ವೀಟ್‌ನಲ್ಲಿದ್ದ ದಾಖಲೆಗಳನ್ನು ತಿರುಚಲಾದ ಮಾಹಿತಿ ಎಂದು ಟ್ವಿಟರ್ ಟ್ಯಾಗ್ ಮಾಡಿತ್ತು.

ಪಾತ್ರಾ ಮತ್ತು ಅವರಿಗಿಂತ ಕೆಳಹಂತದ ಬಿಜೆಪಿ ನಾಯಕರು ಮಾಡಿದ್ದ ಟ್ವೀಟ್‌ಗಳಲ್ಲಿ ಇದ್ದ ‘ಟೂಲ್‌ಕಿಟ್’ ದಾಖಲೆಗಳನ್ನು ‘ತಿರುಚಲಾದ ಮಾಹಿತಿ’ ಎಂದು ಟ್ಯಾಗ್ ಮಾಡಲಾಗಿದೆ. ಅದೇ ದಾಖಲೆಗಳನ್ನು ಹಂಚಿಕೊಂಡಿರುವ ಸಾರ್ವಜನಿಕರ ಟ್ವೀಟ್‌ಗಳನ್ನೂ ‘ತಿರುಚಲಾದ ಮಾಹಿತಿ’ ಎಂದು ಟ್ಯಾಗ್ ಮಾಡಲಾಗಿದೆ. ಆದರೆ ಅದೇ ದಾಖಲೆಗಳನ್ನು ಟ್ವೀಟ್ ಮಾಡಿದ್ದ ಸ್ಮೃತಿ ಇರಾನಿ, ಪೀಯೂಷ್ ಗೋಯಲ್, ಕಿರಣ್ ರಿಜಿಜು ಸೇರಿದಂತೆ 15ಕ್ಕೂ ಹೆಚ್ಚು ಬಿಜೆಪಿಯ ಹಿರಿಯ ಮುಖಂಡರ ಟ್ವೀಟ್ ಮಾಡಿದ್ದರು. ಅವರ ಟ್ವೀಟ್‌ನಲ್ಲಿ ಇರುವ ಈ ದಾಖಲೆಗಳನ್ನು ಟ್ವಿಟರ್ ಟ್ಯಾಗ್ ಮಾಡಿಲ್ಲ.


ಪಟ್ನಾ: ಆಸ್ಪತ್ರೆಗೆ ದಾಖಲಾಗಿದ್ದ ನಾಲ್ವರು ರೋಗಿಗಳಲ್ಲಿ ಸೋಂಕು ಪತ್ತೆ

ಆತಂಕ ಮೂಡಿಸಿದ ಬಿಳಿ ಫಂಗಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್‌–19ನಿಂದ ಗುಣಮುಖರಾದ ಕೆಲವರಲ್ಲಿ ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ಕಾಣಿಸಿಕೊಳ್ಳುತ್ತಿದೆ. ಈ ಸೋಂಕು ಬಹಳ ಅಪಾಯಕಾರಿ, ಕೆಲವೊಮ್ಮೆ ಮಾರಣಾಂತಿಕವಾಗಿಯೂ ಪರಿಣಮಿಸುತ್ತದೆ ಎಂದು ವೈದ್ಯರು ಎಚ್ಚರಿಕೆ ನೀಡಿದ್ದಾರೆ. ಈಗ ಕೆಲ ರೋಗಿಗಳಲ್ಲಿ ‘ಬಿಳಿ ಶಿಲೀಂಧ್ರ’ದ ಸೋಂಕು (ವೈಟ್ ಫಂಗಸ್) ಕಾಣಿಸಿಕೊಂಡಿದ್ದು, ವೈದ್ಯ ಲೋಕದ ಆತಂಕಕ್ಕೆ ಕಾರಣವಾಗಿದೆ.

ಪಟ್ನಾ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ದಾಖಲಾಗಿದ್ದವರ ಪೈಕಿ ನಾಲ್ವರು ರೋಗಿಗಳಲ್ಲಿ ಬಿಳಿ ಶಿಲೀಂಧ್ರ ಕಾಣಿಸಿಕೊಂಡಿದೆ. ಈ ಸೋಂಕಿನಿಂದ ಬಳಲುತ್ತಿರುವವರ ಸಂಖ್ಯೆ ಇನ್ನೂ ಹೆಚ್ಚಾಗಿರುವ ಸಾಧ್ಯತೆ ಇದೆ ಎಂದು ಕಾಲೇಜಿನ ಸೂಕ್ಷ್ಮಜೀವಿವಿಜ್ಞಾನ ವಿಭಾಗದ ಪ್ರಾಧ್ಯಾಪಕ ಎಸ್.ಎನ್.ಸಿಂಗ್ ಎಚ್ಚರಿಸಿದ್ದಾರೆ.



ಪ್ರಾತಿನಿಧಿಕ ಚಿತ್ರ

ಹಾಗಾದರೆ, ಈ ಬಿಳಿ ಶಿಲೀಂಧ್ರ ಎಂದರೆ ಏನು ಎಂಬ ಪ್ರಶ್ನೆಗಳು ಮೂಡುವುದು ಸಹಜ. ಅದನ್ನು ವೈದ್ಯಕೀಯ ವಿಜ್ಞಾನ ಹೀಗೆ ವಿವರಿಸುತ್ತದೆ.

ಬಿಳಿ ಶಿಲೀಂಧ್ರ ಎಂದರೇನು?: ಕಪ್ಪು ಶಿಲೀಂಧ್ರದಂತೆ, ಬಿಳಿ ಶಿಲೀಂಧ್ರ ಕೂಡ ರೋಗ ನಿರೋಧಕ ಶಕ್ತಿ ಕಡಿಮೆ ಇರುವವರನ್ನು ಬಾಧಿಸುವ ಸೋಂಕು. ಮಧುಮೇಹ, ಏಡ್ಸ್ ಹಾಗೂ ಇತ್ತೀಚೆಗೆ ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾಗಿರುವವರು ಸೇರಿದಂತೆ ವಿವಿಧ ರೀತಿಯ ಆರೋಗ್ಯ ಸಮಸ್ಯೆಗಳನ್ನು ಹೊಂದಿರುವವರಲ್ಲಿ ಇದು ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚು.

ಸ್ಟಿರಾಯ್ಡ್‌ಗಳ ಅತಿಯಾದ ಬಳಕೆ, ಆಮ್ಲಜನಕ ಸಿಲಿಂಡರ್‌ಗಳನ್ನು ಸಮರ್ಪಕವಾಗಿ ಸ್ವಚ್ಛಗೊಳಿಸದೇ ಬಳಕೆ ಮಾಡಿದಾಗ ಬಿಳಿ ಶಿಲೀಂಧ್ರ ಬಾಧಿಸುವ ಸಾಧ್ಯತೆ ಅಧಿಕ.

ಚರ್ಮ, ಉದರ, ಮೂತ್ರಪಿಂಡ, ಮಿದುಳು, ಜನನಾಂಗಗಳು, ಬಾಯಿ ಹಾಗೂ ಶ್ವಾಸಕೋಶಗಳಲ್ಲಿ ಕಾಣಿಸಿಕೊಳ್ಳಬಹುದು. ಈ ಸೋಂಕು ಶ್ವಾಸಕೋಶಕ್ಕೆ ತಗುಲಿದರೆ ಅಪಾಯ ತಪ್ಪಿದ್ದಲ್ಲ. ಆದರೆ, ಈ ಸೋಂಕಿನಿಂದಾಗಿ ಸಂಭವಿಸಿದ ಮರಣದ ಪ್ರಮಾಣ ಎಷ್ಟು ಎಂಬ ಬಗ್ಗೆ ನಿಖರ ಮಾಹಿತಿ ಇಲ್ಲ.

ಬಿಳಿ ಶಿಲೀಂಧ್ರದ ಚಿಕಿತ್ಸೆ ಹೇಗೆ?: ಈಗ ಲಭ್ಯವಿರುವ ಶಿಲೀಂಧ್ರ ನಿರೋಧಕ ಔಷಧಿಗಳನ್ನೇ ಬಿಳಿ ಶಿಲೀಂಧ್ರ ಸೋಂಕಿತರಿಗೆ ನೀಡಲಾಗುತ್ತಿದೆ ಎಂದು ಪಟ್ನಾ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ವೈದ್ಯರು ಹೇಳುತ್ತಾರೆ. ಚಿಕಿತ್ಸೆ ನೀಡಲಾದ ನಾಲ್ವರು ರೋಗಿಗಳ ಆರೋಗ್ಯ ಸ್ಥಿರವಾಗಿದೆ ಎಂದೂ ಅವರು ಹೇಳಿದ್ದಾರೆ.

ರೋಗ ಲಕ್ಷಣಗಳೇನು?

ಬಿಳಿ ಶಿಲೀಂಧ್ರ ಕಂಡುಬಂದವರಲ್ಲಿ ಸೋಂಕು ಶ್ವಾಸಕೋಶವನ್ನು ತಲುಪಿದಾಗ, ಕೋವಿಡ್‌–19 ರೋಗಿಗಳಲ್ಲಿ ಕಂಡುಬರುವಂಥ ಲಕ್ಷಣಗಳೇ ಅವರಲ್ಲಿಯೂ ಕಾಣಿಸಿಕೊಳ್ಳುತ್ತವೆ. ಪರೀಕ್ಷೆ ಮಾಡಿದಾಗ ನೆಗೆಟಿವ್ ಎಂದೇ ವರದಿ ಬರುತ್ತದೆ. ಆದರೆ, ಸಿ.ಟಿ. ಸ್ಕ್ಯಾನ್ ಅಥವಾ ಎಕ್ಸ್‌ರೇ ಮಾಡಿದಾಗ ಸೋಂಕಿರುವುದು ಗೊತ್ತಾಗುತ್ತದೆ. ಮಹಿಳೆಯರು ಹಾಗೂ ಮಕ್ಕಳಲ್ಲಿ ಬಿಳಿ ಶಿಲೀಂಧ್ರ ಕಾಣಿಸಿಕೊಳ್ಳುವ ಅಪಾಯ ಹೆಚ್ಚು ಎಂಬುದು ವೈದ್ಯರ ಎಚ್ಚರಿಕೆ ನುಡಿ.

ಆಮ್ಲಜನಕ ಸಿಲಿಂಡರ್‌ಗೆ ತೇವಾಂಶ ನಿರ್ವಹಣೆ ಸಾಧನವೊಂದನ್ನು (ಹ್ಯುಮಿಡಿಫೈಯರ್) ಜೋಡಿಸಲಾಗಿರುತ್ತದೆ. ಈ ಸಾಧನಕ್ಕೆ ಅಳವಡಿಸಿರುವ ನಲ್ಲಿಯ ನೀರನ್ನು ಬಳಸಿದಾಗ ಈ ಸೋಂಕು ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚು ಎಂದು ಎಸ್.ಎನ್.ಸಿಂಗ್ ಹೇಳುತ್ತಾರೆ.

ನೀರಿನಲ್ಲಿರುವ ಮೃದುವಾದ ಮಣ್ಣು, ಬೂಸಿನ ಬಗ್ಗೆ ಜನರು ಎಚ್ಚರ ವಹಿಸಬೇಕು. ಇದರಿಂದ ಬಿಳಿ ಶಿಲೀಂಧ್ರ ಸೋಂಕು ಹರಡುತ್ತದೆ ಎಂದು ಪಾರಸ್ ಆಸ್ಪತ್ರೆಯ ವೈದ್ಯ ಅರುಣೇಶ್ ಕುಮಾರ್ ಹೇಳುತ್ತಾರೆ.

ಬಾರ್ಜ್ ದುರಂತ : ಸಾವಿನ ಸಂಖ್ಯೆ 51ಕ್ಕೆ ಏರಿಕೆ

ಮುಂಬೈ (ಪಿಟಿಐ): ತೌತೆ ಚಂಡಮಾರುತದಿಂದ ಅರಬ್ಬಿ ಸಮುದ್ರದಲ್ಲಿ ಬಾರ್ಜ್ ಮುಳುಗಿ ಸಂಭವಿಸಿದ ದುರಂತದಲ್ಲಿ ಸತ್ತವರ ಸಂಖ್ಯೆ 51ಕ್ಕೆ ಏರಿದೆ. ನೌಕಾಪಡೆ ಹಾಗೂ ಕರಾವಳಿ ಗಸ್ತು ಪಡೆಯವರು ಶುಕ್ರವಾರ ಇನ್ನೂ ಎರಡು ಮೃತದೇಹಗಳನ್ನು ಪತ್ತೆ ಮಾಡಿದ್ದಾರೆ.

ಬಾರ್ಜ್‌ನಿಂದ ನಾಪತ್ತೆಯಾದ 24 ಮಂದಿ ಮತ್ತು ಆ್ಯಂಕರ್ ನಿರ್ವಹಣೆ ದೋಣಿಯಿಂದ ನಾಪತ್ತೆಯಾದ 11 ಮಂದಿಗಾಗಿ ಶೋಧ ಮುಂದುವರಿದಿದೆ. ಕಳೆದ ಸೋಮವಾರ ಮುಳುಗಡೆಯಾಗಿದ್ದ ಬಾರ್ಜ್‌ನಲ್ಲಿ ಒಟ್ಟು 261 ಜನರಿದ್ದರು. ಅವರಲ್ಲಿ 186 ಮಂದಿಯನ್ನು ರಕ್ಷಿಸಲಾಗಿದೆ. ಆ್ಯಂಕರ್ ನಿರ್ವಹಣೆ ದೋಣಿಯಲ್ಲಿದ್ದ 13 ಮಂದಿಯಲ್ಲಿ ಇಬ್ಬರನ್ನು ಮಾತ್ರ ತಕ್ಷಿಸಲಾಗಿದೆ. ಉಳಿದ 11 ಮಂದಿಗಾಗಿ ಶೋಧ ನಡೆದಿದೆ.

ಚಂಡಮಾರುತದ ಬಗ್ಗೆ ಎಚ್ಚರಿಕೆ ನೀಡಿದದರೂ ಈ ಬಾರ್ಜ್ ಪ್ರಕ್ಷುಬ್ಧ ಪ್ರದೇಶದಲ್ಲಿ ಉಳಿದದ್ದೇಕೆ ಎಂಬ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಮುಂಬೈ ಪೊಲೀಸರು ತಿಳಿಸಿದ್ದಾರೆ.

ಸಂತ್ರಸ್ತರ ಕುಟುಂಬಕ್ಕೆ ನೆರವು: ಬಾರ್ಜ್ ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ₹35 ಲಕ್ಷದಿಂದ ಗರಿಷ್ಠ ₹75 ಲಕ್ಷದಷ್ಟು ಪರಿಹಾರ ನೀಡುವುದಾಗಿ ಅಫ್ಕನ್ಸ್ ಇಫ್ರಾಸ್ಟ್ರಕ್ಚರ್ ಸಂಸ್ಥೆ ಶುಕ್ರವಾರ ತಿಳಿಸಿದೆ. ದುರಂತಕ್ಕೆ ಒಳಗಾಗಿದ್ದ ಬಾರ್ಜ್ ಈ ಸಂಸ್ಥೆಗೆ ಸೇರಿದ್ದಾಗಿದೆ.

‘ದುರಂತದಲ್ಲಿ ಜೀವ ಕಳೆದುಕೊಂಡ ನೌಕರರು ಮತ್ತು ಸಿಬ್ಬಂದಿಯ ಬಾಕಿ 10 ವರ್ಷಗಳ ಸೇವಾ ವೇತನ ಮತ್ತು ವಿಮಾ ಪರಿಹಾರವನ್ನು ಇದು ಒಳಗೊಂಡಿದೆ. ಪ್ರತಿ ಕುಟುಂಬಕ್ಕೆ ₹35 ಲಕ್ಷದಿಂದ ₹75 ಲಕ್ಷದವರೆಗೂ ಪರಿಹಾರ ಸಿಗಲಿದೆ’ ಎಂದು ಅಫ್ಕನ್ಸ್ ಸಂಸ್ಥೆಯ ವಕ್ತಾರರು ತಿಳಿಸಿದ್ದಾರೆ.

ಪರಸ್ಪರ ಅಂತರ ಮರೆತು ಔಷಧಿಗೆ ಮುಗಿಬಿದ್ದ ಜನ

ಕೃಷ್ಣಪಟ್ಟಣಂ ಆಯುರ್ವೇದ ಔಷಧ: ಐಸಿಎಂಆರ್ ಅಧ್ಯಯನ

ಅಮರಾವತಿ (ಪಿಟಿಐ): ಕೋವಿಡ್‌–19ರ ಚಿಕಿತ್ಸೆ ಸಲುವಾಗಿ ಎಸ್‌ಪಿಎಸ್ ನೆಲ್ಲೂರು ಜಿಲ್ಲೆಯ ಕೃಷ್ಣಪಟ್ಟಣಂನ ಆಯುರ್ವೇದ ವೈದ್ಯರು ನೀಡುತ್ತಿರುವ ಔಷಧಿಯ ಪರಿಣಾಮಕಾರಿ ಕುರಿತು ವಿವರವಾದ ಅಧ್ಯಯನ ನಡೆಸುವಂತೆ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಗೆ (ಐಸಿಎಂಆರ್) ಸೂಚಿಸಲು ಆಂಧ್ರ ಪ್ರದೇಶ ಸರ್ಕಾರ ಶುಕ್ರವಾರ ನಿರ್ಧರಿಸಿದೆ.

ಅಲ್ಲದೆ, ‘ಕೃಷ್ಣಪಟ್ಟಣಂನ ಔಷಧಿ’ಯ ಕುರಿತು ಸ್ಥಳದಲ್ಲಿಯೇ ಅಧ್ಯಯನ ನಡೆಸಲು ತಜ್ಞರ ತಂಡವನ್ನು ನೆಲ್ಲೂರಿಗೆ ಕಳುಹಿಸಲೂ ಸರ್ಕಾರ ನಿರ್ಧರಿಸಿದೆ. ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು ಶುಕ್ರವಾರ ಈ ಕುರಿತು ಉನ್ನತ ಮಟ್ಟದ ಸಭೆ ನಡೆಸಿ ತೀರ್ಮಾನಿಸಿದ್ದಾರೆ ಎಂದು ಉಪ ಮುಖ್ಯಮಂತ್ರಿ ಎ.ಕೆ.ಕೆ. ಶ್ರೀನಿವಾಸ್ ತಿಳಿಸಿದರು.

ಹಿಂದೆ ಗ್ರಾಮದ ‘ಸರಪಂಚ್’ ಆಗಿ ಕೆಲಸ ಮಾಡಿ, ನಂತರ ಮಂಡಲ್ ಪರಿಷತ್ ಸದಸ್ಯರಾಗಿದ್ದ ಆಯುರ್ವೇದ ವೈದ್ಯ ಬಿ. ಆನಂದಯ್ಯ ಅವರು ಕೋವಿಡ್‌–19ರ ಚಿಕಿತ್ಸೆಗಾಗಿ ಈ ಔಷಧಿಯನ್ನು ಏಪ್ರಿಲ್ 21ರಿಂದ ನೀಡುತ್ತಿದ್ದಾರೆ. ಇದನ್ನು ಪಡೆಯಲು ಜನರು ಮುಗಿಬೀಳುತ್ತಿದ್ದು, ಶುಕ್ರವಾರ 10 ಸಾವಿರಕ್ಕೂ ಹೆಚ್ಚು ಜನರು ಔಷಧಿ ಪಡೆಯಲು ಕೃಷ್ಣಪಟ್ಟಣಂನಲ್ಲಿ ಜಮಾಯಿಸಿದ್ದರು. ಅವರು ಪರಸ್ಪರ ಅಂತರ ಮರೆತು ಕೋವಿಡ್ ಮಾರ್ಗಸೂಚಿಯನ್ನೂ ಉಲ್ಲಂಘಿಸಿದ್ದರು.

ರಾಜ್ಯ ಆಯುಷ್ ಇಲಾಖೆಯ ಆಯುರ್ವೇದ ವೈದ್ಯರ ತಂಡವು ಇತ್ತೀಚೆಗೆ ಗ್ರಾಮಕ್ಕೆ ಭೇಟಿ ನೀಡಿ ಔಷಧದ ಬಗ್ಗೆ ವಿಚಾರಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಔಷಧಿಯ ತಯಾರಿಕೆ, ಚಿಕಿತ್ಸೆಯ ಪ್ರಕ್ರಿಯೆ ಮತ್ತು ನಂತರದ ಪರಿಣಾಮಗಳ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ನಡೆಸಬೇಕಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಿದೆ.

ಗಿಡಮೂಲಿಕೆಗಳು, ಜೇನುತುಪ್ಪ, ಮಸಾಲೆ ಪದಾರ್ಥಗಳನ್ನು ಬಳಸಿ ಆನಂದಯ್ಯ ಅವರು ಐದು ವಿಭಿನ್ನ ಔಷಧಿಗಳನ್ನು ತಯಾರಿಸಿ ಕೋವಿಡ್ ಸೋಂಕಿತರಿಗೆ, ಶಂಕಿತರಿಗೆ, ಶ್ವಾಸಕೋಶದ ತೊಂದರೆ ಇರುವವರಿಗೆ ನೀಡುತ್ತಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಅಧ್ಯಯನಕ್ಕೆ ಉಪರಾಷ್ಟ್ರಪತಿಯೂ ಸೂಚನೆ

ನೆಲ್ಲೂರು ಜಿಲ್ಲೆಯವರೇ ಆದ ಉಪರಾಷ್ಟ್ರ ಪತಿ ಎಂ. ವೆಂಕಯ್ಯ ನಾಯ್ಡು ಅವರು, ಕೇಂದ್ರ ಆಯುಷ್ ಸಚಿವ ಕಿರಣ್ ರಿಜಿಜು ಮತ್ತು ಐಸಿಎಂಆರ್ ಪ್ರಧಾನ ನಿರ್ದೇಶಕ ಬಲರಾಮ್ ಭಾರ್ಗವ ಅವರನ್ನು ಈ ಆಯುರ್ವೇದ ಔಷಧದ ಕುರಿತು ಅಧ್ಯಯನ ನಡೆಸಿ, ಆದಷ್ಟು ಬೇಗ ವರದಿ ನೀಡುವಂತೆ ಸೂಚಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಗಿಡಮರಗಳ ಬಹುಗುಣಗಳ ಹರಿಕಾರ

• ನಾಗೇಶ ಹೆಗಡೆ

ಸುಂದರಲಾಲ ಬಹುಗುಣ ಎಂದರೆ ಕರ್ನಾಟಕದ ಮಟ್ಟಿಗೆ ಹಿಮಾಲಯದಿಂದ ಬಂದ ಬೆಳಕು. ಅಲ್ಲಿ ಆರಂಭವಾದ ‘ಚಿಪ್ಕೊ’ ಚಳವಳಿಯ ಕುಡಿಯನ್ನು ಮಲೆನಾಡಿನಲ್ಲಿ ‘ಅಪ್ಪಿಕೊ’ ಚಳವಳಿಯನ್ನಾಗಿ ಚಿಗುರಿಸಿದ ಸಂತ ಅವರು. ಉತ್ತರಾಖಂಡದ ದಟ್ಟಡವಿಯಲ್ಲಿ ಮಹಿಳೆಯರಿಂದ ಚಾಲನೆ ಪಡೆದ ಪರಿಸರ ರಕ್ಷಣಾ ಹೋರಾಟದ ಸಂದೇಶವನ್ನು ಬೇರೆ ರಾಜ್ಯಗಳಿಗಷ್ಟೇ ಅಲ್ಲ ವಿಶ್ವದ ಅನೇಕ ದೇಶಗಳಲ್ಲಿ ಬಿತ್ತರಿಸುತ್ತ ಸುತ್ತಿದವರು.

1980ರಲ್ಲಿ ನೈರೋಬಿಯಲ್ಲಿ ವಿಶ್ವಸಂಸ್ಥೆ ಏರ್ಪಡಿಸಿದ್ದ ಶಕ್ತಿ ಸಮ್ಮೇಳನಕ್ಕೆ ಇವರು ಹಾಜರಾದ ವೈಖರಿ ಸದಾ ನೆನಪಿಡುವಂಥದ್ದು. ಹಿಮಾಲಯದ ಹಳ್ಳಿಗಾಡಿನ ಶ್ರಮಿಕ ಹೈದನಂತೆ ತಮ್ಮ ಬೆನ್ನಿಗೆ ಕಟ್ಟಿಗೆಯ ಹೊರೆಯನ್ನು ಬಿಗಿದುಕೊಂಡು ಏದುಸಿರು ಬಿಡುತ್ತ ಮೆಲ್ಲಗೆ ಮೆಟ್ಟಿಲು ಏರಿ ಅವರು ಸಭಾಂಗಣವನ್ನು ಪ್ರವೇಶಿಸಿ ಎಲ್ಲರ ಗಮನ ಸೆಳೆದು ಮಾಧ್ಯಮಗಳ ಮನ ಗೆದ್ದರು. ಅರಣ್ಯದ ಮಧ್ಯೆಯೇ ವಾಸಿಸುವವರೂ ಹೇಗೆ ಕಾರ್ಪೊರೇಟ್ ಗುತ್ತಿಗೆದಾರರ ಮುಷ್ಟಿಗೆ ಸಿಕ್ಕು ತುಂಡು ಸೌದೆಗಾಗಿ ಹೋರಾಡಬೇಕಾಗಿ ಬಂದಿದೆ ಎಂಬುದನ್ನು ಈ ವಿಶಿಷ್ಟ ದೃಶ್ಯಮಾಧ್ಯಮದ ಮೂಲಕ ಜಗತ್ತಿಗೆ ಬಿತ್ತರಿಸಿದರು.

ಹೋರಾಟ ಇವರಿಗೆ ಬೆನ್ನಿಗೆ ಸದಾ ಅಂಟಿಕೊಂಡ ವ್ಯಸನ. ತಮ್ಮ 17ನೇ ವಯಸ್ಸಿನಲ್ಲೇ ಸ್ವಾತಂತ್ರ್ಯ ಹೋರಾಟಕ್ಕೆ ಕೈಜೋಡಿಸಿ ಸೆರೆಮನೆ ಸೇರಿದ್ದ ಅವರು ಸರ್ವೋದಯ ಕಾರ್ಯಕರ್ತರಾಗಿ ಊರೂರು ಸುತ್ತುತ್ತಿದ್ದಾಗ ಅವರ ನೆರೆಯ ಚಾಮೋಲಿ ಜಿಲ್ಲೆಯಲ್ಲೇ ಮಹಿಳೆಯರು ಮರಗಳನ್ನು ಅಪ್ಪಿಕೊಂಡು ಅರಣ್ಯ ಗುತ್ತಿಗೆದಾರರನ್ನು ಹಿಮ್ಮೆಟ್ಟಿಸಿದರು. ಇವರಿಗೆ ಹೋರಾಟದ ಹೊಸ ಹಾದಿ ಸಿಕ್ಕಂತಾಯಿತು. ಪತ್ರಿಕೆಗಳಿಗೆ ಆಗಾಗ ಲೇಖನಗಳನ್ನು ಬರೆಯುತ್ತಿದ್ದ ಬಹುಗುಣ ಈಗ ಚಿಪ್ಕೊ ಚಳವಳಿಯ ಮೂಲಕ ಪರಿಸರ ಸಂರಕ್ಷಣೆಯ ವಕ್ತಾರರಾದರು.

ಹಿಮಾಲಯದ ಸೂಕ್ಷ್ಮ ಪರಿಸರ ಅಭಿವೃದ್ಧಿಯ ದಾಳಿಗೆ ನಲುಗುತ್ತಿರುವುದನ್ನು ಊರೂರಿಗೂ ತಿಳಿಸಲೆಂದು 1980ರ ಆರಂಭದಲ್ಲಿ ಕಾಶ್ಮೀರದಿಂದ ನಾಗಾಲ್ಯಾಂಡ್‌ನ ಕೊಹಿಮಾವರೆಗೆ ಎರಡು ವರ್ಷಗಳ ಪಾದಯಾತ್ರೆ ನಡೆಸಿದ ಇವರು ಪರಿಸರ ಸಂತನೆಂದೇ ಪ್ರಸಿದ್ಧಿ ಪಡೆದರು. ಅದೇ ತಾನೇ ಇಡೀ ಜಗತ್ತಿಗೇ ಪರಿಸರ ಸಂರಕ್ಷಣೆಯ ಮಹತ್ವದ ಅರಿವು ಮೆಲ್ಲಗೆ ಮೂಡತೊಡಗಿತ್ತು. ಅದೇ ಸಂದರ್ಭದಲ್ಲಿ ಇಲ್ಲಿ ಕರ್ನಾಟಕದಲ್ಲಿ ಅರಣ್ಯನಾಶದ ಮಹಾಯಜ್ಞ ಆರಂಭವಾಗಿತ್ತು. ದಟ್ಟ ಅರಣ್ಯವನ್ನು ಸವರಿ ಹಾಕಿ ಹೊಸದಾಗಿ ನೀಲಗಿರಿ ನೆಡುವುದೇನು, ಅರಣ್ಯ ಮಧ್ಯೆ ಕಬ್ಬಿಣ-ಮ್ಯಾಂಗನೀಸ್ ಗಣಿಗಾರಿಕೆ ನಡೆದಿದ್ದೇನು, ಕಾಳಿನದಿಯನ್ನು ಮುಗಿಸಿ ಬೇಡ್ತಿ ನದಿಗೂ ಅಪಾಯ ಎದುರಾದಾಗ ಜನರು ಎದ್ದರು.

ಕೊಹಿಮಾ ಪಾದಯಾತ್ರೆಯಲ್ಲಿ ಜೊತೆಯಾಗಿದ್ದ ಶಿರಸಿಯ ಪಾಂಡುರಂಗ ಹೆಗಡೆಯ ಆಹ್ವಾನದ ಮೇರೆಗೆ ಸುಂದರಲಾಲ್ ಬಹುಗುಣ ಇಲ್ಲಿಗೂ ಬಂದು ಬೇಡ್ತಿ ಚಳವಳಿಗೆ ಕೈಜೋಡಿಸಿದರು. ಚಿಪ್ಕೊ ಮಹಿಳೆಯರ ಸಾಹಸಗಳನ್ನು ಹಳ್ಳಿಯ ಯುವಜನರಿಗೆ ಬಣ್ಣಿಸಿದರು. ಇಲ್ಲೂ ಅಪ್ಪಿಕೋ ಆರಂಭವಾಯಿತು. ಈ ಚಳವಳಿಗೆ ದೇಶವ್ಯಾಪಿ ಕೀರ್ತಿ ಬಂದಿದ್ದೇ ತಡ, ಬಹುಗುಣರಿಗೆ ಅನೇಕ ದೇಶ ವಿದೇಶಗಳಿಂದಲೂ ಆಹ್ವಾನ ಬರತೊಡಗಿತ್ತು.

ಮೊದಲೇ ಸಂತನ ವೇಷಭೂಷಣ, ಮೆಲು ಮಾತು, ಅಹಿಂಸಾ ಮೂರ್ತಿಯ ಪ್ರತಿರೂಪ. “ಅರಣ್ಯ ಎಂದರೆ ಬರೀ ಫರ್ನಿಚರ್ ಮಾಡುವ ದಿಮ್ಮಿಗಳಲ್ಲ; ಅರಣ್ಯಗಳೆಂದರೆ ಪೃಥ್ವಿಯ ಶ್ವಾಸಕೋಶ; ನದಿಗಳ ಜನ್ಮದಾಯಿನಿ, ಮಣ್ಣಿನ ರಕ್ಷಣೆಯ ಖಜಾನೆ” ಎಂದು ಪುರಾತನ ಋಷಿಮುನಿಯಂತೆ ನಿರುದ್ವೇಗದ ಪ್ರವಚನ ನೀಡುವ ಈ ಸಂತನ ಮಾತುಗಳಿಗೆ ಜನರನ್ನು ಮೋಡಿ ಮಾಡುವ ಶಕ್ತಿಯಿತ್ತು. ಎಲ್ಲೆಲ್ಲಿ ಸುಂದರ ನಿಸರ್ಗಕ್ಕೆ ಅಭಿವೃದ್ಧಿಯ ಕೊಡಲಿ ಏಟು ಬೀಳುತ್ತಿದ್ದಲ್ಲೆಲ್ಲ ಸುಂದರಲಾಲ್ ಅಲ್ಲಿಗೆ ಹಾಜರಾಗತೊಡಗಿದರು. ಸೇಬು ಹಣ್ಣುಗಳನ್ನು ರವಾನೆಗೆಂದು ಕಟ್ಟಿಗೆಯ ಪ್ಯಾಕಿಂಗ್ ನೋಡಿ ಇವರು ಸೇಬು ಬಿಟ್ಟರು; ಭತ್ತ ಬೆಳೆಯಲು ಅಪಾರ ನೀರು ಬೇಕಾಗುತ್ತದೆಂದು ಇವರು ಅನ್ನ ಬಿಟ್ಟರು. ಉರುವಲ ಸೌದೆಗೆಂದು ಗಿಡಮರಗಳ ನಾಶ ನೋಡಿ ಇವರು ಬೇಯಿಸಿದ ಆಹಾರವನ್ನೂ ತ್ಯಜಿಸಿದರು.

‘ಪರಿಸರ ರಕ್ಷಣೆಯ ಹರಿಕಾರ’ ಎಂದೆಲ್ಲ ಪ್ರಸಿದ್ಧಿ ಪಡೆದ ಇವರಿಗೆ ಅಂತರರಾಷ್ಟ್ರೀಯ ಸ್ತರದಲ್ಲಿ ನಾನಾ ಪ್ರಶಸ್ತಿಗಳು, ಗೌರವ ಡಾಕ್ಟರೇಟ್ ಕೂಡ ಬಂತು. ಇವರ ತಾಯ್ನಾಡಿನಲ್ಲೇ ತೆಹ್ರಿ ಅಣೆಕಟ್ಟಿಗೆ ಸಿದ್ಧತೆ ನಡೆದಾಗ ಅಲ್ಲಿ ಒಮ್ಮೆ 45 ದಿನಗಳ, ಮತ್ತೊಮ್ಮೆ 75 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿದರು. ಅವರ ಹೋರಾಟಕ್ಕೆ ಬೆಲೆ ಸಿಗಲಿಲ್ಲ. ಆದರೆ ಪದ್ಮವಿಭೂಷಣ ಪ್ರಶಸ್ತಿ ಬಂತು. ಕೊನೆಗೆ ಅವರದೇ ಆಶ್ರಮದ ಪ್ರದೇಶ ಜಲಸಮಾಧಿಯಾಗಿ ಈ ವೃದ್ಧ ದಂಪತಿಯನ್ನು ಡೆಹ್ರಾಡೂನ್‌ಗೆ ಸ್ಥಳಾಂತರಿಸಲಾಯಿತು. ‘ನೀನು ವಿಶ್ರಾಂತಿ ಪಡೆ, ನಾನೇ ಪ್ರಭುತ್ವಕ್ಕೆ ಪಾಠ ಹೇಳುತ್ತೇನೆ’ ಎಂದು ಪ್ರಕೃತಿಯೇ ಇವರಿಗೆ ಹೇಳಿತೇನೊ. ಚಿಪ್ಕೊ ಚಳವಳಿ ನಡೆದ ಅದೇ ಚಾಮೋಲಿಯಲ್ಲಿ ಹಿಮಕುಸಿತದಿಂದಾಗಿ ಕಳೆದ ಫೆಬ್ರುವರಿಯಲ್ಲಿ ಧವಳಿ ಗಂಗಾ ಅಣೆಕಟ್ಟು ಭಗ್ನವಾಗಿ 72 ಜನರ ಜಲಸಮಾಧಿಯಾಯಿತು.

ವಿಧಿ ನೋಡಿ. ಆಮ್ಲಜನಕ ನೀಡುವ ಗಿಡಮರಗಳ ಉಳಿವಿಗಾಗಿ ಅರ್ಧ ಶತಮಾನವನ್ನೇ ಸವೆಸಿದ ಈ ಯೋಗಿ ಸ್ವತಃ ಆಮ್ಲಜನಕ ಅಭಾವದಿಂದಾಗಿ ಅಸುನೀಗಬೇಕಾಯಿತು.



ಅಪ್ಪಿಕೋ ಚಳವಳಿಗೆ 25 ವರ್ಷ ತುಂಬಿದ ವರ್ಷವಾದ 2008ರ ಸೆ.8ಅನ್ನು ಸಹ್ಯಾದ್ರಿ ದಿನವನ್ನಾಗಿ ಆಚರಿಸಿದ ಸಂದರ್ಭದಲ್ಲಿ ಶಿರಸಿ ತಾಲ್ಲೂಕಿನ ಸಾಲ್ಕಣಿ ಶಾಲೆಯಲ್ಲಿ ನಡೆದ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಚಿಪ್ಕೊ ಚಳವಳಿ ನೇತಾರ ಸುಂದರಲಾಲ ಬಹುಗುಣ ಅವರು ಮಕ್ಕಳಿಗೆ ಪರಿಸರ ಪಾಠ ಮಾಡಿದರು ಪ್ರಜಾವಾಣಿ ಚಿತ್ರ: ಕೃಷ್ಣಿ ಶಿರೂರ

ನುಡಿ ನಮನ

ಸುಂದರಲಾಲ ಬಹುಗುಣ ಇನ್ನಿಲ್ಲ

ಒಂದನೇ ಪುಟದಿಂದ...

ಕೋವಿಡ್‌–19 ದೃಢಪಟ್ಟಿದ್ದರಿಂದ ಅವರನ್ನು ಮೇ 8ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು.

‘ಕಳೆದ ರಾತ್ರಿ ಅವರ ಆರೋಗ್ಯ ಬಿಗಡಾಯಿಸಿತು. ಆಮ್ಲಜನಕ ಮಟ್ಟ ಕುಸಿದ ಕಾರಣ ಅವರಿಗೆ ಐಸಿಯುನಲ್ಲಿ ಚಿಕಿತ್ಸೆ ಮುಂದುವರಿಸಲಾಯಿತು. ಚಿಕಿತ್ಸೆಗೆ ಸ್ಪಂದಿಸದೇ ಮಧ್ಯಾಹ್ನ 12.05ಕ್ಕೆ ಅವರು ಕೊನೆಯುಸಿರೆಳೆದರು’ ಎಂದು ‘ಏಮ್ಸ್’ ನಿರ್ದೇಶಕ ಡಾ.ರವಿಕಾಂತ್ ಹೇಳಿದರು.

1927ರ ಜನವರಿ 9ರಂದು ಉತ್ತರಾಖಂಡದ ತೆಹ್ರಿ ಜಿಲ್ಲೆಯ ಮರೋಡಾ ಗ್ರಾಮದಲ್ಲಿ ಜನಿಸಿದ ಸುಂದರಲಾಲ್ ಅವರು 70ರ ದಶಕದಲ್ಲಿ ಪರಿಸರ ಸಂರಕ್ಷಣಾ ಕಾರ್ಯಕರ್ತರಾದ ಗೌರದೇವಿ ಜತೆಗೂಡಿ ಚಿಪ್ಕೊ ಚಳವಳಿಯನ್ನು ಆರಂಭಿಸಿದ್ದರು.

ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ ಟಿಎಂಸಿಯ ಶೋಭನ್‌ದೇವ್

ಭವಾನಿಪುರದಿಂದ ಮಮತಾ ಕಣಕ್ಕೆ?

ಕೋಲ್ಕತ್ತ (ಪಿಟಿಐ): ನಂದಿಗ್ರಾಮದಲ್ಲಿ ಬಿಜೆಪಿಯ ಸುವೇಂದು ಅಧಿಕಾರಿ ವಿರುದ್ಧ ಸೋತಿದ್ದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ಈಗ ತಮ್ಮ ಭದ್ರಕೋಟೆ ಭವಾನಿಪುರ ವಿಧಾನಸಭಾ ಕ್ಷೇತ್ರದಿಂದ ಕಣಕ್ಕೆ ಇಳಿಯುವುದು ಖಚಿತವಾಗಿದೆ. ಭವಾನಿಪುರ ಕ್ಷೇತ್ರದ ಶಾಸಕರಾದ ಸಚಿವ ಶೋಭನ್‌ದೇವ್ ಚಟ್ಟೋಪಾಧ್ಯಾಯ ಅವರು ತಮ್ಮ ಸ್ಥಾನಕ್ಕೆ ಶುಕ್ರವಾರ ರಾಜೀನಾಮೆ ನೀಡಿದ್ದಾರೆ.

ನಂದಿಗ್ರಾಮ ಕ್ಷೇತ್ರದಲ್ಲಿ ಸ್ಪರ್ಧಿಸುವ ಸಲುವಾಗಿ ಭವಾನಿಪುರ ಕ್ಷೇತ್ರವನ್ನು ತಮ್ಮ ಆಪ್ತ ಶೋಭನ್‌ದೇವ್ ಅವರಿಗೆ ಮಮತಾ ಬಿಟ್ಟುಕೊಟ್ಟಿದ್ದರು. ನಂದಿಗ್ರಾಮದಲ್ಲಿ ಸುವೇಂದು ಅಧಿಕಾರಿ ವಿರುದ್ಧ ಮಮತಾ ಬ್ಯಾನರ್ಜಿ ಸೋತಿದ್ದರು. ನೂತನ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ ಮಮತಾ ಅವರು, ತಮ್ಮ ಅಧಿಕಾರ ಉಳಿಸಿಕೊಳ್ಳಲು ಮುಂದಿನ ಆರು ತಿಂಗಳ ಒಳಗೆ ವಿಧಾನಸಭೆಗೆ ಆಯ್ಕೆಯಾಗುವುದು ಅನಿವಾರ್ಯ. ಇಲ್ಲದಿದ್ದಲ್ಲಿ, ಅವರು ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಬೇಕಾಗುತ್ತದೆ.

2011 ಮತ್ತು 2016ರ ಚುನಾವಣೆಯಲ್ಲಿ ಮಮತಾ ಅವರು ಭವಾನಿಪುರ ಕ್ಷೇತ್ರದಿಂದ ಚುನಾಯಿತರಾಗಿದ್ದರು. ಹೀಗಾಗಿ ಅವರು ತಮ್ಮ ನೆಚ್ಚಿನ ಕ್ಷೇತ್ರ ಭವಾನಿಪುರದಲ್ಲಿ ಪುನರಾಯ್ಕೆ ಬಯಸಿದ್ದಾರೆ.

ಮುಖ್ಯಾಂಶಗಳು

- ಖಾರ್ದಹ್ ಕ್ಷೇತ್ರದಿಂದ ಶೋಭನ್‌ದೇವ್ ಕಣಕ್ಕಿಳಿಯುವ ಸಾಧ್ಯತೆ
- ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಗಾಗಿ ಸ್ಥಾನ ತೆರವು ಮಾಡಿದ ಆಪ್ತ
- ಭವಾನಿಪುರ, ಖಾರ್ದಹ್ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಬೇಕಿದೆ



ಶಾಸಕ ಶೋಭನ್‌ದೇವ್ ಚಟ್ಟೋಪಾಧ್ಯಾಯ ಅವರು ವಿಧಾನಸಭೆ ಸ್ಪೀಕರ್ ಬಿಮಲ್ ಬ್ಯಾನರ್ಜಿಗೆ ರಾಜೀನಾಮೆ ಪತ್ರ ಸಲ್ಲಿಸಿದರು

ಶೋಭನ್‌ದೇವ್ ಅವರಿಂದ ರಾಜೀನಾಮೆ ಕೊಡಿಸಲಾಗಿದೆ. ಪಶ್ಚಿಮ ಬಂಗಾಳದ ನೂತನ ಸಂಪುಟದಲ್ಲಿ ಸಚಿವರಾಗಿರುವ ಸೋವನ್‌ದೇವ್ ಅವರೂ ಮುಂದಿನ ಆರು ತಿಂಗಳ ಒಳಗೆ ವಿಧಾನಸಭೆಗೆ ಪುನರಾಯ್ಕೆಯಾಗಬೇಕು.

ಖಾರ್ದಹ್ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದ ಟಿಎಂಸಿಯ ಹಿರಿಯ ನಾಯಕ ಕಾಜಲ್ ಸಿನ್ಹಾ ಅವರು ನಿಧನರಾದ ಕಾರಣ, ಆ ಕ್ಷೇತ್ರ ತೆರವಾಗಿದೆ. ಈ ಕ್ಷೇತ್ರಕ್ಕೂ ಉಪಚುನಾವಣೆ ನಡೆಯಬೇಕಿದೆ. ಶೋಭನ್‌ದೇವ್ ಅವರು ಖಾರ್ದಹ್ ಕ್ಷೇತ್ರದಿಂದ ಕಣಕ್ಕೆ ಇಳಿಯುವ ಸಾಧ್ಯತೆ ಹೆಚ್ಚು ಎಂದು ಪಕ್ಷದ ಮೂಲಗಳು ಹೇಳಿವೆ.

ಪ್ರಜಾವಾಣಿ DH ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್‌–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 23 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 24 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ ‘ಡೆಕ್ಕನ್ ಹೆರಾಲ್ಡ್’ ಹಾಗೂ ‘ಪ್ರಜಾವಾಣಿ’ ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.



₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ-ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ಹಣ
1.	**ರಾಜಹನ್ಸ್ ಎಂಟರ್‌ಪ್ರೈಸಸ್,** ನಂ. 134, 4ನೇ ಮುಖ್ಯರಸ್ತೆ, ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್, ಬೆಂಗಳೂರು.	₹1,00,000
2.	**ದಿ ಆಫ್‌ಸೆಟ್ ಪ್ರಿಂಟರ್ಸ್ ಟೆಕ್ನಾಲಜಿ ಟ್ರಸ್ಟ್,** ನಂ. 90/51, 2ನೇ ಮುಖ್ಯರಸ್ತೆ, ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್, ಬೆಂಗಳೂರು	₹1,00,000
3.	**ವೇದಾವತಿ ಮಂಚಯ್ಯ,** ನಂ. 2640, 2ನೇ ಮೇನ್, ಮೊದಲನೇ ಮಹಡಿ, ವಿ.ವಿ. ಮೊಹಲ್ಲಾ, ಮೈಸೂರು	₹ 25,000
4.	**ರಾಜು,** ನಂ.707, 5ನೇ ಅಡ್ಡರಸ್ತೆ, ಬಿಎಸ್‌ಕೆ ಮೂರನೇ ಹಂತ, ಮೂರನೇ ಬ್ಲಾಕ್ ಬೆಂಗಳೂರು	₹ 10,000
5.	**ಶ್ರೀಕಾಂತ್ ರಂಗನಾಥ ಮಿಶ್ರಿಕೋಟಿ,** ಮ.ನಂ 118, 2ನೇ ಕ್ರಾಸ್, ದಾನೇಶ್ವರಿ ನಗರ, ಜೆಎಸ್‌ಎಸ್ ಕಾಲೇಜು ಹಿಂಭಾಗ, ವಿದ್ಯಾಗಿರಿ, ಧಾರವಾಡ	₹ 10,000
6.	**ಹರ್ಷ ಬಸವರಾಜಪ್ಪ,** ನಂ. 55, ಮೊದಲನೇ ಬ್ಲಾಕ್, 10ನೇ ಕ್ರಾಸ್, ರಾಮಮೂರ್ತಿ ನಗರ, ಬೆಂಗಳೂರು	₹ 5,001
7.	**ಅಪರ್ಣಾ ರಾವ್,** ನಂ. 107/Na, ಪ್ರಣವಂ, ಮೊದಲನೇ ಮಹಡಿ, ಓಂ ಶ್ರೀ ರೆಸಿಡೆನ್ಸಿ, ಉತ್ತರಹಳ್ಳಿ ಮುಖ್ಯರಸ್ತೆ, ಬೆಂಗಳೂರು	₹ 5,000
8.	**ಪ್ರೇರಣಾ ದಿನೇಶ್,** ನಂ. 79/1, 9ನೇ ಬ್ಲಾಕ್ ಈಸ್ಟ್ ಎಂಡ್ ‘ಡಿ’ ಮುಖ್ಯರಸ್ತೆ, ಜಯನಗರ, ಬೆಂಗಳೂರು	₹3,000
9.	**ಶುಭಾ ಶ್ರೀನಿವಾಸ ಕುಲಕರ್ಣಿ,** ಗೋಕಾಕ–591307	₹ 2,000
10.	**ಅಖಿಲ್ ವಿ. ಧನಂಜಯ್,** ನಂ. 269, 44ನೇ ಕ್ರಾಸ್, 9ನೇ ಮೇನ್, 5ನೇ ಬ್ಲಾಕ್, ಜಯನಗರ, ಬೆಂಗಳೂರು	₹ 2,000
11.	**ಲೀಲಾವತಿ ಎಸ್.ಎಸ್.** ನಂ. 9 ಬಿಲ್ಡಿಂಗ್ ನಂ. 20, ಕೆಎಚ್‌ಬಿ ಶಿರ್ಕೆ ಅಪಾರ್ಟ್‌ಮೆಂಟ್, ಕೆಂಗೇರಿ ಸ್ಯಾಟಲೈಟ್ ಟೌನ್, ಬೆಂಗಳೂರು	₹1,111
12.	**ಎಸ್. ರಘುನಂದನ ಶರ್ಮಾ,** ಫ್ಲ್ಯಾಟ್ ನಂ. 701, ಶಶಿಕಿರಣ್ ಅಪಾರ್ಟ್‌ಮೆಂಟ್ಸ್, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು	₹ 1,001
13.	**ಮುರಿಗೇಶ್ ಜಿ.ಎಸ್.** ನಂ. 1547/7, ಬಿ– ಬ್ಲಾಕ್, ಸರಸ್ವತಿ ನಗರ, ದಾವಣಗೆರೆ	₹1,000
14.	**ಎಸ್.ಕೆ. ಚಂದ್ರಶೇಖರ್ ಶೆಟ್ಟಿ,** 6ನೇ ಕ್ರಾಸ್, ಎಂ.ಜೆ. ನಗರ, ಹೊಸಪೇಟೆ	₹ 1,000
15.	**ಚಂದ್ರಶೇಖರ ಶೆಟ್ಟಿ ಸಿ.** ಎಲ್‌ಐಸಿ ಏಜೆಂಟ್, ಚಾಮರಾಜಪೇಟೆ, ಬೆಂಗಳೂರು	₹ 1,000
	ಒಟ್ಟು ಮೊತ್ತ	₹2,67,113
	ಇದುವರೆಗೆ ಸಂಗ್ರಹವಾಗಿರುವ ಒಟ್ಟು ಮೊತ್ತ	₹ 5, 94,785

ನಾರದಾ ಪ್ರಕರಣ: ಆರೋಪಿಗಳಿಗೆ ಗೃಹ ಬಂಧನ

ಕೋಲ್ಕತ್ತ (ಪಿಟಿಐ): ಸಿಬಿಐಯಿಂದ ಬಂಧನಕ್ಕೆ ಒಳಗಾಗಿರುವ ನಾರದಾ ಮಾರುವೇಷದ ಕಾರ್ಯಾಚರಣೆ ಪ್ರಕರಣದ ಆರೋಪಿಗಳಾದ ಟಿಎಂಸಿಯ ನಾಲ್ವರು ಮುಖಂಡರನ್ನು ಗೃಹಬಂಧನದಲ್ಲಿ ಇರಿಸುವಂತೆ ಕೋಲ್ಕತ್ತ ಹೈಕೋರ್ಟ್ ಶುಕ್ರವಾರ ಆದೇಶಿಸಿದೆ.

ರಾಜ್ಯದ ಸಚಿವರಾದ ಸುಬ್ರತ ಮುಖರ್ಜಿ ಮತ್ತು ಫಿರ್ಹಾದ್ ಖಾನ್, ಶಾಸಕ ಮದನ್‌ಮಿತ್ರ ಹಾಗೂ ಮಾಜಿ ಮೇಯರ್ ಸೋವನ್ ಚಟರ್ಜಿ ಅವರನ್ನು ಕಳೆದ ಸೋಮವಾರ ಸಿಬಿಐ ಬಂಧಿಸಿತ್ತು. ಅದೇ ದಿನ ಸಿಬಿಐ ವಿಶೇಷ ನ್ಯಾಯಾಲಯವು ಅವರಿಗೆ ಜಾಮೀನು ನೀಡಿತ್ತು. ಆದರೆ ಈ ಜಾಮೀನಿಗೆ ಕೋಲ್ಕತ್ತ ಹೈಕೋರ್ಟ್ ತಡೆಯಾಜ್ಞೆ ನೀಡಿತ್ತು.

ತಡೆಯಾಜ್ಞೆಯನ್ನು ತೆರವುಗೊಳಿಸುವಂತೆ ಆರೋಪಿಗಳು ಸಲ್ಲಿಸಿದ ಅರ್ಜಿಯನ್ನು ಹಂಗಾಮಿ ಮುಖ್ಯನ್ಯಾಯಮೂರ್ತಿ ರಾಜೇಶ್ ಬಿಂದಲ್ ಹಾಗೂ ನ್ಯಾಯಮೂರ್ತಿ ಅರಿಜಿತ್ ಬ್ಯಾನರ್ಜಿ ಅವರ ವಿಭಾಗೀಯ ಪೀಠವು ತಿರಸ್ಕರಿಸಿದೆ. ಬದಲಿಗೆ, ಇಲ್ಲಿಯವರೆಗೂ ನ್ಯಾಯಾಂಗ ಬಂಧನದಲ್ಲಿದ್ದ ಆರೋಪಿಗಳನ್ನು ಇನ್ನು ಮುಂದೆ ಗೃಹಬಂಧನದಲ್ಲಿಡಬೇಕು ಎಂದು ಆದೇಶಿಸಿದೆ.

ಪ್ರಕರಣದ ವಿಚಾರದಲ್ಲಿ ಇಬ್ಬರು ನ್ಯಾಯಮೂರ್ತಿಗಳ ಅಭಿಪ್ರಾಯಗಳಲ್ಲಿ ಭಿನ್ನತೆ ಕಂಡು ಬಂದಿರುವ ಕಾರಣಕ್ಕೆ ಪ್ರಕರಣವನ್ನು ಬೇರೆ ಪೀಠಕ್ಕೆ ವರ್ಗಾಯಿಸಲು ಸಹ ಪೀಠ ತೀರ್ಮಾನಿಸಿದೆ.

ಸಂಕ್ಷಿಪ್ತ ಸುದ್ದಿ

ಎಫ್‌ಸಿಬಿಯುಗೆ ಕೆನೆತ್ ನೇಮಕ

ಬೆಂಗಳೂರು: ಸಿ.ಕೆನೆತ್ ರಾಜ್ ಅವರನ್ನು ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡ ಯುನೈಟೆಡ್ ಪ್ರೊ ಸ್ಕೂಲ್ ಆ್ಯಂಡ್ ಅಕಾಡೆಮಿಯ ತಾಂತ್ರಿಕ ವಿಭಾಗದ ಮುಖ್ಯಸ್ಥರನ್ನಾಗಿ ನೇಮಿಸಿದೆ.

ಫುಟ್‌ಬಾಲ್ ತರಬೇತಿಯಲ್ಲಿ 19 ವರ್ಷಗಳ ಅನುಭವ ಹೊಂದಿರುವ ಕೆನೆತ್, ಭಾರತದ ಯುವ ತರಬೇತುದಾರರಲ್ಲಿ ಒಬ್ಬರು. ಎಎಫ್‌ಸಿ 'ಎ' ಲೈಸೆನ್ಸ್ ಹೊಂದಿರುವ ಅವರು, ಫಿಫಾದ ಯುವ ತರಬೇತಿ ಶಿಕ್ಷಣ ಪೂರ್ಣಗೊಳಿಸಿದ್ದಾರೆ. 2012–2014ರ ಅವಧಿಯಲ್ಲಿ ಅವರು ಭಾರತದ 16 ವರ್ಷದೊಳಗಿನ ಮತ್ತು 15 ವರ್ಷದೊಳಗಿನವರ ತಂಡಗಳಿಗೆ ಸಹಾಯಕ ಕೋಚ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಅವರ ಮಾರ್ಗದರ್ಶನದಲ್ಲಿ 16 ವರ್ಷದೊಳಗಿನವರ ತಂಡವು 2013ರಲ್ಲಿ ನೇಪಾಳದಲ್ಲಿ ನಡೆದ ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿತ್ತು.

ಕ್ರಿಕೆಟ್ ಆಟಗಾರ ರಂಕಿನ್ ನಿವೃತ್ತಿ



ನವದೆಹಲಿ (ಪಿಟಿಐ): ಮೂರೂ ಪ್ರಕಾರಗಳಲ್ಲಿ ಎರಡು ರಾಷ್ಟ್ರಗಳ ಪರವಾಗಿ ಆಡಿದ ಮೊದಲ ಕ್ರಿಕೆಟರ್ ಬಾಯ್ಡ್ ರಂಕಿನ್ ಅವರು ಶುಕ್ರವಾರ ನಿವೃತ್ತರಾಗಿದ್ದಾರೆ. ಅವರು ಇಂಗ್ಲೆಂಡ್ ಮತ್ತು ಐರ್ಲೆಂಡ್ ತಂಡದ ವೇಗದ ಬೌಲರ್ ಆಗಿದ್ದರು. 2003ರಲ್ಲಿ ಐರ್ಲೆಂಡ್ ತಂಡದ ಪರವಾಗಿ ಪದಾರ್ಪಣೆ ಪಂದ್ಯ ಆಡಿದ ಅವರು 2020ರಲ್ಲಿ ಗ್ರೇಟರ್ ನೊಯ್ಡಾದಲ್ಲಿ ನಡೆದ ಅಫ್ಗಾನಿಸ್ತಾನ ಎದುರಿನ ಟಿ20 ಪಂದ್ಯದಲ್ಲಿ ದೇಶದ ಪರವಾಗಿ ಕೊನೆಯದಾಗಿ ಕಣಕ್ಕೆ ಇಳಿದಿದ್ದರು. ಇಂಗ್ಲೆಂಡ್ ತಂಡದಲ್ಲಿ 2013–14ನೇ ಸಾಲಿನ ಆ್ಯಷಸ್ ಟೆಸ್ಟ್ ಸರಣಿ, ಏಳು ಏಕದಿನ ಮತ್ತು ಎರಡು ಟಿ20 ಪಂದ್ಯಗಳಲ್ಲಿ ಆಡಿದ್ದಾರೆ. 2017ರಲ್ಲಿ ಐರ್ಲೆಂಡ್ ತಂಡ ಟೆಸ್ಟ್ ಮಾನ್ಯತೆ ಗಳಿಸಿದ ನಂತರ ಆ ತಂಡ ಸೇರಿಕೊಂಡರು.

ಹಿಂದೆ ಸರಿದ ಹಲೆಪ್

ಬುಚರೆಸ್ಟ್, ರುಮೇನಿಯಾ (ಎಪಿ): ವಿಶ್ವ ಟೆನಿಸ್ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಸಿಮೊನಾ ಹಲೆಪ್ ಅವರು ಫ್ರೆಂಚ್ ಓಪನ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಕಾಲು ಗಾಯದ ಕಾರಣ ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ.

ಭಾರತ ಎದುರಿನ ಟೆಸ್ಟ್ ಸರಣಿ: ವರದಿ ಅಲ್ಲಗಳೆದ ಇಸಿಬಿ

ವೇಳಾಪಟ್ಟಿ ಬದಲಾವಣೆ ಇಲ್ಲ

ನವದೆಹಲಿ (ಪಿಟಿಐ): ಅನಿರ್ದಿಷ್ಟಾವಧಿಗೆ ಸ್ಥಗಿತಗೊಂಡಿರುವ ಐಪಿಎಲ್ ಕ್ರಿಕೆಟ್ ಟೂರ್ನಿಯನ್ನು ಪೂರ್ಣಗೊಳಿಸುವುದಕ್ಕಾಗಿ ಟೆಸ್ಟ್ ಸರಣಿಯ ವೇಳಾಪಟ್ಟಿ ಬದಲಿಸಲು ಬಿಸಿಸಿಐ ಮನವಿ ಮಾಡಿಲ್ಲ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಶುಕ್ರವಾರ ಹೇಳಿದೆ.

ಭಾರತ ತಂಡವು ಇಂಗ್ಲೆಂಡ್ ವಿರುದ್ಧ ಆಡಬೇಕಿರುವ ಟೆಸ್ಟ್ ಸರಣಿಯ ಮೊದಲ ಪಂದ್ಯವು ಆಗಸ್ಟ್ 4ರಿಂದ ನಿಗದಿಯಾಗಿದೆ. ಈ ಸರಣಿಯನ್ನು ಒಂದು ವಾರ ಮೊದಲೇ ಆರಂಭಿಸಿದರೆ, ಐಪಿಎಲ್‌ನ ಉಳಿದ 31 ಪಂದ್ಯಗಳನ್ನು ನಡೆಸಲು ಅವಕಾಶ ಸಿಗಬಹುದು ಎಂದು ಬಿಸಿಸಿಐ ಅಭಿಪ್ರಾಯಪಟ್ಟಿರುವುದಾಗಿ ಬ್ರಿಟಿಷ್ ಮಾಧ್ಯಮ ವರದಿ ಮಾಡಿತ್ತು.

'ಬಿಸಿಸಿಐ ಜೊತೆನಿರಂತರ ಸಂಪರ್ಕದಲ್ಲಿದ್ದೇವೆ. ಕೋವಿಡ್ ಸೃಷ್ಟಿಸಿರುವ ಬಿಕ್ಕಟ್ಟಿನ ಕುರಿತು ಚರ್ಚೆ ನಡೆಸಿದ್ದೇವೆ. ಟೆಸ್ಟ್ ಸರಣಿಯ ವೇಳಾಪಟ್ಟಿ ಬದಲಿಸಲು ಬಿಸಿಸಿಐ ಅಧಿಕೃತವಾಗಿ ಕೇಳಿಕೊಂಡಿಲ್ಲ. ಹಾಗಾಗಿ ನಿಗದಿಯಂತೆ ಪಂದ್ಯಗಳು ನಡೆಯಲಿವೆ' ಎಂದು ಇಸಿಬಿ ವಕ್ತಾರರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

2021ರ ಐಪಿಎಲ್ ಆವೃತ್ತಿ ಪೂರ್ಣಗೊಳ್ಳದಿದ್ದರೆ ಬಿಸಿಸಿಐಗೆ ₹ 2500 ಕೋಟಿ ಆದಾಯ ನಷ್ಟವಾಗಲಿದೆ. ಬಯೋಬಬಲ್‌ನಲ್ಲಿ ಕೋವಿಡ್ ಪ್ರಕರಣಗಳು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಈ ಬಾರಿಯ ಟೂರ್ನಿಯನ್ನು ಸ್ಥಗಿತಗೊಳಿಸಲಾಗಿದೆ. ಇಂಗ್ಲೆಂಡ್ ತಂಡದ ಮಾಜಿ ನಾಯಕ ಹಾಗೂ ಹೆಸರಾಂತ ಕ್ರಿಕೆಟಿಗ ಮೈಕೆಲ್ ಅಥರ್ಟನ್ ಅವರು ಸುದ್ದಿಸಂಸ್ಥೆಯೊಂದಕ್ಕೆ ಬರೆದ ಅಂಕಣದಲ್ಲಿ ವೇಳಾಪಟ್ಟಿಯ ಬದಲಾವಣೆಗೆ ಬಿಸಿಸಿಐ ಮನವಿ ಮಾಡಿಕೊಂಡಿದ್ದಾಗಿ ಉಲ್ಲೇಖಿಸಿದ್ದರು. ಈ ಕುರಿತು ಪ್ರತಿಕ್ರಿಯಿಸಿರುವ ಬಿಸಿಸಿಐ ಅಧಿಕಾರಿಯೊಬ್ಬರು 'ಮಂಡಳಿಯು ಐಪಿಎಲ್ ಆಯೋಜಿಸುವ ಆಯ್ಕೆಗಳ ಹುಡುಕಾಟದಲ್ಲಿದೆಯಷ್ಟೆ' ಎಂದಿದ್ದಾರೆ.

ಬಿಸಿಸಿಐ ಔಪಚಾರಿಕವಾಗಿ ಮನವಿ ಮಾಡಿಕೊಂಡರೆ ಇಸಿಬಿ ತನ್ನ ಮಹತ್ವಾಕಾಂಕ್ಷೆಯ 'ದಿ ಹಂಡ್ರೆಡ್' ಹಾಗೂ ಪಾಕಿಸ್ತಾನ ವಿರುದ್ಧದ ಸೀಮಿತ ಓವರ್‌ಗಳ ಸರಣಿಯ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಪಾಕಿಸ್ತಾನ ತಂಡವು ಇಂಗ್ಲೆಂಡ್ ವಿರುದ್ಧ ಜುಲೈ 8ರಿಂದ 20ರವರೆಗೆ ಏಕದಿನ ಹಾಗೂ ಟಿ20 ಸರಣಿ ಆಡಲಿದೆ. ದಿ ಹಂಡ್ರೆಡ್ ಟೂರ್ನಿ ಜುಲೈ 23ರಿಂದ ಆಗಸ್ಟ್ 22ರವರೆಗೆ ನಡೆಯಬೇಕಿದೆ.



ಭಾರತ–ಇಂಗ್ಲೆಂಡ್ ನಡುವಿನ ಟೆಸ್ಟ್ ಪಂದ್ಯವೊಂದರ ಸಂದರ್ಭ – ಪಿಟಿಐ ಚಿತ್ರ

ಬಾಕ್ಸಿಂಗ್ ಕೋಚ್ ಭಾರದ್ವಾಜ್ ಇನ್ನಿಲ್ಲ

ನವದೆಹಲಿ (ಪಿಟಿಐ): ಬಾಕ್ಸಿಂಗ್ ಕ್ರೀಡೆಯಲ್ಲಿ ಮೊದಲ ಬಾರಿ ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಕೋಚ್ ಓ.ಪಿ. ಭಾರದ್ವಾಜ್ (82) ದೀರ್ಘಕಾಲದ ಅನಾರೋಗ್ಯ ಹಾಗೂ ವಯೋಸಹಜ ಕಾಯಿಲೆಗಳಿಂದಾಗಿ ಶುಕ್ರವಾರ ನಿಧನರಾದರು. ಹತ್ತು ದಿನಗಳ ಹಿಂದಷ್ಟೇ ಅವರ ಪತ್ನಿ ಸಂತೋಷಿ ತೀರಿಕೊಂಡಿದ್ದರು.

1985ರಲ್ಲಿ ಮೊದಲ ಬಾರಿ ದ್ರೋಣಾಚಾರ್ಯ ಪ್ರಶಸ್ತಿಯನ್ನು ನೀಡಲಾಗಿತ್ತು. ಈ ಸಂದರ್ಭದಲ್ಲಿ ಬಾಲಚಂದ್ರ ಭಾಸ್ಕರ್ ಭಾಗವತ್ (ಕುಸ್ತಿ), ಓ.ಎಂ. ನಂಬಿಯಾರ್ (ಅಥ್ಲೆಟಿಕ್ಸ್) ಜೊತೆಗೆ ಭಾರದ್ವಾಜ್ ಅವರಿಗೂ ಪುರಸ್ಕಾರ ಸಂದಿತ್ತು.

'ಬಹಳ ದಿನಗಳಿಂದ ಅವರ ಆರೋಗ್ಯ ಚೆನ್ನಾಗಿರಲಿಲ್ಲ. ಹೀಗಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಪತ್ನಿಯ ಅಗಲಿಕೆ ಹಾಗೂ ವಯೋಸಹಜ ಕಾಯಿಲೆಗಳು ಅವರನ್ನು ಬಾಧಿಸಿದ್ದವು' ಎಂದು ಭಾರದ್ವಾಜ್ ಅವರ ಕುಟುಂಬದ ಆಪ್ತ ಟಿ.ಎಲ್.ಗುಪ್ತಾ ತಿಳಿಸಿದ್ದಾರೆ.

1968–1989ರ ಅವಧಿಯಲ್ಲಿ ಭಾರದ್ವಾಜ್ ಅವರು ರಾಷ್ಟ್ರೀಯ ತಂಡಕ್ಕೆ ತರಬೇತುದಾರರಾಗಿದ್ದರು. ಆಯ್ಕೆ ಸಮಿತಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. ಅವರ ಮಾರ್ಗದರ್ಶನದಲ್ಲಿ ಹಲವು ಬಾಕ್ಸರ್‌ಗಳು ಏಷ್ಯನ್, ಕಾಮನ್‌ವೆಲ್ತ್ ಮತ್ತು ದಕ್ಷಿಣ ಏಷ್ಯಾ ಕ್ರೀಡಾಕೂಟಗಳಲ್ಲಿ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಪಟಿಯಾಲದ ನ್ಯಾಷನಲ್ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಷನ್‌ನಲ್ಲಿ (ಎನ್‌ಐಎಸ್) ಬಾಕ್ಸಿಂಗ್ ಡಿಪ್ಲೊಮಾ ಕೋಚಿಂಗ್ ಕೋರ್ಸ್ ನಡೆಸಿಕೊಟ್ಟ ಮೊದಲಿಗರು ಭಾರದ್ವಾಜ್. ಎನ್‌ಐಎಸ್‌ನಿಂದ ನಿವೃತ್ತಿ ಪಡೆದ ಬಳಿಕ ವೀಕ್ಷಕ ವಿವರಣೆಕಾರಗಿ ಕಾರ್ಯನಿರ್ವಹಿಸಿದ್ದ ಅವರು, ದೆಹಲಿಯಲ್ಲಿ ಸ್ವಂತ ಜಿಮ್ ಕೇಂದ್ರವನ್ನು ಹೊಂದಿದ್ದರು.

2008ರಲ್ಲಿ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರಿಗೂ ಎರಡು ತಿಂಗಳ ಅವಧಿಗೆ ಬಾಕ್ಸಿಂಗ್‌ನ ಕೆಲವು ತಂತ್ರಗಳನ್ನು ಹೇಳಿಕೊಟ್ಟಿದ್ದರು.



ಓ.ಪಿ.ಭಾರದ್ವಾಜ್ –ಪಿಟಿಐ ಸಂಗ್ರಹ ಚಿತ್ರ

ಟಿಟಿಎಫ್‌ಐನಿಂದ ಧನಸಹಾಯ

ನವದೆಹಲಿ (ಪಿಟಿಐ): ಕೋವಿಡ್‌–19ರಿಂದ ತೊಂದರೆ ಎದುರಿಸುತ್ತಿರುವ ಹಾಲಿ, ಮಾಜಿ ಆಟಗಾರರು ಹಾಗೂ ಕೋಚ್‌ಗಳಿಗೆ ಧನಸಹಾಯ ಒದಗಿಸುವುದಾಗಿ ಭಾರತ ಟೇಬಲ್ ಟೆನಿಸ್ ಫೆಡರೇಷನ್ (ಟಿಟಿಎಫ್‌ಐ) ಪ್ರಕಟಿಸಿದೆ. ಈ ವಾರ ನಡೆದ ಟಿಟಿಎಫ್‌ಐ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿತ್ತು.

ಹಾಕಿ ಇಂಡಿಯಾಗೆ ಎಟಿಯನ್ ಗ್ಲಿಚಿಟ್ಜ್ ಪುರಸ್ಕಾರ

ಲಾಸನ್ (ಪಿಟಿಐ): ದೇಶದಲ್ಲಿ ಕ್ರೀಡೆಯ ಬೆಳವಣಿಗೆಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಹಾಕಿ ಇಂಡಿಯಾಗೆ (ಎಚ್‌ಐ) ಪ್ರತಿಷ್ಠಿತ ಎಟಿಯನ್ ಗ್ಲಿಚಿಟ್ಜ್ ಪುರಸ್ಕಾರ ನೀಡಲಾಗಿದೆ.

47ನೇ ಎಫ್‌ಐಎಚ್ ಅಧಿವೇಶನದ ಅಂಗವಾಗಿ ನಡೆದ ವರ್ಚುವಲ್ ಸಭೆಯಲ್ಲಿ ಎಫ್‌ಐಎಚ್ ಆಡಳಿತ ಮಂಡಳಿಯು ಈ ಪ್ರಶಸ್ತಿಯನ್ನು ಪ್ರಕಟಿಸಿತು.

'ಭಾರತದಲ್ಲಿ ಹಾಕಿ ಕ್ರೀಡೆಯ ಬೆಳವಣಿಗೆಗೆ ನೀಡಿದ ಗುರುತರ ಕೊಡುಗೆಯನ್ನು ಗಮನಿಸಿ ಎಟಿಯನ್ ಗ್ಲಿಚಿಟ್ಜ್ ಪುರಸ್ಕಾರವನ್ನು ಹಾಕಿ ಇಂಡಿಯಾಗೆ ನೀಡಲಾಗಿದೆ' ಎಂದು ಎಫ್‌ಐಎಚ್ ಹೇಳಿದೆ.

ಅಥ್ಲೆಟಿಕ್ ಕೂಟ ಸ್ಥಳಾಂತರ?

ನವದೆಹಲಿ: ಒಲಿಂಪಿಕ್ಸ್‌ಗೆ ಅರ್ಹತೆಗೆ ಅವಕಾಶವಿರುವ ಇಂಡಿಯನ್ ಗ್ರ್ಯಾನ್‌ಪ್ರಿ ಮತ್ತು ಅಂತರ ರಾಜ್ಯ ಅಥ್ಲೆಟಿಕ್ ಕೂಟವನ್ನು ಕೋವಿಡ್‌ನಿಂದಾಗಿ ಮತ್ತು ಟ್ರ್ಯಾಕ್ ಅಲಭ್ಯವಿರುವುದರಿಂದ ಬೆಂಗಳೂರಿಂದ ಬೇರೊಂದು ನಗರಕ್ಕೆ ಸ್ಥಳಾಂತರಿಸುವ ಸಾಧ್ಯತೆ ಇದೆ. ಜೂನ್ 15ರಿಂದ ಕೂಟ ನಡೆಸಲು ನಿರ್ಧರಿಸಲಾಗಿದೆ.

ಕಂಠೀರವ ಕ್ರೀಡಾಂಗಣದ ಟ್ರ್ಯಾಕ್ ಅಭಿವೃದ್ಧಿಪಡಿಸಲಾಗುತ್ತಿದ್ದು ಕೋವಿಡ್‌ನಿಂದಾಗಿ ಕಾಮಗಾರಿಗೆ ಅಡ್ಡಿಯಾಗಿದೆ. ಹೀಗಾಗಿ ಕ್ರೀಡಾಕೂಟಕ್ಕಾಗುವಾಗ ಸಿದ್ಧಗೊಳ್ಳುವ ನಿರೀಕ್ಷೆ ಇಲ್ಲ. ಟ್ರ್ಯಾಕ್ ಸಿದ್ಧವಾದರೂ ಪಟಿಯಾಲದಲ್ಲಿರುವ ಕ್ರೀಡಾಪಟುಗಳು ಈಗ ಬೆಂಗಳೂರಿಗೆ ಪ್ರಯಾಣಿಸುವುದು ಅಷ್ಟು ಸುರಕ್ಷಿತವಲ್ಲ.

ಕಬಡ್ಡಿ ಆಟಗಾರ್ತಿ ತೇಜಸ್ವಿನಿಗೆ ನೆರವು

ಬೆಂಗಳೂರು: ಕೋವಿಡ್‌ನಿಂದಾಗಿ ಪತಿಯನ್ನು ಕಳೆದುಕೊಂಡಿರುವ ಕಬಡ್ಡಿ ಆಟಗಾರ್ತಿ ಕರ್ನಾಟಕದ ತೇಜಸ್ವಿನಿ ಬಾಯಿ ಅವರಿಗೆ ಕೇಂದ್ರ ಕ್ರೀಡಾ ಸಚಿವಾಲಯ ₹ 2 ಲಕ್ಷ ಸಹಾಯ ಒದಗಿಸಿದೆ.

ತೇಜಸ್ವಿನಿ ಅವರ ಪತಿ ನವೀನ್ ಮೇ 11ರಂದು ಮೃತಪಟ್ಟಿದ್ದರು.

ಮಾಜಿ ಅಥ್ಲೀಟ್‌ಗಳು ಹಾಗೂ ಕೋಚ್ ಗಳಿಗೆ ನೆರವು ನೀಡುವ ಕಾರ್ಯಕ್ರಮದಡಿ ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಸಹಭಾಗಿತ್ವದಲ್ಲಿ ಕ್ರೀಡಾ ಸಚಿವಾಲಯ ಈ ಧನಸಹಾಯ ಮಂಜೂರು ಮಾಡಿದೆ.

'ಪತಿಗೆ ಕೇವಲ 30 ವರ್ಷ ವಯಸ್ಸಾಗಿತ್ತು. ತಂದೆಯ ನಿಧನದಿಂದಾಗಿ ಅವರು ಎದೆಗುಂದಿದ್ದರು. ಇದೇ ಆತಂಕ ಹಾಗೂ ಒತ್ತಡ ಅವರ ಜೀವ ಕಸಿದುಕೊಂಡಿತು' ಎಂದು ತೇಜಸ್ವಿನಿ ಹೇಳಿದ್ದಾಗಿ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ತಿಳಿಸಿದೆ.

'ನೆರವಿನ ನಿರೀಕ್ಷೆ ಇರಲಿಲ್ಲ. ಕ್ರೀಡಾ ಸಚಿವಾಲಯ, ಸಾಯ್ ಹಾಗೂ ಐಒಎ ಕ್ಷಿಪ್ರ ನಿರ್ಧಾರ ತೆಗೆದುಕೊಂಡಿವೆ. ಇಂತಹ ನೆರವು ಇದೇ ಮೊದಲ ಬಾರಿ ನಮಗೆ ಸಿಗುತ್ತಿದೆ. ನನಗೆ ಐದು ತಿಂಗಳ ಮಗುವಿದ್ದು, ಅದರ ಭವಿಷ್ಯಕ್ಕೆ ಈ ಹಣ ವಿನಿಯೋಗಿಸುವೆ' ಎಂದು ತೇಜಸ್ವಿನಿ ಹೇಳಿದ್ದಾರೆ. 2010 ಹಾಗೂ 2014ರ ಏಷ್ಯನ್ ಕ್ರೀಡಾಕೂಟಗಳಲ್ಲಿ ಚಿನ್ನ ಗೆದ್ದ ಭಾರತ ತಂಡದಲ್ಲಿ ಅವರು ಇದ್ದರು.

ಒಲಿಂಪಿಯನ್ ಮಜುಂದಾರ್ ನಿಧನ

ನವದೆಹಲಿ (ಪಿಟಿಐ): ಒಲಿಂಪಿಯನ್ ಬಾಕ್ಸರ್ ಶಕ್ತಿ ಮಜುಂದಾರ್ (89) ಪಶ್ಚಿಮ ಬಂಗಾಳದ ಬಾಲಿಗುಂಗ್‌ನಲ್ಲಿ ಹೃದಯಾಘಾತದಿಂದ ಶುಕ್ರವಾರ ನಿಧನರಾದರು. ಅವರು 1952ರ ಹೆಲ್ಸಿಂಕಿ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು ಎಂದು ಬಂಗಾಳ ಅಮೆಚೂರ್ ಬಾಕ್ಸಿಂಗ್ ಫೆಡರೇಷನ್ ತಿಳಿಸಿದೆ.

ಸೆನ್ಸೆಕ್ಸ್ 975 ಅಂಶ ಚೇತರಿಕೆ

ಮುಂಬೈ (ಪಿಟಿಐ): ಎರಡು ದಿನಗಳಿಂದ ಕುಸಿತ ಕಂಡಿದ್ದ ಷೇರುಪೇಟೆ ಸಂವೇದಿ ಸೂಚ್ಯಂಕಗಳು ಶುಕ್ರವಾರ ಭರ್ಜರಿ ಏರಿಕೆ ದಾಖಲಿಸಿದವು. ಎಸ್‌ಬಿಐನ ಉತ್ತಮ ಫಲಿತಾಂಶ ಹಾಗೂ ಕೋವಿಡ್–19 ಪ್ರಕರಣಗಳು ಕಡಿಮೆ ಆಗುತ್ತಿರುವುದು ಮಾರುಕಟ್ಟೆಯಲ್ಲಿ ಉತ್ಸಾಹದ ವಾತಾವರಣ ನಿರ್ಮಾಣಕ್ಕೆ ಕಾರಣವಾದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 975 ಅಂಶ ಏರಿಕೆ ಕಂಡಿತು. ಮಾರ್ಚ್ 30ರ ನಂತರ ಸೆನ್ಸೆಕ್ಸ್ ಒಂದು ದಿನದಲ್ಲಿ ಕಂಡ ಅತಿದೊಡ್ಡ ಏರಿಕೆ ಇದು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 269 ಅಂಶ ಏರಿಕೆ ಕಂಡಿತು.

ಶುಕ್ರವಾರದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ಒಟ್ಟು ₹ 2.41 ಲಕ್ಷ ಕೋಟಿಯಷ್ಟು ಜಾಸ್ತಿ ಆಗಿದೆ. ಈ ವಾರದ ಅವಧಿಯಲ್ಲಿ ಸೆನ್ಸೆಕ್ಸ್ ಒಟ್ಟು 1,807 ಅಂಶ, ನಿಫ್ಟಿ 497 ಅಂಶ ಏರಿಕೆ ದಾಖಲಿಸಿವೆ. 'ಎಸ್‌ಬಿಐ ಉತ್ತಮ ಫಲಿತಾಂಶ ದಾಖಲಿಸಿದ ಕಾರಣ, ಬ್ಯಾಂಕಿಂಗ್ ವಲಯದ ಷೇರುಗಳು ಉತ್ತಮ ಏರಿಕೆ ಕಂಡವು' ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ಹೇಳಿದರು. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯದಲ್ಲಿ 23 ಪೈಸೆ ಏರಿಕೆ ಆಗಿದೆ.

ಎಸ್‌ಬಿಐ: ಎನ್‌ಪಿಎ ಇಳಿಕೆ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ನಿವ್ವಳ ಲಾಭವು 2019–20ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕಕ್ಕೆ ಹೋಲಿಸಿದರೆ 2020–21ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಶೇಕಡ 80ರಷ್ಟು ಏರಿಕೆ ಆಗಿದೆ.

2019–20ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ₹ 3,580 ಕೋಟಿಯಷ್ಟಿದ್ದ ನಿವ್ವಳ ಲಾಭವು 2020–21ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ₹ 6,450 ಕೋಟಿಗೆ ಏರಿಕೆಯಾಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಮಾಹಿತಿ ನೀಡಿದೆ. ಎನ್‌ಪಿಎ ಪ್ರಮಾಣದಲ್ಲಿ ಇಳಿಕೆ ಆಗಿರುವುದರಿಂದ ಲಾಭ ಹೆಚ್ಚಾಗಿದೆ. ಒಟ್ಟಾರೆ ವರಮಾನವು ₹ 76,027 ಕೋಟಿಯಿಂದ ₹ 81,326 ಕೋಟಿಗೆ ಏರಿಕೆ ಕಂಡಿದೆ. ಸರಾಸರಿ ಎನ್‌ಪಿಎ ಶೇ 6.15ರಷ್ಟು ಇದ್ದಿದ್ದು ಶೇ 4.98ಕ್ಕೆ ಇಳಿಕೆ ಕಂಡಿದೆ. ಅದೇ ರೀತಿ ನಿವ್ವಳ ಎನ್‌ಪಿಎ ಶೇ 2.23ರಿಂದ ಶೇ 1.50ಕ್ಕೆ ಇಳಿಕೆಯಾಗಿದೆ. 2020–21ನೇ ಹಣಕಾಸು ವರ್ಷಕ್ಕೆ ಒಟ್ಟಾರೆ ಲಾಭವು ₹ 20,110 ಕೋಟಿಯಷ್ಟಾಗಿದೆ. 2019–20ಕ್ಕೆ ಹೋಲಿಸಿದರೆ ಶೇ 41ರಷ್ಟು ವೃದ್ಧಿಯಾಗಿದೆ.

ಲಾಭಾಂಶ: ಹಣಕಾಸು ವರ್ಷಕ್ಕೆ ಪ್ರತಿ ಷೇರಿಗೆ ₹ 4ರಂತೆ ಲಾಭಾಂಶ ನೀಡಲು ಬ್ಯಾಂಕ್‌ನ ಆಡಳಿತ ಮಂಡಳಿ ಶಿಫಾರಸು ಮಾಡಿದ್ದು ಪಾವತಿ ದಿನಾಂಕವನ್ನು ಜೂನ್ 18ಕ್ಕೆ ನಿಗದಿಪಡಿಸಲಾಗಿದೆ.

ಚಿನ್ನ ಏರಿಕೆ ಬೆಳ್ಳಿ ಇಳಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನದ ದರ 10ಗ್ರಾಂಗೆ ₹ 119ರಷ್ಟು ಏರಿಕೆ ಆಗಿದ್ದು, ₹ 47,995ರಂತೆ ಮಾರಾಟವಾಗಿದೆ. ಆದರೆ, ಬೆಳ್ಳಿ ಧಾರಣೆ ಕೆ.ಜಿ.ಗೆ ₹ 258ರಷ್ಟು ಇಳಿಕೆ ಆಗಿದ್ದು ₹ 71,256ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆಗೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿಯೂ ದರ ಹೆಚ್ಚಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	340

ಅಡಿಕೆ
ಬಂಟ್ವಾಳ

ಹೊಸತು	23500-40000
ಹಳತು	42500-50000

ಯಲ್ಲಾಪುರ

ಬಿಳಿಗೋಟು	29020-31060
ಚಾಲಿ	32075-36510

ರಾಮನಗರ ರೇಷ್ಮೆ ಧಾರಣೆ

ಮಿಶ್ರತಳಿ (ಸಿ.ಬಿ)	213-312
ದ್ವಿತಳಿ (ಬಿ.ವಿ)	303-385

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10500	10350	10350	150.95 ಸೆಂಟ್ಸ್
ಎಸಿ	4255	4000	3950	
ಆರ್‌ಪಿ	5100	5050	5150	ಲಂಡನ್
ಆರ್‌ಸಿ	3100	2970	2965	1490 ಡಾಲರ್ಸ್

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹510
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹510

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1560 (1570)
ಸೋಯಾ (ರಿಫೈನ್ಡ್)	₹1450 (1460)
ಸೂರ್ಯಕಾಂತಿ (ರಿಫೈನ್ಡ್)	₹1660 (1670)
ಪಾಮೋಲಿನ್	₹1343 (1345)

ಮುಂಬೈ ಧಾರಣೆ

ಶೇಂಗಾ
21-5-2021

ಜಾವಾ 70/80(ಹೊಸ)	9750-9800
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	10050-10100
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)


ಕಚ್ಚಾ (ತೆರಿಗೆ ಬಿಟ್ಟು)	1570 (1580)
ಒಂದು ವಾರದ ಡೆಲಿವರಿ	1565 (1575)
ಸೋಯಾ ಕಚ್ಚಾ	1400 (1420)
ಪಾಮ್ ವಾರದ ಡೆಲಿವರಿ	1341 (1343)
ಸೂರ್ಯಕಾಂತಿ ಎಣ್ಣೆ ಕಚ್ಚಾ	1620 (1620)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 48,400 (48,350)
ಬೆಳ್ಳಿ ಕೆ.ಜಿ 71,300 (71,525)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು 976



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,906
ಇಂದಿನ ಅಂತ್ಯ	15,175
▲	269
ದಿನದ ಗರಿಷ್ಠ	15,190

ವಿನಿಮಯ ದರ

$ ಡಾಲರ್	72.83
£ ಪೌಂಡ್	103.55
€ ಯುರೊ	89.08
¥ ಯೆನ್ (100ಕ್ಕೆ)	67